ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಸೆಪ್ಟೆಂಬರ್ 26 ಶುಕ್ರವಾರ 2025
46
ಸಂಪುಟ: 46 | ಸಂಚಿಕೆ: 160 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*
₹4

ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿ.,
ಶ್ರೀ ಹರ್ಷರಸ್ತೆ, ಮೈಸೂರು
ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ
ಬ್ಯಾಂಕ್‌ನ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ನನಗೆ ನಿಮ್ಮ ಅಮೂಲ್ಯವಾದ ಮತ ನೀಡಬೇಕಾಗಿ ಪ್ರಾರ್ಥನೆ.
(ಬ್ಯಾಂಕ್) ಪುಟ್ಟಸ್ವಾಮಿ ಎಂ.
ಮಾಜಿ ಅಧ್ಯಕ್ಷರು, ನಿಕಟ ಪೂರ್ವ ನಿರ್ದೇಶಕರು
ಮೊ: 9845116664
ಇಂತಿ ತಮ್ಮ ವಿಶ್ವಾಸಿ
ಎಂ.ಪ್ರದೀಪ್ ಪುಟ್ಟಸ್ವಾಮಿ
M.A. (Economics), PGD In Journalism, (LLB)
Ph: 9742889804
ವಿಜಯದಶಮಿ ಹಾಗೂ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು

ನಾಳೆ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅಂತರರಾಷ್ಟ್ರೀಯ ಉರ್ದು ಕವಿಗೋಷ್ಠಿ



ವಸ್ತುಪ್ರದರ್ಶನ ಪ್ರಾಧಿಕಾರ ಕಚೇರಿ ಆವರಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯುಲ್ಲಿ ಉರ್ದು ಕವಿಗೋಷ್ಠಿ(ಮುಷಾಯಿರ) ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಸೆ.25(ಜಿಎ)– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಮತ್ತು ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಸೆ.27ರಂದು ಅಂತರ ರಾಷ್ಟ್ರೀಯ ಗುಣಮಟ್ಟದ ಉರ್ದು ಕವಿ ಕಾವ್ಯ ವೈಭವ ಉರ್ದು ಕವಿಗೋಷ್ಠಿ (ಮುಷಾಯಿರ) ಆಯೋಜಿಸಲಾಗಿದೆ ಎಂದು ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ವಸ್ತುಪ್ರದರ್ಶನ ಪ್ರಾಧಿಕಾರ ಕಚೇರಿ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾಳಿಂಗ ರಾವ್ ಮಂಟಪದಲ್ಲಿ ಸಂಜೆ 7 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉರ್ದು ಕವಿಗೋಷ್ಠಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಜಮೀರ್ ಅಹಮ್ಮದ್ ಖಾನ್, ಶಾಸಕ ಟಿ.ಎಸ್.ಶ್ರೀವತ್ಸ ಆಗಮಿಸಲಿದ್ದಾರೆ ಎಂದರು. ಸಂಜೆ 7 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ನಡೆಯುವ ಕವಿಗೋಷ್ಠಿಯಲ್ಲಿ ಉರ್ದು ಶಾಯರಿಯ ವಿವಿಧ ಪ್ರಕಾರಗಳಲ್ಲಿ ದೇಶ–ವಿದೇಶಗಳಲ್ಲಿ ಖ್ಯಾತಿಗಳಿಸಿರುವ ಸಂಸತ್ ಸದಸ್ಯರೂ ಆದ ಇಮ್ರಾನ್ ಪ್ರತಾಪ್ ಘಡಿ, ಗುಜರಾತಿನ ಸಂಪತ್ ಸರಳ್, ಮೊಹಮ್ಮದ್ ನದೀಮ್ ಅಖ್ತಾರ್, ಮಾಣಿಕ್ ದುಬೆ, ಶಾಮ್ಸ್ ತಬ್ರೇಜ್ ಹಶ್ಮಿ, ಹಿಮಾನ್ಷಿ ಬಾಬ್ರ, ಅದಿಲ್ ರಶೀದ್, ಐಎಫ್‌ಎಸ್ ಅಧಿಕಾರಿಯಾದ ಡಾ. ಸುನೀಲ್ ಪಾನ್ವಾರ್ ವಾರ್ಸಿ, ತನ್ವೀರ್ ಅಹಮದ್ ಅಜೀಮ್, ಷಾ ಅಬ್ದುಲ್ ರಷೀದ್, ಮಿರ್ಜಾ ಅಬ್ಬಾಸ್ ಅಲಿ, ಅಬ್ದುಲ್ ಹಕೀಮ್, ಬಿಬಿ ಆಯಿಶಾ 14 ಕವಿಗಳು ಉರ್ದು ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯುಲ್ಲಿ ಕವಿಗೋಷ್ಠಿ ಉಪಸಮಿತಿ ಉಪವಿಶೇಷಾಧಿಕಾರಿ ಸೋಮಶೇಖರ್, ಕಾರ್ಯಾಧ್ಯಕ್ಷೆ ಲೋಲಾಕ್ಷಿ, ಅಧ್ಯಕ್ಷ ಸುರೇಶ್, ಮನೋತ್ಮಣಿ, ಮರಿದೇವಯ್ಯ, ಸುಹೇಲ್ ಬೇಗ್, ಅಕ್ರಮ್ ಮತ್ತಿತರರು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ದಸರಾ ಮುಂಗಡ ಹಣ ಬಿಡುಗಡೆಗೆ ಆಗ್ರಹ

ಮೈಸೂರು, ಸೆ.25(ಜಿಎ)–ಮೈಸೂರು ಸ್ವಚ್ಛತೆಗೆ ಶ್ರಮಿಸುತ್ತಿರುವ ಪೌರಕಾರ್ಮಿಕರು ದಸರಾ ವೇಳೆ ಹಬ್ಬಾಚರಣೆಗೆ ಹಣವಿಲ್ಲದೇ ಸಾಲ ಪಡೆಯಬೇಕಾದ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಪಾಲಿಕೆ ಪೌರಕಾರ್ಮಿಕರಿಗೆ ಪ್ರತಿ ವರ್ಷದಂತೆ ದಸರಾ ಮುಂಗಡ ಹಣ ಕೂಡಲೇ ಬಿಡುಗಡೆ ಮಾಡಬೇಕೆಂದು ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಕಾಯಂ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಆರ್ಟಿಸ್ಟ್ ಎಸ್.ನಾಗರಾಜ್ ಮಾತನಾಡಿ, ಕಳೆದ 6 ತಿಂಗಳಿನಿಂದ ಸಂಕಷ್ಟ ಭತ್ಯೆ ಬಾಕಿ ಉಳಿಸಿಕೊಳ್ಳಲಾಗಿದೆ. ಇದರಿಂದಾಗಿ ಪೌರ ಕಾರ್ಮಿಕರ ಜೀವನ ನಿರ್ವಹಣೆ ಕಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ಸಂಕಷ್ಟ ಭತ್ಯೆ ಹಾಗು ಮುಂಗಡ ಹಣ ಬಿಡುಗಡೆ ಮಾಡುವತ್ತ ಅಧಿಕಾರಿ ವರ್ಗ ಮುಂದಾಗಬೇಕು ಎಂದು ಒತ್ತಾಯಿಸಿದರು.

ಕೊರೊನಾ ಸಂದರ್ಭದಲ್ಲಿ ಹಿಂದಿನ ಸರ್ಕಾರ ಸಂಕಷ್ಟ ಭತ್ಯೆ ಯೋಜನೆ ಜಾರಿಗೊಳಿಸಿದೆ. ಆದರೆ ಪಾಲಿಕೆ ಇದನ್ನು ಸರಿಯಾಗಿ ಪಾಲಿಸುತ್ತಿಲ್ಲ. ಇಎಸ್‌ಐ, ಪಿಎಫ್ ವಂತಿಗೆ ಖಾತೆಗಳಿಗೆ ಜಮೆ ಆಗುತ್ತಿಲ್ಲ. ಇದರಿಂದಲೂ ತೊಂದರೆ ಆಗಿದೆ. ಹೀಗಾಗಿ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಆರ್.ದಾಸು, ಯತಿರಾಜ್, ಗಂಗಯ್ಯ, ನಾಗರಾಜು ಉಪಸ್ಥಿತರಿದ್ದರು.

ದಸರಾ ಕ್ರೀಡಾಕೂಟದಲ್ಲಿ ಗ್ರಾಮೀಣ ಪ್ರತಿಭೆ ದೇವಮ್ಮಗೆ ಚಿನ್ನದ ಪದಕ



ಮೈಸೂರು, ಸೆ.25(ಬಿಎಲ್‌ಆರ್)– ಮೈಸೂರು ದಸರಾ ಕ್ರೀಡಾಕೂಟದಲ್ಲಿ ಗ್ರಾಮೀಣ ಪ್ರತಿಭೆ ಕುಮಾರಿ ದೇವಮ್ಮ ಅವರು ಸಿ.ಎಂ ಕಪ್ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಪಡೆದು ಸಾಧನೆ ಮಾಡಿದ್ದಾರೆ.

ನಗರದ ಬನ್ನೂರು ರಸ್ತೆಯ ಎಟಿಎಂಇ ಕಾಲೇಜಿನ ವಿದ್ಯಾರ್ಥಿಯಾಗಿರುವ ಕುಮಾರಿ ದೇವಮ್ಮ ಮೂಲತಃ ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ದೇವಿಪುರ ಗ್ರಾಮದ ಬಡಕುಟುಂಬದ ಉದಯೋನ್ಮುಖ ಪ್ರತಿಭಾನ್ವಿತ ಕ್ರೀಡಾಪಟು ಆಗಿದ್ದಾರೆ. ನಗರದ ಚಾಮುಂಡಿವಿಹಾರ ಸ್ಟೇಡಿಯಂನಲ್ಲಿ ನಡೆದ ದಸರಾ ಕ್ರೀಡಾಕೂಟದಲ್ಲಿ ನಡೆದ ಸಿ.ಎಂ. ಕಪ್ ಬಿಲ್ಲುಗಾರಿಕೆ ಚಾಂಪಿಯನ್ ಶಿಪ್ ನಲ್ಲಿ ಕಂಚಿನ ಪದಕ, ಬೆಳ್ಳಿ ಪದಕ ಹಾಗೂ ಚಿನ್ನದ ಪದಕ ಪಡೆದಿದ್ದಾರೆ. ಈ ಮೊದಲು ಅಂತರರಾಜ್ಯ ಮಟ್ಟದಲ್ಲಿ ನಡೆದ ಸ್ಪರ್ಧೆಯಲ್ಲಿ ಕೂಡ ಕುಮಾರಿ ದೇವಮ್ಮ ಅದ್ವಿತೀಯ ಸಾಧನೆ ಮಾಡಿ ಹಲವು ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.09.2025 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಐಶ್ವರ್ಯ ರಿಯಾಲಿಟೀಸ್:** ಚಾಮುಂಡೇಶ್ವರಿ ಸೆಲೆಬ್ರಿಟಿ ಪ್ರೀಮಿಯರ್ ಲೀಗ್, ವೈಟ್ ಬಾಲ್ ಕ್ರಿಕೆಟ್ ಟೂರ್ನಮೆಂಟ್, ಸ್ಥಳ: ಗ್ಲೆಡ್ಸ್ ಮೈದಾನ, ಮೈಸೂರು ವಿವಿ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ಮಂಟಪೋತ್ಸವ, ಧ್ವಜಾರೋಹಣ, ಸಾಯಂಕಾಲ ಭೇರಿ ತಾಡನ, ಹಂಸವಾಹನೋತ್ಸವ, ಸ್ಥಳ : ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ಪಂಚಮಿ ಶ್ರೀ ರಾಜರಾಜೇಶ್ವರಿ ಅಲಂಕಾರ, ಶ್ರೀ ಲಲಿತಾ ಹೋಮ, ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 9ಕ್ಕೆ ಶ್ರೀ ದುರ್ಗಾ ಹೋಮ, ಶ್ರೀವಾರಾಹಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಗಮಕ ವಾಚನ–ವ್ಯಾಖ್ಯಾನ, ಸಂಜೆ 7 ರಿಂದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತು ವಿದುಷಿ ದಾಕ್ಷಾಯಿಣಿ ನಾಗೇಶ್‌ರಾವ್ ಅವರಿಂದ ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9 ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದುಷಿ ಸವಿತಾ ಶ್ರೀರಾಮ್ ಅವರಿಂದ ಕರ್ನಾಟಕ ಸಂಗೀತ ಗಾಯನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ಭವಾನಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ. ಊಟಿ ರಸ್ತೆ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಕೆ.ಎಸ್.ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡಿಕಾಯಾಗ ಸ್ಕಂದಮಾತಾದೇವಿಯ ಆರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.

■ **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಸ್ಕಂದಮಾತಾ, ಶ್ರೀವಿದ್ಯಾ ಶಬರಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಅಷ್ಟವಿನಾಯಕ ಹೋಮ ಮತ್ತು ಶ್ರೀ ವಾಂಛಾಕಲ್ಪಲತಾ ಶ್ರೀ ವಿದ್ಯಾ ಗಣೇಶ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್ .ಎಸ್., 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶ್ವ ಆಲ್ ರ್ಝುಮರ್ಸ್ ದಿನದ ಸಂಬಂಧವಾಗಿ ಆಲ್ ರ್ಝುಮರ್ಸ್ ಕಾಯಿಲೆಯ ಚಿಕಿತ್ಸೆಯಲ್ಲಿ ಇತ್ತೀಚಿನ ಬೆಳವಣಿಗೆಗಳು ಕುರಿತು ಡಾ. ಹನುಮಂತಾಚಾರ್ ಜೋಷಿ ಕೆ. ಅವರೊಂದಿಗೆ ಮಾತುಕತೆ ನಂತರ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಸಂದರ್ಭದಲ್ಲಿ ವಿಶ್ವವ್ಯಾಪಿ ಆಯುರ್ವೇದ ಕುರಿತು ತಿಳಿಸಿಕೊಡಲಿದ್ದಾರೆ ಡಾ. ಮಂಜುನಾಥ ಟಿ. ಎನ್., ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 'ಮೈಸೂರು ಬ್ರಾಂಡ್'–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ : ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 9.55 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಯುವ ಬರಹಗಾರರ ಯೋಜನೆ ಕುರಿತು ಪತ್ರಕರ್ತರಾದ ಎಂ. ವಿನೋದ್ ಅವರಿಂದ ಮಾಹಿತಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ದಸರಾ ಹಬ್ಬದ ಕುರಿತು ಕಾರ್ಯಕ್ರಮ ವೈವಿಧ್ಯ, ನಡೆಸಿಕೊಡುತ್ತಾರೆ ಮೈಸೂರಿನ ಪುರಂದರ ಭಜನಾ ಮಂಡಳಿ ಸದಸ್ಯೆಯರು, 4.30 ವೃತ್ತಿ ಮಾರ್ಗದರ್ಶನ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ಸಂಶೋಧನೆಯ ಅವಕಾಶಗಳು ಕುರಿತು ಕುಲಪತಿಗಳಾದ ಡಾ. ಶರಣಪ್ಪ ವಿ. ಹಲಸೆ ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹವಾಮಾನ ಮಿತ್ರ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಧ್ಯಾರಾಗ–ಆಕಾಶವಾಣಿಯ ಅತ್ಯಂತ ಕೇಳುಗ ಅಭಿಮಾನಿ ಹಾಗೂ ಹಿರಿಯರಾದ ಎಂ.ಎನ್. ಭಕ್ತ ವತ್ಸಲಂ ಅವರೊಂದಿಗೆ ಆತ್ಮೀಯ ಮಾತುಕತೆ. ಭಾಗವಹಿಸುತ್ತಾರೆ–ಜಿ. ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಜನಪದ ಸಂಗೀತ, 10.30 ಸವಿನೆನಪು

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ :** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಶ್ರೀ ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಲಲಿತಾ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಚೇತನಾ ಮಹಿಳಾ ಸಮಾಜ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಆವನೀ ಶೃಂಗೇರಿ ಮಠ, ಮೈಸೂರು ಶಾಖೆ, ವಿದ್ಯಾರಣ್ಯಪುರಂ.

■ **ಶ್ರೀ ರಾಜೀವ್ ಸ್ನೇಹ ಬಳಗ, ವಿಪ್ರ ಮಹಿಳಾ ಸಂಗಮ, ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್ :** ಮನೆ ಮನೆ ಗೊಂಬೆ ಸ್ಪರ್ಧೆ, ತೀರ್ಪುಗಾರರ ವೀಕ್ಷಣಾ ಸಮಯ : ಬೆಳಗ್ಗೆ 11 ರಿಂದ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು :** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ–ಡಾ. ಮಲ್ಲಿಕಾಘಂಟಿ, ಶ್ರೀವತ್ಸ ಜಿ.ಆರ್. ಮತ್ತು ತಂಡದಿಂದ ಜನಪದ ಗೀತೆಗಳ ಗಾಯನ, ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ಕ್ಕೆ

■ **ಮೈಸೂರು ಬೊಂಬೆ ರಂಗ ಮಂದಿರ :** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಯಲದ ಎದುರು, ಸಂಜೆ 4.30 ರಿಂದ.

■ **ಕರ್ನಾಟಕ ವೀಲ್‌ಚೇರ್ ಕ್ರಿಕೆಟ್ ಅಸೋಸಿಯೇಷನ್, ಸುರಕ್ಷಾ ಫೌಂಡೇಷನ್, ನೇಸರ ಸ್ವಯಂ ಸೇವಾ ಸಂಸ್ಥೆ ಅಭ್ಯುದಯ ಸೇವಾ ಸಂಸ್ಥೆ :** ರಾಜ್ಯ ಮಟ್ಟದ ವೀಲ್‌ಚೇರ್ ಕ್ರಿಕೆಟ್ ಪಂದ್ಯಾವಳಿ ದಸರಾ ಕಪ್, ಉದ್ಘಾಟನೆ : ಅಭ್ಯುದಯ ಸೇವಾ ಸಂಸ್ಥೆ ಅಧ್ಯಕ್ಷ ವೇದಾ ಜಗದೀಶ್, ಮುಖ್ಯ ಅತಿಥಿಗಳು: ಪಿಟಿಎಫ್‌ಐ ಅಧ್ಯಕ್ಷ ಜಿ.ಎಂ. ಸುರೇಶ್, ಕರ್ನಾಟಕ ರಾಜ್ಯ ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷ ಜಿ.ಸಿ. ವೀರರಾಜೇ ಅರಸ್, ಸಮಾಜ ಸೇವಕ ನಾರಾಯಣ್, ಸ್ವಾಭಿಮಾನಿ ವಿಶೇಷಚೇತನರ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ದಿಲೀಪ್, ರವಿಶಂಕರ್, ಆನಂದರಾಜ್, ಸಿದ್ದರಾಜೇ ಅರಸ್, ಶಶಿಧರ್, ಡಾ. ಆರ್. ಮಂಜುನಾಥ್, ಹೆಚ್.ಪಿ. ಮಂಜುನಾಥ್, ಶಿವು, ಮಣಿ, ತೇಜುಗೌಡ, ಕುಮಾರ್, ಮಂಜುನಾಥ್, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷ ರಾಮಚಂದ್ರು, ಸ್ಥಳ:ಸಪ್ತಪದಿ ಕಲ್ಯಾಣ ಮಂಟಪ, ವಿಜಯನಗರ 2ನೇ ಹಂತ, ಬೆಳಗ್ಗೆ 10ಕ್ಕೆ.

ಮಾಜಿ ಮೇಯರ್ ಸಂದೇಶ್ ಸ್ವಾಮಿ ಹುಟ್ಟುಹಬ್ಬ



ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರಿಗೆ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಇನ್ನಿತರರು ಹುಟ್ಟುಹಬ್ಬದ ಶುಭ ಹಾರೈಸಿದರು



ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರಿಗೆ ಅಭಿಮಾನಿಗಳು ಹುಟ್ಟುಹಬ್ಬದ ಶುಭ ಕೋರಿದರು

ಏಷ್ಯಾಕಪ್-2025: ಸೋತ ಬಾಂಗ್ಲಾ

ಸೆ.28ಕ್ಕೆ, ಭಾರತ–ಪಾಕಿಸ್ತಾನ ನಡುವೆ ಫೈನಲ್

ದುಬೈ, ಸೆ.25– ದುಬೈನಲ್ಲಿ ನಡೆಯುತ್ತಿರುವ ಏಷ್ಯಾಕಪ್ ಟಿ20 ಟೂರ್ನಿಯಲ್ಲಿ ಬದ್ಧ ಎದುರಾಳಿಗಳಾದ ಭಾರತ–ಪಾಕಿಸ್ತಾನ ನಡುವಿನ ಫೈನಲ್ ಪಂದ್ಯಕ್ಕೆ ವೇದಿಕೆ ಸಿದ್ಧವಾಗಿದೆ.

ಮಾಡು ಇಲ್ಲವೇ ಮಡಿ ಎಂಬಂತಿದ್ದ ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ 11 ರನ್‌ಗಳ ಜಯ ದಾಖಲಿಸಿದ ಪಾಕಿಸ್ತಾನ ಫೈನಲ್ ಪ್ರವೇಶಿಸಿದ್ದು, ಸೆ.28ರಂದು ಪ್ರಶಸ್ತಿಗಾಗಿ ಭಾರತದ ವಿರುದ್ಧ ಕಾದಾಡಲಿದೆ. ಈಗಾಗಲೇ ಭಾರತ ಟೂರ್ನಿಯ ಲೀಗ್ ಹಾಗೂ ಸೂಪರ್–4 ಹಂತದಲ್ಲಿ ಪಾಕಿಸ್ತಾನವನ್ನು ಮಣಿಸಿರುವುದರಿಂದ ಫೈನಲ್ ಪಂದ್ಯದ ರೋಚಕತೆ ಮತ್ತಷ್ಟು ಹೆಚ್ಚಾಗಿದೆ.

ಇಲ್ಲಿನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 135 ರನ್ ಪೇರಿಸಿತು. ತಂಡದ ಪರ ಮೊಹಮ್ಮದ್ ಹ್ಯಾರೀಸ್ 31, ಮೊಹಮ್ಮದ್ ನವಾಜ್ 25, ಸಲ್ಮಾನ್ ಆಘ, ಶಹೀನ್ ಆಫ್ರಿದಿ ತಲಾ 19, ಫಯಿಮ್ ಆಶ್ರಫ್ 14, ಫಖಾರ್ ಜಮಾನ್ 13 ರನ್ ಗಳಿಸಿದರು. ಬಾಂಗ್ಲಾ ಪರ ಟಸ್ಕಿನ್ ಅಹ್ಮದ್ 3, ಮಹೆದಿ ಹಸನ್ ಮತ್ತು ರಿಶಾದ್ ಹುಸೈನ್ ತಲಾ 2, ಮುಸ್ತಫಿಜುರ್ 1 ವಿಕೆಟ್ ಪಡೆದರು.

ಪಾಕಿಸ್ತಾನ ನೀಡಿದ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 124 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಶಮೀಮ್ ಹುಸೇನ್ 30, ಸೈಫ್ ಹಸನ್ 18, ಮೆಹದಿ ಹಸನ್ 11, ನೂರುಲ್ ಹಸನ್, ರಿಶಾದ್ ಹುಸೈನ್ ತಲಾ 16, ತಂಜಿಮ್ ಹಸನ್ ಸಕಿಬ್ 10 ರನ್ ಗಳಿಸಿದರು. ಪಾಕಿಸ್ತಾನದ ಪರ ಶಾಹಿನ್ ಶಾ ಅಫ್ರಿದಿ ಮತ್ತು ಹ್ಯಾರಿಸ್ ರೌಫ್ ತಲಾ 3, ಸೈಮ್ ಅಯೂಬ್ 2, ಮೊಹಮ್ಮದ್ ನವಾಜ್ 1 ವಿಕೆಟ್ ಉರುಳಿಸಿದರು. ಶಾಹಿನ್ ಶಾ ಅಫ್ರಿದಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಎಸ್.ಎಲ್.ಭೈರಪ್ಪ ಅವರಿಗೆ ಸಂತಾಪ



ಮೈಸೂರಿನ ಯುವರಾಜ ಕಾಲೇಜಿನಲ್ಲಿ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಸಂತಾಪ ಸೂಚಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲ ಪ್ರೊ ಎಸ್.ಮಹದೇವಮೂರ್ತಿ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ. ಡಿ.ಪರಶುರಾಮ, ಪ್ರೊ.ಕೃಷ್ಣಮೂರ್ತಿ, ಪ್ರೊ.ರೇಖಾ, ಪ್ರೊ.ಕೋಕಿಲ, ಪ್ರೊ. ಜಯಂತ್, ಪ್ರೊ.ವಿದ್ಯಾ, ಪ್ರೊ.ನಾಗೇಶ್ ಬಾಬು, ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾವಪೂರ್ಣ ನಮನ ಸಲ್ಲಿಸಿದರು.

ಡಿ. ಲಕ್ಷ್ಮಿಪತಿ ನಿಧನ



ಮೈಸೂರು, ಸೆ.25– ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆಯ ನಿವಾಸಿ ಡಿ.ಲಕ್ಷ್ಮಿಪತಿ (67) ಅವರು ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ವಸಂತಮ್ಮ, ಮಕ್ಕಳಾದ ಎಲ್.ಪ್ರದೀಪ್, ಎಲ್.ಸೌಮ್ಯ, ಶ್ರೀ ದುರ್ಗಾದೇವಿ ಸೇವಾ ಸಮಿತಿಯ ಉಪ ಕಾರ್ಯದರ್ಶಿ ಎಲ್.ದಿಲೀಪ್‌ಕುಮಾರ್, ಅಳಿಯ ಪ್ರಶಾಂತ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಇಂದು (ಗುರುವಾರ) ಮಧ್ಯಾಹ್ನ ಮೈಸೂರಿನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವಮ್ಮ



ಮೈಸೂರು, ಸೆ.25– ಮೈಸೂರು ಪ್ರಶಾಂತನಗರದ ದಿವಂಗತ ರಾಜಪ್ಪ ಅವರ ಪತ್ನಿ ಶಿವಮ್ಮ(90) ಅವರು ಗುರುವಾರ ಮಧ್ಯಾಹ್ನ ನಿಧನರಾದರು. ಇವರು ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಡ್ಯದ ಮಳವಳ್ಳಿ ತಾಲೂಕು ಹೊಸಹಳ್ಳಿಯಲ್ಲಿರುವ ಸ್ವಂತ ಜಮೀನಿನಲ್ಲಿ ಶುಕ್ರವಾರ ಮ.1ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 26 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 160 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಒಳಪುಟಗಳಲ್ಲಿ

ಜಾತಿಗಣತಿಗೆ ತಡೆ ಇಲ್ಲ

ಷರತ್ತಿನನ್ವಯ ಸಮೀಕ್ಷೆಗೆ ಹೈಕೋರ್ಟ್ ಸೂಚನೆ

ಬೆಂಗಳೂರು, ಸೆ.25(ಕೆಎಂಶಿ)– **ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಗಣತಿ ಕಾರ್ಯಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿರುವ ರಾಜ್ಯ ಹೈಕೋರ್ಟ್, ಸಮೀಕ್ಷೆ ಮುಂದುವರಿಸಲು ಷರತ್ತು ಬದ್ಧ ಅನುಮತಿ ನೀಡಿದೆ.**

ರಾಜ್ಯ ಸರ್ಕಾರ ಯಾವುದೇ ಪೂರ್ವ ತಯಾರಿ ಇಲ್ಲದೆ ಆತುರಾತುರವಾಗಿ ಸಮೀಕ್ಷೆ ನಡೆಸುತ್ತಿದೆ ಎಂದು ಆರೋಪಿಸಿ ಅಖಿಲ ಭಾರತ ಬ್ರಾಹ್ಮಣ ಸಭಾ, ವೀರಶೈವ ಮಹಾಸಭಾ, ರಾಜ್ಯ ಒಕ್ಕಲಿಗರ ಸಂಘ ಸೇರಿದಂತೆ ಹಲವು ಸಂಘಟನೆಗಳು ಹೈಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿದ್ದವು. ಈ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿಗಳಾದ ವಿಭು ಬಖ್ರು ಮತ್ತು ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ಪೀಠ ಸಮೀಕ್ಷೆ ಮುಂದುವರೆಸಲು ಹಸಿರುನಿಶಾನೆ ತೋರಿದೆ. ಆದರೆ, ಈ ವೇಳೆ ಐದು ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸಬೇಕು ಎಂದು ಸರ್ಕಾರ ಮತ್ತು ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ ನೀಡಿದೆ.

ಸಮೀಕ್ಷೆಯ ಪರ ಮತ್ತು ವಿರುದ್ಧವಾಗಿ ನಡೆದ ಸುದೀರ್ಘ ವಿಚಾರಣೆಯನ್ನು ಆಲಿಸಿದ ನ್ಯಾಯಪೀಠ, ಅಂತಿಮವಾಗಿ ಸಾರ್ವಜನಿಕಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ನಡೆಯುತ್ತಿರುವ ■6ನೇ ಪುಟಕ್ಕೆ

–:ಷರತ್ತುಗಳು:–

- ದತ್ತಾಂಶವನ್ನು ಸರ್ಕಾರ ಸೇರಿ ಯಾರಿಗೂ ಬಹಿರಂಗಪಡಿಸಬಾರದು.
- ದತ್ತಾಂಶದ ಗೌಪ್ಯತೆಯನ್ನು ಹಿಂದುಳಿದ ವರ್ಗಗಳ ಆಯೋಗ ರಕ್ಷಿಸಬೇಕು.
- ಜನರು ಸ್ವಯಂಪ್ರೇರಣೆಯಿಂದ ನೀಡಿದರಷ್ಟೇ ಮಾಹಿತಿ ಪಡೆಯಬೇಕು.
- ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು.
- ಮಾಹಿತಿ ನೀಡುವಂತೆ ಜನರಿಗೆ ಯಾವುದೇ ಒತ್ತಡ ಹಾಕಬಾರದು.

ಶ್ರೀರಂಗಪಟ್ಟಣ ದಸರಾ ಜಂಬೂಸವಾರಿ



ಗುರುವಾರ ಶ್ರೀರಂಗಪಟ್ಟಣ ದಸರಾ ಅಂಗವಾಗಿ ಅದ್ದೂರಿ ಜಂಬೂಸವಾರಿ ನಡೆಯಿತು. [ಮತ್ತಷ್ಟು ಸಚಿತ್ರ ವರದಿ ಪುಟ–6ರಲ್ಲಿ]

ಮೈಸೂರಲ್ಲಿ ಎಸ್.ಎಲ್.ಭೈರಪ್ಪನವರ ಪಾರ್ಥಿವ ಶರೀರ; ಅಪಾರ ಜನ ನಮನ

ಇಂದು ಬೆಳಗ್ಗೆ 11ಕ್ಕೆ ಚಾಮುಂಡಿಬೆಟ್ಟ ತಪ್ಪಲು ಚಿತಾಗಾರದಲ್ಲಿ ಅಂತ್ಯಸಂಸ್ಕಾರ

ಮೈಸೂರು, ಸೆ.25(ಎಸ್‌ಬಿಡಿ)– ಅಗಲಿದ ಮಹಾಚೇತನ ಡಾ.ಎಸ್.ಎಲ್. ಭೈರಪ್ಪ ಅವರ ಪಾರ್ಥಿವ ಶರೀರವನ್ನು ಗುರುವಾರ ಮೈಸೂರಿನ ಕಲಾಮಂದಿರದ ಕಿಂದರಜೋಗಿ ಆವರಣದಲ್ಲಿ ಅಂತಿಮ ದರ್ಶನಕ್ಕಿಡಲಾಗಿತ್ತು.



ಡಾ.ಎಸ್.ಎಲ್.ಭೈರಪ್ಪ


ಬೆಂಗಳೂರಿನ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಬುಧವಾರ ಮಧ್ಯಾಹ್ನ ನಿಧನರಾದ ಎಸ್.ಎಲ್. ಭೈರಪ್ಪ ಅವರ ಪಾರ್ಥಿವ ಶರೀರವನ್ನು ಇಂದು ಬೆಳಗ್ಗೆ ಅಲ್ಲಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಅಂತಿಮ ದರ್ಶನಕ್ಕಿಟ್ಟು, ನಂತರ ಮಧ್ಯಾಹ್ನ 3.40ರ ವೇಳೆಗೆ ರಾಷ್ಟ್ರೋತ್ಥಾನ ಆಂಬುಲೆನ್ಸ್‌ನಲ್ಲಿ ಮೈಸೂರಿಗೆ ತರಲಾಯಿತು. ■6ನೇ ಪುಟಕ್ಕೆ



ಡಾ.ಎಸ್.ಎಲ್.ಭೈರಪ್ಪನವರ ಪಾರ್ಥಿವ ಶರೀರವನ್ನು ಕಲಾಮಂದಿರ ಆವರಣದಿಂದ ಆಸ್ಪತ್ರೆಯ ಶೈತ್ಯಾಗಾರಕ್ಕೆ ರವಾನಿಸುವ ವೇಳೆ ಶಾಸಕರಾದ ಜಿ.ಟಿ.ದೇವೇಗೌಡರು, ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್, ಎಡಿಸಿ ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುದರ್ಶನ್ ಮತ್ತಿತರರಿದ್ದರು.

ಮೈಸೂರಲ್ಲಿ ಭೈರಪ್ಪನವರ ಸ್ಮಾರಕ

ಬೆಂಗಳೂರು, ಸೆ.25(ಕೆಎಂಶಿ)– ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಸ್.ಎಲ್.ಭೈರಪ್ಪನವರ ಸ್ಮಾರಕವನ್ನು ಮೈಸೂರಿನಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಇಂದಿಲ್ಲಿ ಪ್ರಕಟಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ಭೈರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭೈರಪ್ಪನವರ ನಿಧನದಿಂದ ಸಾರಸ್ವತ ಲೋಕ ಬಡವಾಗಿದೆ. ಸುಮಾರು 25 ಕಾದಂಬರಿ ಬರೆದಿದ್ದು, ಮೈಸೂರು ಅವರ ಕರ್ಮಸ್ಥಳ, ಅವರ ಕಾದಂಬರಿಗಳು ವಿದೇಶ ಸೇರಿದಂತೆ 40 ಭಾಷೆಗಳಿಗೆ ತರ್ಜುಮೆಯಾಗಿದ್ದು, ಇಷ್ಟು ಸಂಖ್ಯೆಯಲ್ಲಿ ಸಾಹಿತಿಯೊಬ್ಬರ ಕೃತಿಗಳು ತರ್ಜುಮೆಯಾಗಿರುವುದು ಅಪರೂಪ ಎಂದರು.



ಸಿದ್ದರಾಮಯ್ಯ

ಬೋಧನಾ ವೃತ್ತಿಯಲ್ಲಿದ್ದು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಆತ್ಮತೃಪ್ತಿಗಾಗಿ ಬದುಕಿನ ಅನುಭವ ಆಧರಿಸಿ ಕಾದಂಬರಿಗಳನ್ನು ಬರೆಯುತ್ತಿದ್ದರು. ಅವರ ಕೃತಿಗಳು ಜಗತ್ಪ್ರಸಿದ್ಧವಾಗಿವೆ.

ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ಭೈರಪ್ಪ, ನಾಡು ಕಂಡ ಶ್ರೇಷ್ಠ ಸಾಹಿತಿ, ಯಾವುದೇ ಪ್ರಶಸ್ತಿಗೆ ಹಂಬಲಿಸದ ಅವರ ಸಾಹಿತ್ಯ ಕೊಡುಗೆ ಪರಿಗಣಿಸಿ ಜ್ಞಾನಪೀಠ ಪ್ರಶಸ್ತಿ ನೀಡಿದ್ದರೆ ಉತ್ತಮವಾಗಿತ್ತು ಎಂದರು. ಪದ್ಮಭೂಷಣ ಸೇರಿದಂತೆ ಹಲವು ಪ್ರಶಸ್ತಿಗಳು ಲಭ್ಯವಾಗಿವೆ. ಅವರು ಬರೆದ ಕೃತಿಗಳು ವಿಶ್ವದ 40ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿವೆಯೆಂದರೆ, ಅವರು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿರುವುದಕ್ಕೆ ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ ಬಾರ್‌ನಲ್ಲಿ ಕುಳಿತು ಅಳ್ತಾ ಇದ್ದ

ವೇಟರ್ : ಯಾಕೆ ಅಳ್ತಿದೀರಾ?

ಗುಂಡ : ಹುಡ್ಗಿನ ಮರಿಬೇಕು ಅಂತ ಇದ್ದೆ. ಆದ್ರೆ ಆ ಹುಡುಗಿ ಯಾರು ಅಂತ ನೆನಪಿಗೆ ಬರ್ತಾ ಇಲ್ಲ...!

ಮೈಸೂರು ಮಿತ್ರ

ಶುಕ್ರವಾರ, 26 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಾಲ್ಕು ಜನ ನಿನ್ನನ್ನು ನೋಡುತ್ತಾರೆ ಎಂದು ಬದುಕಬೇಡ. ನಿನ್ನನ್ನು ತಿರಸ್ಕರಿಸಿ ಬಿಟ್ಟು ಹೋದ ನಾಲ್ಕು ಜನ ತಿರುಗಿ ನೋಡುವಂತೆ ಬದುಕು!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ

ನಿಮ್ಮ ಪತ್ರಗಳು

ಅನ್ವೇಷಣೆಯಲ್ಲಿ ಹೊರಟ ಬೈರಪ್ಪನವರು

ಮಾನ್ಯರೆ,

ಬದುಕಿನ ಯಾನದಲ್ಲಿ ಶಾಶ್ವತ ನೆಲೆಯಾದವರು ಯಾರು?
ಸಾಧಕರಿಗೆ ಸಾವಿಲ್ಲ ಅವರ ಕೆಲಸಗಳು ಇರುವವರೆಗೂ....
ಬೈರಪ್ಪನವರನ್ನು ಇನ್ನಿಲ್ಲ ಎನ್ನಲಾಗದು ಅವರ ಕೃತಿಗಳ
ಪರ್ವದವರಿಗೆ, ಅಕ್ಷರಗಳು ಜೀವಂತ ಇರುವವರೆಗೂ...!

ಇದ್ದಷ್ಟು ಕಾಲ ಬಿತ್ತಿ ಬೆಳೆದರು ಸಾಹಿತ್ಯದ ಸಮೃದ್ಧ ಫಸಲು,
ದೂರ ಸರಿದರು ತೋರುಮರವಾಗಿ ನಿಂತು ಧರ್ಮಶ್ರೀ,
ಭೀಮಕಾಯನಾಗಿ ಬೆಳಕು ಮೂಡಿಸಿದರು ಅಕ್ಷರ ಲೋಕಕ್ಕೆ
ಗ್ರಹಣ ಹಿಡಿದಂತಾಗಿದೆ ಕನ್ನಡಿಗರಿಗೆ ಭಗೀರಥನ ಅಗಲಿಕೆಯು!

ಜೀವನದ ಸಾರ ಅರಿಯಲು ಅನ್ವೇಷಣೆಯಲ್ಲಿಯೇ ಜೀವಿಸಿದರು,
ಹುಟ್ಟೂರು ಸಂತೇಶಿವರವಾದರೂ ಮೈಸೂರಿನಲ್ಲಿ ನೆಲೆಯಾದರು
ಕವಲು ದಾರಿ ಬಿಟ್ಟು ಕಾದಂಬರಿಗಳ ಹೆದ್ದಾರಿಗೆ ಸಾಕ್ಷಿ ಇವರು
ದ್ರೌಪದಿ, ಕುಂತಿ, ಗಾಂಧಾರಿಯನ್ನು ಪರ್ವದಲ್ಲಿ ಕರೆತಂದರೆ
ಮಹಾಸತಿ ವೈದೇಹಿಯನ್ನು ಉತ್ತರಕಾಂಡದಲ್ಲಿ ಮೆರೆಸಿದರು!

ನೀವಿಲ್ಲದೆ ಗೃಹಭಂಗವಾಗಿದೆ ಕನ್ನಡಕ್ಕೆ, ಕಲೆಯ ಅಭಿರುಚಿ ಬೆಳೆಸಿ
ತಂತುವಿನಿಂದ ಕಟ್ಟಿ ಇಂದು ವಂಶವೃಕ್ಷದ ಕುಡಿ ಸ್ವರ್ಗಸ್ಥವಾಗಿದೆ,
ಮತ್ತೊಮ್ಮೆ ಹುಟ್ಟಿ ಬರಲೆಂಬ ನಿರೀಕ್ಷಣೆಯ ಆವರಣದಲ್ಲಿ ನಾವು
ನಿಮ್ಮ ಕಾದಂಬರಿಗಳ ಪುಟಗಳನ್ನು ಮತ್ತೆ ಮತ್ತೇ ತಿರುವಿಹಾಕುತ್ತಿದ್ದೇವೆ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು

ಎಸ್.ಎಲ್. ಭೈರಪ್ಪ : ಸದಾ ಪ್ರೇರಣೆ



ಮಾನ್ಯರೆ,

ಕನ್ನಡದ ಮಹಾನ್ ಸಾಹಿತ್ಯ ದಿಗ್ಗಜ ಎಸ್.ಎಲ್. ಭೈರಪ್ಪರವರ ಅಗಲಿಕೆಯಿಂದ ಭಾರತೀಯ ಸಾಹಿತ್ಯ ಲೋಕವು ಅಪ್ರತಿಮ ಬುದ್ಧಿಜೀವಿಯನ್ನು ಕಳೆದುಕೊಂಡಂತಾಗಿದೆ. ಅವರ ಕೃತಿಗಳು ಕೇವಲ ಕಾದಂಬರಿಗಳಷ್ಟೇ ಅಲ್ಲ ಅವು ತತ್ವಚಿಂತನೆಯ ಆಳವಾದ ಸಂಶೋಧನೆಗಳು. ಓದುಗರನ್ನು ಆತ್ಮಾವಲೋಕನದ ಗಾಢ ಪ್ರಮಾಣಕ್ಕೆ ಕರೆದುಕೊಂಡು ಹೋಗುವ ಕೃತಿಗಳಾಗಿದ್ದವು.

ಪರ್ವ, ಗೃಹಭಂಗ ಮೊದಲಾದ ಮಹಾಕೃತಿಗಳ ಮೂಲಕ ಅವರು ಪೌರಾಣಿಕ ಮತ್ತು ಐತಿಹಾಸಿಕ ಕಾದಂಬರಿಗಳನ್ನು ಹೊಸ ರೀತಿಯಲ್ಲಿ ರಚಿಸಿದವರು. ಭೈರಪ್ಪರಿಗೆ ಗಾಢವಾದ ಅಧ್ಯಯನವನ್ನು ಕಥನಶೈಲಿಯೊಂದಿಗೆ ಬೆರೆಸುವ ಅಪರೂಪದ ಶಕ್ತಿ ಇತ್ತು. ಅವರ ಬರಹಗಳು ಗಂಭೀರ ತತ್ವಗಳನ್ನು ಸಹ ಸಾಮಾನ್ಯ ಓದುಗರಿಗೆ ಅರ್ಥವಾಗುವಂತೆ ಮಾಡುತ್ತಿದ್ದವು.

ಭಾರತೀಯ ಸಂಸ್ಕೃತಿ, ಹಿಂದೂ ತತ್ವಶಾಸ್ತ್ರ ಮತ್ತು ಮಾನವ ಸ್ವಭಾವದ ಆಳವಾದ ಅರಿವಿನಿಂದ ಅವರ ಕೃತಿಗಳು ಕಾಲಾತೀತವಾದವು. ಕನ್ನಡ ಸಾಹಿತ್ಯವಷ್ಟೇ ಅಲ್ಲ, ಭಾರತೀಯ ಚಿಂತನೆಯೇ ಒಂದು ವಿಶಿಷ್ಟ ಸ್ವರವನ್ನು ನಾವು ಕಳೆದುಕೊಂಡಿದ್ದೇವೆ. ಬೈರಪ್ಪರವರ ಬೌದ್ಧಿಕ ಪರಂಪರೆ ಮುಂದಿನ ಪೀಳಿಗೆಯ ಬರಹಗಾರರಿಗೂ ಚಿಂತಕರಿಗೂ ಸದಾ ಪ್ರೇರಣೆಯಾಗಿಯೇ ಉಳಿಯುತ್ತದೆ.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಪರ್ವಕಾಲ ಮುಗಿಸಿದ ಎಸ್.ಎಲ್. ಭೈರಪ್ಪ

ಮಾನ್ಯರೆ,

ಕನ್ನಡ ಭಾಷೆಯೆಂಬ ಆಕಾಶದಲ್ಲಿ ನಕ್ಷತ್ರಗಳೆಂಬ ಹಲವಾರು ಕವಿಗಳಿದ್ದರು ಅದರಲ್ಲಿ ಸದಾ ಮಿನುಗುವ ನಕ್ಷತ್ರಗಳಲ್ಲಿ ಎಸ್.ಎಲ್. ಬೈರಪ್ಪ ಕೂಡ ಒಬ್ಬರು.

ಸಾವಿಗೆ ಸಿದ್ಧಾಂತವಿಲ್ಲ, ಅದು ಎಡ–ಬಲ ಯಾವುದೇ ಸಿದ್ಧಾಂತವಿದ್ದರು ಸಾವಿನ ನಂತರ ಅದಕ್ಕೆ ಬೆಲೆಯಿಲ್ಲ. ಎಸ್.ಎಲ್.ಭೈರಪ್ಪ ಕನ್ನಡ ನಾಡು ಕಂಡ ಅದ್ಭುತ ಕವಿಗಳಲ್ಲಿ ಒಬ್ಬರು, ಪ್ರತಿಯೊಬ್ಬರು ಗೌರವಿಸುವ ಕವಿಗಳಲ್ಲಿ ಇವರು ಒಬ್ಬರು.

ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ ಇದು ಇವರ ಪೂರ್ಣನಾಮ ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು. ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಬರೆದಿರುವ ಇವರ ಕೃತಿಗಳು ಇಂಗ್ಲೀಷ್ ಹಾಗೂ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಇವರ ಖ್ಯಾತಿಗೆ ಕಾರಣವಾಗಿದೆ.

ಇವರ ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಮತದಾನ ಕಾದಂಬರಿಗಳು ಚಲನಚಿತ್ರವಾಗಿ ಪ್ರಶಸ್ತಿ ಗಳಿಸಿವೆ. ವಂಶವೃಕ್ಷಕ್ಕೆ 1966ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 1975ರಲ್ಲಿ ದಾಟು ಕಾದಂಬರಿಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

'ಪರ್ವ' ಭೈರಪ್ಪನವರು ರಚಿಸಿದ ಕಾದಂಬರಿಗಳಲ್ಲೇ ಭಾರೀ ಚರ್ಚೆಗೆ ಒಳಗಾದದ್ದು. ಮಹಾಭಾರತ ಕಾಲದ ಭಾರತೀಯ ಸಮಾಜದ ರೀತಿ ನೀತಿಗಳನ್ನೂ, ಆ ಕಾಲದ ಜೀವನ ಮೌಲ್ಯಗಳನ್ನು, ಮೃತ್ಯುವಿನ ರಹಸ್ಯಾತ್ಮಕತೆಯನ್ನು ಕಾದಂಬರಿಯಲ್ಲಿ ಅರ್ಥಪೂರ್ಣವಾಗಿ ಬಿಂಬಿಸಲಾಗಿದೆ. ಎಸ್.ಎಲ್. ಭೈರಪ್ಪನವರು ತಮ್ಮ 94 ವರ್ಷದ ವಯಸ್ಸಿನಲ್ಲಿ ನಮ್ಮನ್ನು ಅಗಲಿರುವುದು ಕನ್ನಡನಾಡು ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವೆಂದರೆ ಅತಿಶಯೋಕ್ತಿಯಾಗಲಾರದು.

–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ


ಮಾನ್ಯರೆ,

ಭೈರಪ್ಪನವರ ಅಗಲಿಕೆ ಕನ್ನಡ ಸಾಹಿತ್ಯಕ್ಕೆ ತುಂಬಲಾರದ ನಷ್ಟ, ಬಡತನವನ್ನೇ ಅರೆದು ಕುಡಿದಿದ್ದರೂ ಸರಸ್ವತಿಯ ಅನುಗ್ರಹದಿಂದ ಅಧ್ಯಯನಶೀಲ ವ್ಯಕ್ತಿತ್ವದಿಂದ ಬದುಕು, ಸಮಾಜದ ಸಂಕೀರ್ಣ ಮೌಲ್ಯಗಳ ಬಗ್ಗೆ ಬೆಳಕು ಚೆಲ್ಲಿದ ಮಹಾಚೇತನ. ಸಾರಸ್ವತ ಲೋಕದ ನಷ್ಟ ಎಂದರೆ ಇಂತಹ ವ್ಯಕ್ತಿತ್ವಗಳು ಮತ್ತೆ ಮತ್ತೆ ಅವತರಿಸುವುದು ಅಪರೂಪ.

ವಿರೋಧಿಗಳ ಕುರುಡು ದ್ವೇಷದ ನಡುವೆಯೂ ತಾವು ನಂಬಿದ ವೈಚಾರಿಕ ಮೌಲ್ಯಗಳನ್ನು ದೃಢವಾಗಿ ತಮ್ಮ ಸಾಹಿತ್ಯದಲ್ಲಿ ಪ್ರತಿಪಾದಿಸಿದ ಇವರ ಕೊಡುಗೆ ಅನನ್ಯ. ಹೊಸ ಪೀಳಿಗೆಗೆ ಇವರ ಮಾರ್ಗದರ್ಶನ ಅಗತ್ಯವಿತ್ತು. ಕಾಲನ ಕರೆಗೆ ಓಗೊಡಲೇ ಬೇಕಾದ ಅನಿವಾರ್ಯತೆಯಲ್ಲೂ ತುಂಬು ಜೀವನ ನಡೆಸಿದ ಮಹಾನ್ ವ್ಯಕ್ತಿಗೊಂದು ಹೃದಯಪೂರ್ವಕ ವಿದಾಯ.

–ದಿನೇಶ್ ಅಡಿಗ, ಮೈಸೂರು.

ಸಾಹಿತ್ಯ ರಂಗದ ದಿಟರು... ದಿಟ್ಟರು ನಮ್ಮ ಭೈರಪ್ಪನವರು!



ಅದು 1981.

ದೇಹವನ್ನು ಕಟು ಮಸ್ತಾಗಿರಿಸಿಕೊಳ್ಳಬೇಕೆಂಬ ಹೆಬ್ಬಯಕೆ ಕಾಲ. ಬೆಳಿಗ್ಗೆ ನಾಲ್ಕೂವರೆಗೇ ಎದ್ದು ಟೌನ್‌ಹಾಲ್‌ನಲ್ಲಿ ಒಂದು ಗಂಟೆ ಜಿಮ್ ಮಾಡಿ ಆರು ಗಂಟೆಗೆ ಈಜುಕೊಳಕ್ಕೆ ಬರುತ್ತಿದ್ದೆ. ಮಳೆ, ಚಳಿ ಲೆಕ್ಕವಿಲ್ಲ. ಅಲ್ಲೊಬ್ಬರು ಹಿರಿಯರು ಆರು ಗಂಟೆ ಅಂದರೆ ಆರು ಗಂಟೆಗೆ ಕರೆಕ್ಟಾಗಿ ಈಜು ಕೊಳಕ್ಕೆ ಇಳಿದಿರುತ್ತಿದ್ದರು. ಅವರ ಪಾಡಿಗೆ ಅವರು ಕೆಲ ಹೊತ್ತು ಈಜಿ ಬಳಿಕ ಸ್ನಾನಕ್ಕೆ ಬರೋರು. ಸರಸ್ವತಿಪುರಂನಲ್ಲಿದ್ದ ವಿಶ್ವವಿದ್ಯಾನಿಲಯದ ಈಜುಕೊಳ ಅದು. ಪ್ರತ್ಯೇಕ ಸ್ನಾನದ ಮನೆಗಳೇನು ಇರಲಿಲ್ಲ. ಈಜು ಮುಗಿಸಿದವರಿಗಾಗಿ ಮೂರ್ನಾಲ್ಕು ಷವರ್ ಇತ್ತು. ಜೊತೆಯಲ್ಲಿ ಈಜಿ, ಜೊತೆಯಲ್ಲೇ ಅಕ್ಕ–ಪಕ್ಕ ಸ್ನಾನ ಮಾಡಿದರೂ ಆ ಹಿರಿಯರದ್ದು ಮಾತಿಲ್ಲ–ಕತೆಯಿಲ್ಲ. ಕನಿಷ್ಠ ಮುಗುಳ್ನಗೆಯೂ ಇಲ್ಲ.

ಹೆಸರಾಂತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಅವರೆಂದು ಎಲ್ಲರಿಗೂ ಗೊತ್ತು. ಬಿಮ್ಮನೆ ಬಿಗಿದುಕೊಂಡ ಮುಖವೇಕೋ! ತಿಳಿ ನಗೆ ಬೇಡವೇ ಅಂತಾ ಆಗಾಗ ಅಂದುಕೊಂಡದ್ದೂ ಉಂಟು. ತಾವಾಯ್ತು, ತಮ್ಮ ಪಾಡಾಯ್ತು ಎಂಬಂತೆ. ಸುತ್ತಲಿನವರನ್ನು ಅವರು ಮುಖಕೊಟ್ಟು ನೋಡುತ್ತಲೂ ಇರಲಿಲ್ಲ.

27ರ ನನ್ನನ್ನು ಯಾರೋ ಸ್ಟೂಡೆಂಟ್ ಅಂದುಕೊಂಡಿರಬೇಕು. ಅವರಾಗಲೇ ಐವತ್ತರ ಗಡಿ ದಾಟಿದ್ದರು. ನಿತ್ಯ ವ್ಯಾಯಾಮ ವಿದ್ದುದರಿಂದ ದೃಢಕಾಯರಾಗಿದ್ದರು. ನಾನಾ ದುರಭ್ಯಾಸಗಳಲ್ಲಿ ಲಡಾಸಾಗಿದ್ದ ಬುದ್ಧಿಜೀವಿಗಳಿಗೂ... ಅವರಿಗೂ ಅಜಗಜಾಂತರ.

ಎರಡು ಕಿಮೀ ದೂರದ ಮನೆಯಿಂದ ವಾಕ್ ಮಾಡಿಕೊಂಡು ಬಂದು ಈಜುತ್ತಿದ್ದರು. ಭೈರವನಂತೆ ಎದೆ ಸೆಟೆಸಿ ನಡೆಯೋರು. ದಿನಾ ಕಂಡಾಗ ನಮಸ್ಕಾರ; ಪ್ರತಿ ನಮಸ್ಕಾರ ಅಷ್ಟೇ. ಮಾತಾಡಿಸಲು ಇಷ್ಟ, ಆದರೆ ಏನೆಂದು ಮಾತಾಡಿಸಲಿ?. ಬಿಮ್ಮನೆಯ ಮುಖಕ್ಕೇ ಮೆಚ್ಚುಗೆಯ ನೋಟ ಬೀರುತ್ತಿದ್ದೆ.

ಏಳೆಂಟು ತಿಂಗಳು ಕಳೆದಿತ್ತು. ನನಗೆ ಎಂಟ್ಹತ್ತು ದಿನ ಹೋಗ ಲಾಗಲಿಲ್ಲ. ಸ್ನಾನಕ್ಕೆ ಬಂದಾಗ ಅವರೇ ಮಾತಾಡಿಸಿದರು.

'ಏನು ರಜಾ ಹೋಗಿದ್ರಾ? ವಾರದಿಂದ ಕಾಣ್ಲೆಲ್ಲಾ?'

'ಇಲ್ಲ ಸರ್. ಕೋಮುಗಲಭೆ ಬಂದೋಬಸ್ತ್. ಬರೋದಿಕ್ಕೇ ಆಗ್ಲಿಲ್ಲ' ಪೊಲೀಸ್ ಎಂದಿದ್ದ ನನ್ನ ಬುಲೆಟ್ ಬೈಕಿನಿಂದ ನಾನ್ಯಾರೆಂದು ಗೊತ್ತು ಮಾಡಿಕೊಂಡಿದ್ದರು.

ಮಾತು ಗಲಭೆ, ಪೊಲೀಸ್ ಡ್ಯೂಟಿ, ಪೆರೇಡ್ ಇತ್ಯಾದಿಗಳತ್ತ ತಿರುಗಿತು. ಅದು ಮೌನದ ಮಂಜುಗಡ್ಡೆ ಕರಗಿಸಿತು. ಅದೆಂದೂ ಹರಟೆ ಯಾಗಲಿಲ್ಲ. ಹತ್ತಾರು ನಿಮಿಷಗಳ ಪ್ರಾಸಂಗಿಕ ಮಾತು–ವಿಚಾರ.

1982ರಲ್ಲಿ ಅವರು ಮತ್ತು ಹಾ.ಮಾ.ನಾಯಕರು ಗೋಕಾಕ್ ಚಳುವಳಿಯಲ್ಲಿ ಮುಖ್ಯ ಪಾತ್ರ ವಹಿಸಿದ್ದಾಗ (ಡಾ.ರಾಜ್ ಬರುವ ಮುನ್ನ) ಶಾಂತಿ ಸಭೆಗಳಿಗೆ ಅವರನ್ನು ಕರೆತರಲು ನಾಲ್ಕೈದು ಬಾರಿ ಓಡಾಡಿದ್ದೆ.

* * *

ಬಹಳ ವರ್ಷಗಳಿಂದ ನಿಂತು ಹೋಗಿದ್ದ ಕುಸ್ತಿ ಚಟುವಟಿಕೆ 1984ರಲ್ಲಿ ಪುನಃ ಶುರುವಾಯಿತು. ಎಸ್‌ಪಿ ಡಿ.ಎನ್.ಮುನಿಕೃಷ್ಣ ನೇತೃತ್ವದಲ್ಲಿ ರಚನೆಯಾದ ತಾತ್ಕಾಲಿಕ ಸಮಿತಿ ಮೈಸೂರಿನ ಎಲ್ಲಾ ಗರಡಿಮನೆ ಯವರನ್ನೂ, ಪೈಲ್ವಾನರನ್ನೂ ಒಗ್ಗೂಡಿಸಿದ್ದೆವು. ಆವರೆಗಿನ ಭಿನ್ನಾಭಿಪ್ರಾಯ ಬಾಡಿಸಬೇಕಿತ್ತು. ಹಿಂದೂ–ಮುಸ್ಲಿಂ ಜಿದ್ದಾಜಿದ್ದಿ ಅಳಿಸಬೇಕಿತ್ತು.

ನಾಲ್ಕಾರು ಸಭೆಗಳು ನಡೆದ ನಂತರ ದೊಡ್ಡ ಸಭೆಯನ್ನು ಸರ್ಕಾರಿ ಭವನದಲ್ಲಿ ಆಯೋಜಿಸಿದರು. ಆ ಸಭೆಗೆ ಎಸ್.ಎಲ್. ಭೈರಪ್ಪನವರನ್ನು ಕರೆಯೋಣವೆಂದೆ.

'ಸಾಹಿತಿಗೂ ಕುಸ್ತಿಗೂ ಏನು ಸಂಬಂಧಾರೀ? ಬೇಡ' ಎಂದರು ಗುಪ್ತಚರ ದಳದ ಅಧಿಕಾರಿ.

ಅವರು 'ಭೀಮಕಾಯ' ಎಂಬ ಕಾದಂಬರಿ ಬರೆದಿರುವುದಲ್ಲದೆ, ಸ್ವತಃ ಗರಡಿಪಟುವೆಂದು ಬಿಡಿಸಿ ವಿವರಿಸಿದೆ.

'ಸಾಹಿತಿಗಳು, ಬುದ್ಧಿಜೀವಿಗಳು ಇದಕ್ಕೆಲ್ಲಾ ಬೇಡಪ್ಪಾ. ಓವರ್ ಸೆನ್ಸಿಟೀವ್ ಇರ್ತಾರೆ. ಯಾವುದೋ ವಿಷಯಕ್ಕೆ ಮತ್ಯಾವುದನ್ನೋ ಗಂಟುಹಾಕಿ ಕ್ಯಾತೆ ತೆಗೀತಾರೆ. ಸೈದ್ಧಾಂತಿಕವಾಗಿ ಸರಿ ಹೋಗ್ತಿಲ್ಲ ಅಂತ ಸ್ಟೇಟ್‌ಮೆಂಟ್ ಕೊಡ್ತಾರೆ. ಸಾಮರಸ್ಯ (ಕೋಮು) ಮೂಡಿಸುವ ಸಮಯದಲ್ಲಿ ಸುಮ್ಮನೇ ಯಾಕೆ ರಗಳೆ ಬೇಡ' ಎಂದರು.

ಎಸ್ಪಿ ಮುನಿಕೃಷ್ಣ ಅವರಿಗೆ ಪ್ರತ್ಯೇಕವಾಗಿ ವಿವರಿಸಿದೆ. 'ಭೀಮಕಾಯ' ವನ್ನೂ ಕೊಟ್ಟೆ. ಅವರು 'ಆಯ್ತು. ಆಹ್ವಾನ ಮಾಡಿ' ಎಂದರು.

ಅವರನ್ನು ಕಂಡು, 'ತಾವು ಬರಬೇಕು ಸರ್. ಮೈಸೂರಿನ ಗರಡಿ ಇತಿಹಾಸದ ಮಹತ್ವವನ್ನು ಸಭೆಗೆ ಹೇಳಬೇಕು' ಎಂದು ಕೇಳಿಕೊಂಡೆ, ಮಾತ್ರವಲ್ಲ ಅವರನ್ನು ಒಪ್ಪಿಸಿದೆ.

ಸಭೆ ಶುರುವಾಯಿತು. ಮೈಸೂರಿನ ಎಲ್ಲಾ ಪ್ರಮುಖ ಪೈಲ್ವಾನರು, ಉಸ್ತಾದಿಗಳು, ಯಜಮಾನರುಗಳೂ ಬಂದಿದ್ದರು. ಕ್ಯಾಪ್ಟನ್ ಕೃಷ್ಣ ಅವರದೇ ಅಧ್ಯಕ್ಷತೆ. ಮೈಸೂರಿನ ಗರಡಿ ಮನೆಗಳ ಪೈಲ್ವಾನರುಗಳ ಸಾಧನೆ, ತಾಲೀಮುಗಳ ಬಗ್ಗೆ ಭೈರಪ್ಪನವರು ಬರೆದಿರುವ 'ಭೀಮಕಾಯ' ಅಪರೂಪದ ಕಾದಂಬರಿಯ ಬಗ್ಗೆ ವಿವರಿಸುತ್ತಾ, ಎಸ್.ಎಲ್.ಭೈರಪ್ಪನವರನ್ನು ಸಭೆಗೆ ಪರಿಚಯಿಸಿದೆ. ಗರಡಿ ಮನೆಯಲ್ಲಿ ಸಾಮು ಮಾಡಿದವರು. ಈಗಲೂ ಈಜು ಇತ್ಯಾದಿಗಳಲ್ಲಿ ಚಟುವಟಿಕೆಯಾಗಿರುವವರು ಎಂದೆಲ್ಲಾ ಹೇಳಿದೆ.

ಸ್ವತಃ ಭೈರಪ್ಪನವರಿಗೇ ಸಂತೋಷವಾದಂತಿತ್ತು. ಮೈಸೂರಿನ ಕುಸ್ತಿ ಕುರಿತು ಅದ್ಭುತವಾದ ಭಾಷಣ ಮಾಡಿದರು. ವಾಪಸ್ ಹೋಗುವಾಗ, 'ಭೀಮಕಾಯ ಕಾದಂಬರಿಯನ್ನು ನಾನೇ ಮರೆತು ಬಿಟ್ಟಿದ್ದೆ. ಅದು ಹ್ಯಾಗೆ ನಿಮಗೆ ನೆನಪಿತ್ತು?' ಎಂದು ಕೇಳಿದರು. 'ಹಾಸನದ ಜನಮಿತ್ರ ಪತ್ರಿಕೆ ಆಫೀಸಿನಲ್ಲಿ ಸಿಕ್ಕಿತ್ತು ಸರ್' ಎಂದೆ.

'ನಾನು ವಿದ್ಯಾರ್ಥಿಯಾಗಿದ್ದಾಗ ಬರೆದ ಮೊದಲ ಕಾದಂಬರಿ. ಅವರೇ ಪಬ್ಲಿಷ್ ಮಾಡಿದ್ದು. ತುಂಬ ಬಾಲಿಶ ಎಂದು ನಾನು ನನ್ನ ಪುಸ್ತಕಗಳ ಪಟ್ಟಿಯಿಂದಲೂ ಕೈಬಿಟ್ಟಿದ್ದೇನೆ' ಎಂದರು ಭೈರಪ್ಪ.

ತಮಗೆ ಹಾಗನ್ನಿಸಬಹುದು. ತುಂಬ ಆಥೆಂಟಿಕ್ ಆಗಿ ಬರೆದಿದ್ದೀರಿ ಅಂತ ನಮ್ಮ ಎಸ್ಪಿಯವರೂ ಕೊಂಡಾಡಿದರು. ಈವತ್ತು ಭಾಷಣದಲ್ಲಿ ಅವರೂ ಹೇಳಿದರಲ್ಲಾ?

'ನೀವುಗಳು ಮಾತಾಡಿದ ಮೇಲೆಯೇ ನನಗೂ ಅದು ಚೆನ್ನಾಗಿದೆ ಯೇನೋ ಅನ್ನಿಸಿತು' ಎಂದರು. ಆಮೇಲೆ ನಡೆದ ಅನೇಕ ಜಿದ್ದಾಜಿದ್ದಿನ, ಖಡಾ ಖಡಿ ಕುಸ್ತಿ ಪಂದ್ಯಗಳಿಗೆ ಭೈರಪ್ಪನವರು ಬಂದಿದ್ದರು.

ಇದಾಗಿ ಎರಡು ಮೂರು ವರ್ಷ ಕಳೆದಿತ್ತು. ತರಂಗ ಪತ್ರಿಕೆಯ ಸಂಪಾದಕ ಸಂತೋಷಕುಮಾರ್ ಗುಲ್ವಾಡಿಯವರನ್ನು ಮನೆಗೆ ಔತಣಕ್ಕೆ ಕರೆದಿದ್ದೆ. ಕುಟುಂಬ ಸಮೇತರಾಗಿ ಬಂದಿದ್ದ ಗುಲ್ವಾಡಿಯವರಿಗೆ 'ಭೀಮಕಾಯ' ಕಾದಂಬರಿ ಪ್ರಸಂಗ ಹೇಳಿದೆ. ನನ್ನಲ್ಲಿದ್ದ 'ವಿಷಯ ವಿಶ್ವಕೋಶ' ತೋರಿಸಿದೆ. ಕನ್ನಡದಲ್ಲಿ ಅಂತಹುದೊಂದು ಮಹತ್ವದ ಗ್ರಂಥವೊಂದಿದೆ ಎಂಬುದೇ ಗುಲ್ವಾಡಿ ಅವರಿಗೆ ಗೊತ್ತಿರಲಿಲ್ಲ.

ಬೀಳ್ಕೊಡುವಾಗ ಅವರೆಂದರು. 'ಈಗ ಸೀದ ಮಣಿಪಾಲಕ್ಕೆ ಹೊರಟೆ. ಅದಕ್ಕಿಂತ ಮೊದಲು ಎರಡು ಕಡೆಗೆ ಹೋಗಬೇಕಿದೆ' ಅಂದರು.

'ಯಾವ ಕಡೆಗೆ ಸರ್?' ಎಂದೆ.

'ಮೊದಲು ಪ್ರಸಾರಾಂಗಕ್ಕೆ ಹೋಗಿ ಕನ್ನಡ ವಿಷಯ ವಿಶ್ವಕೋಶ ತೆಗೆದುಕೊಳ್ತೀನಿ. ಆಮೇಲೆ ಭೈರಪ್ಪನವರನ್ನು ಭೆಟ್ಟಿಯಾಗಿ ಹೋಗ್ತೀನಿ' ಎಂದು ಹೊರಟರು. ಆರೇಳು ತಿಂಗಳಿನಲ್ಲೇ ಭೈರಪ್ಪನವರ 'ಭೀಮಕಾಯ' ತರಂಗದಲ್ಲಿ ಧಾರಾವಾಹಿಯಾಗಿ ಹರಿಯಿತು.

* * *

ಏನನ್ನೇ ಬರೆಯಲಿ ಆಳದ ಅಧ್ಯಯನವಿಲ್ಲದೆ, ವಸ್ತು ವಿಷಯವನ್ನು ಖಚಿತಪಡಿಸಿಕೊಳ್ಳದೆ ಭೈರಪ್ಪನವರು ಬರೆಯರು. ಬೇಜವಾಬ್ದಾರಿ ಬರವಣಿಗೆಗೆ ಎಂದೂ ಕೈ ಹಾಕರು.

ಪೊಲೀಸು, ಕಾನೂನು ಇತ್ಯಾದಿಗಳ ಬಗ್ಗೆ ತಿಳಿಯಲು ನನ್ನನ್ನು ಅನೇಕ ಬಾರಿ ಮನೆಗೆ ಕರೆದಿದ್ದಾರೆ. ತಾವೇ ಕತ್ತರಿಸಿದ ಹಣ್ಣಿನ ಪ್ಲೇಟಿಟ್ಟು ದೀರ್ಘ ಅವಧಿವರೆಗೆ ಚರ್ಚಿಸಿದ್ದಾರೆ. ಆದರೆ ಕೃತಿಯಲ್ಲಿ ಮಾತ್ರ ಅದರ ಮಾಹಿತಿ ಅರ್ಧಪುಟವೂ ಇರುವುದಿಲ್ಲ. ಅದೇ ಅವರ ವೈಶಿಷ್ಟ್ಯ.

ಅವರೆಂದೂ ಯಾರ ತಕರಾರಿಗೂ ಹೋದವರಲ್ಲ. ಅನ್ಯರ ಬಗ್ಗೆ ಮಾತಾಡಿದವರಲ್ಲ. ಆದರೆ ಅವರ ಕೃತಿಗಳ ಬಗ್ಗೆ ಸದಾ ಕುಹಕದ ಮಾತು ಇದ್ದದ್ದೇ. ಅವರ ಯಾವುದೇ ಹೇಳಿಕೆ ಬರಲಿ. ಟೀಕೆಗಳ ಮಹಾಪೂರ ತಪ್ಪಿದ್ದಲ್ಲ. ಪ್ರತಿಕ್ರಿಯೆ ಕೊಟ್ಟರೆ ತಾನೆ ಚರ್ಚೆ, ಜಗಳ!. ಬೈರಪ್ಪನವರು ಹರಾ ಎನ್ನರು. ಹರಿ ಎಂದೂ ಅನ್ನರು. ಟೀಕಿಸಿದವರೇ ತಮ್ಮ ಮಾತು ತಾವೇ ತಿಂದುಕೋಬೇಕಷ್ಟೆ.

ಭೈರಪ್ಪನವರು ಸದಾ ಒಂಟಿ. ಎಂದೂ ಗುಂಪುಗುಳಿತನವಿಲ್ಲ. ಆದರೆ ಗೂಳಿತನವಿರುವ ಏಕಾಂಗಿ. ಅವರ ಕೃತಿಗಳೇ ಅವರಿಗೆ ಗುರಾಣಿ.

'ಆವರಣ' ಬಂದಾಗ ಅದು ಕಾದಂಬರಿಯೇ ಅಲ್ಲ. ಬರೀ ಮಾಹಿತಿ ತುಂಬಿಸಿದ ಡಾಟಾ ಎಂದರು. ಅಲ್ಲಿರುವ ಅಂಶಗಳು ಸುಳ್ಳು ಎಂದು ಯಾರೊಬ್ಬನೂ ಪರೀಕ್ಷೆಗಿಳಿದು ಸಾಧಿಸಲಿಲ್ಲ. ಕೃತಿಯೇ ಎಲ್ಲವನ್ನೂ ಹೇಳಿತು.

* * *

ಭೈರಪ್ಪನವರು ಅಂತರ್ಮುಖಿಗಳು, ಸಿಡುಕರು. ಯಾರ ಜೊತೆಗೂ ಸೇರುವುದಿಲ್ಲ ಇತ್ಯಾದಿ ಮಾತುಗಳಿದ್ದವು. ಕ್ರಮೇಣ ಅದಕ್ಕೆ ವ್ಯತಿರಿಕ್ತರಾಗಿದ್ದ ಭೈರಪ್ಪನವರು ಹೊರಗೆ ಹೆಚ್ಚಾಗಿ ಕಾಣತೊಡಗಿದರು. ಅವರ ಸಹೋದ್ಯೋಗಿಗಳ ವಿರುದ್ಧ ಕೇಸಾದಾಗ ತಾವಾಗಿ ಠಾಣೆಗೆ ಬಂದು ನೆರವಿಗೆ ನಿಂತಂತಹ ಭೈರಪ್ಪನವರನ್ನು ನೋಡಿದ್ದೇನೆ. ಮತ್ತೋರ್ವ ಸಹೋದ್ಯೋಗಿಯ ಮನೆಗೆ ಬೆದರಿಕೆ ಕರೆ ಬರುತ್ತಿತ್ತು. ಭಯವೇ ಬೇಡಿರೆಂದು ಅವರ ರಕ್ಷಣೆಗೆ ಬಂಡೆಯಂತೆ ತಾವೇ ನಿಂತರು. ಅದಕ್ಕಾಗಿ ನಮ್ಮ ಠಾಣೆಗೆ ಬಂದದ್ದು ಎಷ್ಟು ಬಾರಿಯೋ?. ಸ್ನೇಹಕ್ಕೆ ತಕ್ಕ ಘನತೆಯ ನಡವಳಿಕೆ ಅವರದು.

ಹಾ.ಮಾ.ನಾಯಕರು ಮೊದಲ್ಗೊಂಡು ಅನೇಕ ಹಿರಿಯ ಸಾಹಿತಿಗಳು ವೈಯಕ್ತಿಕ ಕಾರಣಕ್ಕಾಗಿ ತೊಂದರೆಗೆ ಸಿಲುಕಿದಾಗಲೂ ಅವರ ಜೊತೆಗೆ ನಿಂತವರು ಭೈರಪ್ಪನವರು.

ತಮ್ಮ ಮಗನ ಮದುವೆ ಸಂತೋಷಕೂಟಕ್ಕೆ ಕರೆದಿದ್ದರು. ಅಲ್ಲಿಗೆ ಬಂದಿದ್ದ ಜನಗಳನ್ನು ನೋಡಿ ಬೆರಗಾಗಿ ಹೋದೆ. ನಾನಾ ಸ್ತರದ ಗಣ್ಯಾತಿಗಣ್ಯರು, ಪ್ರತಿಷ್ಠಿತರು ಅಲ್ಲಿದ್ದರು.

ಯಾರ ಜೊತೆಗೂ ಸೇರೋದೇ ಇಲ್ವಂತೆ ಅಂತಿದ್ರಲ್ಲ? ಪರ್ವಾಗಿಲ್ಲ ಭೈರಪ್ಪನವರೇ! ಜನ ಮಡಗಿದ್ರಿ! ಅಂದುಕೊಂಡೆ.

* * *

ಅವರ ಪುಸ್ತಕಗಳಿಂದ ಬರುವ ಆದಾಯದಲ್ಲಿ ಬಹುಪಾಲನ್ನು ನಾನಾ ಸಹಾಯಾರ್ಥ ಕೆಲಸಗಳಿಗೆ ವಿನಿಯೋಗಿಸುತ್ತಾರೆಂದು ಕೇಳಿ ಬಲ್ಲೆ. ಯಾವುದಕ್ಕೂ ಪ್ರಚಾರವಿಲ್ಲ. ಬಲಗೈಲಿ ನೀಡಿದ್ದು ಮತ್ತೊಂದು ಕೈಗೂ ಗೊತ್ತಾಗದು. ಹೋಲಿಕೆ ಬೇಡ. ಆದರೂ ವಸ್ತುಸ್ಥಿತಿಯನ್ನು ವಿವರಿಸಲು ಹೋಲಿಕೆ ಅಗತ್ಯ. ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಲಕ್ಷಾಂತರ ಹಣದ ಹಮ್ಮಿಣಿ ಅರ್ಪಿಸುವುದು ವಾಡಿಕೆ. ಸಮಾಜದ ಅನ್ಯಾಯ, ಶೋಷಣೆ, ದಬ್ಬಾಳಿಕೆ ಕುರಿತು ಉದ್ದುದ್ದ ಮಾತಾಡಿದವರೆಲ್ಲರೂ ಅಧ್ಯಕ್ಷ ಸ್ಥಾನ ಅಲಂಕರಿಸಿ ಹಮ್ಮಿಣಿಯನ್ನು ಸೈಲೆಂಟಾಗಿ ಜೇಬಿಗಿಳಿಸಿಕೊಂಡರು. ಆ ಬಳಿಕ ಉಸಿರೇ ಎತ್ತಲಿಲ್ಲ.

ಕನಕಪುರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದಾಗ ಬಂದಿದ್ದ ಐದು ಲಕ್ಷ ರೂಪಾಯಿ ಹಮ್ಮಿಣಿ ಹಣಕ್ಕೆ ತಮ್ಮದೊಂದು ದೊಡ್ಡ ಮೊತ್ತ ಸೇರಿಸಿ ಕನ್ನಡ ಶಾಲೆಗಳ ಅಭಿವೃದ್ಧಿ ಕೆಲಸಗಳಿಗೆ ನಮ್ಮ ಭೈರಪ್ಪನವರು ನೀಡಿದರು. ಇತ್ತೀಚೆಗೆ ತಮ್ಮ ಹುಟ್ಟಿದೂರಿನ ಅಭಿವೃದ್ಧಿಗೆಂದು ದೊಡ್ಡ ಮೊತ್ತ ನೀಡಿದ್ದರು.

ಸಾಮಾಜಿಕ ಕಳಕಳಿಯ ಉತ್ತಮ ಸಾಹಿತಿಯೋರ್ವ ಸಜ್ಜನನೂ, ಸಹೃದಯನೂ, ಉದಾರಿಯೂ ಆಗಿದ್ದಾರೆ ಎಂಬುದರಲ್ಲಿದೆಯಲ್ಲವೇ ನಿಜವಾದ ಸಾರ್ಥಕತೆ? ಭಾರತಕ್ಕೆ ಮರಳಿದ ಮೇಲೆ ಒಮ್ಮೆ ಹೋಗಿ ಅವರಿಗೆ ವಂದಿಸಿ ಬರಬೇಕು.

ಶ್ರದ್ಧಾಂಜಲಿ

ಆ ಪರಿಚಯ 1981ರಿಂದ ಬೆಳೆದುಬಂತು. ಪ್ರತಿ ಭೇಟಿಯಲ್ಲೂ ಅವರ ಮೇಲಿನ ಗೌರವ ಅಭಿಮಾನ ಇಮ್ಮಡಿಯಾಗುತ್ತಲೇ ಹೋಯಿತು. ಪೊಲೀಸ್, ತನಿಖೆ, ಕಾನೂನು ಕುರಿತಂತೆ ಕಾಲ್ ಮಾಡೋರು. ಮನೆಗೆ ಹೋದಾಗ ಹಣ್ಣುಗಳನ್ನು ಸ್ವತಃ ಹೆಚ್ಚಿ ಕೊಟ್ಟು ಮಾತನಾಡಿಸೋರು. ಇದೆಲ್ಲಾ 2018ರವರೆಗೆ. ನಂತರ ಅಲ್ಲೊಮ್ಮೆ... ಇಲ್ಲೊಮ್ಮೆ... ಭೇಟಿ. 2023ರಲ್ಲಿ ಹಾಸನದಲ್ಲಿ ನಡೆದ ಅವರ ಸಾಹಿತ್ಯ ಕುರಿತ ಚರ್ಚೆಯಲ್ಲಿ ಪಾಲ್ಗೊಂಡಿದ್ದೆ. ನನ್ನ ಹೆಸರನ್ನು ಅವರಾಗಿ ಸೂಚಿಸಿದ್ದರೆಂದು ನಿರ್ವಾಹಕರಾದ ಶ್ರೀ ಪ್ರಧಾನ್ ಗುರುದತ್ ಹೇಳಿದ್ದರು. ವೈಯಕ್ತಿಕವಾಗಿ ನನಗದೊಂದು ಆಶೀರ್ವಾದ. ಯಾವುದೇ ದೃಷ್ಟಿಯಿಂದ ನೋಡಿದರೂ ಸಾರ್ಥಕ ಬದುಕು ಅವರದು.

– ಭಕ್ತಿಪೂರ್ವಕ_ಶ್ರದ್ಧಾಂಜಲಿ.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ,
ಮೈಸೂರು.
ಸಿಯಾಟಲ್–ಅಮೇರಿಕಾ
ಮೊ.ನಂ.: 94490 10009

ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ಮೈಸೂರು, ಸೆ.25(ಆರ್‌ಕೆ)– ಮನೆ ಬಾಗಿಲು ಮೀಟಿ 2 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಕನಕಗಿರಿ ಮುಖ್ಯ ರಸ್ತೆಯಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ವಿದ್ಯಾರಣ್ಯಪುರಂನ ಕನಕಗಿರಿ ಬೂತಾಳೆ ಪಿಚ್ ಮೈದಾನದ ಬಳಿ ನಿವಾಸಿ ಕೃಷ್ಣ ಎಂಬುವರು ಬುಧವಾರ ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಕುಟುಂಬ ಸಮೇತ ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕಾಗಿ ಹೊರ ಊರಿಗೆ ಹೋಗಿ ಇಂದು ಬೆಳಿಗ್ಗೆ 8.30 ಗಂಟೆಗೆ ಹಿಂದಿರುಗಿದರು.

ಗೇಟ್ ತೆಗೆಯುತ್ತಿದ್ದಂತೆಯೇ ಮನೆಯ ಬಾಗಿಲು ಮೀಟಿ ತೆರೆದಿರುವುದು ಗೊತ್ತಾಗಿದೆ ಒಳಗೆ ಹೋಗಿ ನೋಡಿದಾಗ ಕೊಠಡಿಯ ಲಾಕ್‌ಡ್ರೋಬ್‌ನಲ್ಲಿರಿಸಿದ್ದ ಸುಮಾರು 2 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣ ಕಳವಾಗಿರುವುದು ತಿಳಿಯಿತು. ಕೃಷ್ಣ ನೀಡಿದ ದೂರಿನ ಹಿನ್ನಲೆಯಲ್ಲಿ ಇಂದು ಬೆಳಿಗ್ಗೆ ಸ್ಥಳಕ್ಕೆ ತೆರಳಿದ ವಿದ್ಯಾರಣ್ಯಪುರಂ ಠಾಣೆ ಇನ್‌ಸ್ಪೆಕ್ಟರ್ ಯೋಗಾ ನಂಜಪ್ಪ ಅವರು ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮೈಸೂರಲ್ಲಿ ಮುಂದುವರೆದ ನಕಲಿ ಅಪಘಾತ; ಸುಲಿಗೆ ದಂಧೆ!

ಹಿರಿಯ ನಾಗರಿಕರ ಚಾಣಾಕ್ಷತನದಿಂದಾಗಿ ಸುಲಿಗೆಕೋರರು ಬಂದ ದಾರಿಗೆ ಸುಂಕವಿಲ್ಲ...!

ಮೈಸೂರು,ಸೆ.25 (ಆರ್‌ಕೆ)– ಹಿರಿಯ ನಾಗರಿಕರನ್ನೇ ಗುರಿಯಾಗಿಸಿಕೊಂಡು ನಕಲಿ ಅಪಘಾತ ಹೆಸರಲ್ಲಿ ಹಣ ಸುಲಿಗೆ ಯತ್ನ ಮುಂದುವರಿದಿದೆ. ಆದರೆ, ಬಹುತೇಕ ಹಿರಿಯ ನಾಗರಿಕರು ಎಚ್ಚೆತ್ತುಕೊಂಡಿದ್ದು, ಸುಲಿಗೆಕೋರರಿಗೆ ಬಂದ ದಾರಿಗೆ ಸುಂಕವಿಲ್ಲದಂತಾಗಿದೆ.

ಮೈಸೂರಿನ ಕುವೆಂಪುನಗರ ನಿವಾಸಿ ಹಾಗೂ ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಾಂಬಶಿವಯ್ಯ ಅವರು ಇಂದು ಬೆಳಿಗ್ಗೆ 8.45ರಲ್ಲಿ ಮನೆಯಿಂದ ಕಾರಿನಲ್ಲಿ ಕಾಲೇಜಿಗೆ ಹೋಗುತ್ತಿದ್ದರು. ಜೆಎಲ್‌ಬಿ ರಸ್ತೆಯ ಎಸ್‌ಡಿಎಂ ಕಾಲೇಜು ಬಳಿ ಏನೋ ಶಬ್ಧ ಕೇಳಿಸಿತಾದರೂ ಅವರು ನಿಲ್ಲಿಸದೇ ಮುಂದೆ ಸಾಗಿದ್ದಾರೆ. ಈ ವೇಳೆ ಹಿಂದಿನಿಂದ ಬೈಕ್‌ನಲ್ಲಿ ಬಂದ ಯುವಕ ಆರಾಧ್ಯ ಭವನ ಬಳಿ ಅವರ ಕಾರು ತಡೆದು, ನನ್ನ ಬೈಕಿಗೆ ಡಿಕ್ಕಿ ಹೊಡೆದು ನಿಲ್ಲಿಸದೇ ಬಂದಿದ್ದೀರಿ. ಅಲ್ಲಿ ನಮ್ಮ ಹುಡುಗರಿಗೆ ಗಾಯಗಳಾಗಿ ಒದ್ದಾಡುತ್ತಿದ್ದಾರೆ ಎಂದು ಹೇಳಿದ್ದಾನೆ.

ಮರದ ಮೇಲಿಂದ ಏನೋ ಬಿದ್ದಿರಬಹುದು ಎಂದುಕೊಂಡೆ, ಗೊತ್ತಾಗಲಿಲ್ಲ. ದಯಮಾಡಿ ಕ್ಷಮಿಸು ಎಂದು ಹೇಳಿದ್ದಾರೆ. ಈ ಮಾತನ್ನ ನೀವು ಅಲ್ಲಿಗೇ ಬಂದು ಹೇಳಿ ಎಂದು, ಮತ್ತೆ ನೀವ್ರ ಆಫೀಸಿಗೆ ಹೋಗಬೇಕಾ, ಅರ್ಜೆಂಟಿದೆಯಾ ಎಂದಿದ್ದಾನೆ. ಅವನ ಉದ್ದೇಶ ಅರ್ಥ ಮಾಡಿಕೊಂಡ ಸಾಂಬಶಿವಯ್ಯನವರು ಇರಲಿ, ಅಲ್ಲಿಗೇ ಬರ್ತಿನಿ ನಡಿ ಎಂದು ಅವರು ಹೇಳಿ ಕಾರಿನಲ್ಲಿ ಮುಂದೆ ಸಾಗಿದರೆ, ಆತ ಹಿಂಬಾಲಿಸಲಿಲ್ಲ. ಸ್ವಲ್ಪ ಸಮಯದ ನಂತರ ಸಾಂಬಶಿವಯ್ಯನವರು ಬೇರೊಂದು ಕಾರಿನಲ್ಲಿ ಬಂದು ಎಸ್‌ಡಿಎಂ ಕಾಲೇಜು ಸುತ್ತಮುತ್ತ ನೋಡಿದರೆ, ಅಲ್ಲಿ ಅಪಘಾತವಾದ ಬಗ್ಗೆ ಯಾವುದೇ ಸುಳಿವಿರಲಿಲ್ಲ. ಈ ಪ್ರಕರಣ ಸಂಬಂಧ ಸ್ವತಃ ಸಾಂಬಶಿವಯ್ಯನವರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪೊಲೀಸ್ ಅಂದ ಕೂಡಲೇ ಕಾಲ್ಕಿತ್ತ: ಮತ್ತೊಂದು ಪ್ರಕರಣದಲ್ಲಿ ಜಯಲಕ್ಷ್ಮಿಪುರಂ ನಿವಾಸಿ 65 ವರ್ಷದ ವ್ಯಕ್ತಿಯೊಬ್ಬರು ಇಂದು ಬೆಳಿಗ್ಗೆ 8.45 ರಲ್ಲಿ ಮನೆಯಿಂದ ಆಯರಹಳ್ಳಿ ಬಳಿಯ ತಮ್ಮ ಜಮೀನಿಗೆ ಕಾರಿನಲ್ಲಿ ಹೋಗುತ್ತಿದ್ದ ವೇಳೆ ಸೆಂಟ್ ಮೇರಿಸ್ ಸರ್ಕಲ್ ಬಳಿ ಏನೋ ಶಬ್ದ ಬಂದಂತಾಗಿದೆ. ಆದರೆ ಕಾರು ನಿಲ್ಲಿಸದೇ ಮುಂದೆ ಸಾಗಿದ್ದಾರೆ. ಅವರು ಎಲೆ ತೋಟದ ಬಳಿ ಹೋಗುತ್ತಿದ್ದಂತೆಯೇ ಹಿಂದಿನಿಂದ ನಂಬರ್ ಪ್ಲೇಟ್ ಇಲ್ಲದ ಹೋಂಡಾ ಆಕ್ಟೀವಾದಲ್ಲಿ ಬಂದ ಯುವಕ, ಜೆಎಸ್‌ಎಸ್ ಕಾಲೇಜು ಸರ್ಕಲ್ ಬಳಿ ಕಾರು ತಡೆದು, ನೀವ್ರ ಅಪಘಾತ ಮಾಡಿ ಬಂದಿದ್ದೀರಿ. ಯುವಕನಿಗೆ ಗಾಯಗಳಾಗಿ ಒದ್ದಾಡುತ್ತಿದ್ದಾನೆ ಎಂದು ತಿಳಿಸಿದ್ದಾನೆ.

ಆಯ್ತು, ಪೊಲೀಸರಿಗೆ ವಿಷಯ ತಿಳಿಸೋಣ ಎಂದು ಹೇಳುತ್ತಿದ್ದಂತೆಯೇ ಆತ ಕಾಲ್ಕಿತ್ತಿದ್ದಾನೆ. 'ಮೈಸೂರು ಮಿತ್ರ'ನಿಗೆ ವಿಷಯ ತಿಳಿಸಿದ ಆ ಹಿರಿಯ ನಾಗರಿಕರು, ನನಗೆ ಕಳೆದ 2 ವರ್ಷದಿಂದೀಚೆಗೆ ಈ ಮಾದರಿಯ ನಾಲ್ಕು ಕೆಟ್ಟ ಅನುಭವಗಳಾಗಿವೆ ಎಂದರು.

ಎಸ್.ಎಲ್.ಭೈರಪ್ಪಗೆ ಮೈಸೂರು ವಕೀಲರ ಸಂಘದಿಂದ ಶ್ರದ್ಧಾಂಜಲಿ



ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಮೈಸೂರು ಜಿಲ್ಲಾ ವಕೀಲರ ಸಂಘದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, 'ಲಾ ಗೈಡ್' ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಸಂಘದ ಕಾರ್ಯದರ್ಶಿ ಸುಧೀರ್, ವಕೀಲರಾದ ಎನ್.ಟಿ.ಶ್ರೀನಿವಾಸ್, ಸುಬ್ಬಣ್ಣ, ಪ್ರಮೀಳಾ ಸೇರಿ ಹಲವು ಹಿರಿಯ–ಕಿರಿಯ ವಕೀಲರು ಭಾಗಿಯಾಗಿದ್ದರು.

ರೈತ ದಸರಾ ಉಪಾಧ್ಯಕ್ಷರಾಗಿ ನೇಮಕ



ಮೈಸೂರು, ಸೆ.25– ಮೈಸೂರು ದಸರಾ ಮಹೋತ್ಸವದ ರೈತ ದಸರಾ ಉಪಸಮಿತಿ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ ಹರೀಶ್ ಮೊಗಣ್ಣ ಅವರನ್ನು ರಾಜ್ಯ ಸರ್ಕಾರ ಹೊರಡಿಸಿದೆ.

ಎಸ್.ಎಲ್.ಭೈರಪ್ಪ ಅವರಿಗೆ ಶ್ರದ್ಧಾಂಜಲಿ



ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ)ಯಿಂದ ನ್ಯಾಯಾಲಯದ ಮುಂಭಾಗವಿರುವ ಗಾಂಧಿ ಪ್ರತಿಮೆ ಬಳಿ ಮೇಣದಬತ್ತಿ ಹಚ್ಚುವುದರ ಮೂಲಕ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಪಾರ್ಟಿಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷೆ ಶ್ರೀಮತಿ ಭಾಗ್ಯ, ಮೈಸೂರು ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷೆ ಶ್ರೀಮತಿ ಮಂಜುಳಾ, ಕಾನೂನು ಘಟಕದ ಅಧ್ಯಕ್ಷ ಪ್ರದೀಪ್ ಬಿದ್ದನ್, ಮಾಧ್ಯಮ ವಕ್ತಾರ ಸೂರ್ಯವರ್ಧನ್, ಜಿಲ್ಲಾ ಸಂಚಾಲಕ ಸಿಂಧುವಳ್ಳಿ ಶಿವಕುಮಾರ್, ಕಾರ್ಮಿಕ ಘಟಕದ ಅಧ್ಯಕ್ಷ ಮಾಣಿಕ್ಯಂ, ಭರತ್ ಹಾಗೂ ವಕೀಲ ಸತೀಶ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 26 ಸೆಪ್ಟೆಂಬರ್ 2025

ದಸರಾ ಸ್ಪೋರ್ಟ್ಸ್, ಸಿಎಂ ಕಪ್ ಕ್ರೀಡಾಕೂಟದ ಸಮಾರೋಪ

ಬೆಂಗಳೂರು ನಗರ ತಂಡಕ್ಕೆ ಸಮಗ್ರ ಪ್ರಶಸ್ತಿ

ಮೈಸೂರಿಗೆ ದ್ವಿತೀಯ ಸ್ಥಾನ



'ದಸರಾ ಸ್ಪೋರ್ಟ್ಸ್ ಮತ್ತು ಸಿಎಂ ಕಪ್' ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ 'ಬೆಂಗಳೂರು ನಗರ ತಂಡ' ಕ್ರೀಡಾಕೂಟದ 'ಸಮಗ್ರ ಪ್ರಶಸ್ತಿ'ಯನ್ನು ತನ್ನದಾಗಿಸಿಕೊಂಡಿತು.

ಮೈಸೂರು, ಸೆ.25(ಎಸ್‌ಪಿಎನ್)– ಮೈಸೂರು ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಕಳೆದ ಮೂರು ದಿನಗಳ ಹಿಂದೆ ಆರಂಭವಾದ 'ದಸರಾ ಸ್ಪೋರ್ಟ್ಸ್ ಮತ್ತು ಸಿಎಂ ಕಪ್' ಕ್ರೀಡಾಕೂಟದಲ್ಲಿ ವಿವಿಧ ಕ್ರೀಡಾ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ 865 ಪಾಯಿಂಟ್ ಗಳಿಸಿ ಮೊದಲ ಸ್ಥಾನ ಪಡೆದ 'ಬೆಂಗಳೂರು ನಗರ ತಂಡ' ಕ್ರೀಡಾಕೂಟದ 'ಸಮಗ್ರ ಪ್ರಶಸ್ತಿ'ಯನ್ನು ಸಮಾರೋಪ ಸಮಾರಂಭದಲ್ಲಿ ತನ್ನದಾಗಿಸಿಕೊಂಡಿತು.

ಮೈಸೂರು ತಂಡ ವಿವಿಧ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ (597) ಎರಡನೇ ಸ್ಥಾನಕ್ಕೆ ತೃಪ್ತಿ ಪಡೆದುಕೊಂಡರೆ, ಬೆಳಗಾವಿ ತಂಡ (493) ಮೂರನೇ ಸ್ಥಾನ ಗಳಿಸಿತು. ಬೆಂಗಳೂರು ಗ್ರಾಮಾಂತರ ತಂಡ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ 319 ಪಾಯಿಂಟ್ ಗಳಿಸಿ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರೆ, ಕಲಬುರಗಿ ತಂಡ 104 ಪಾಯಿಂಟ್ ಗಳಿಸಿ ಐದನೇ ಸ್ಥಾನಕ್ಕೆ ತಳ್ಳಲ್ಪಟ್ಟಿತು. ಈ ತಂಡಗಳಿಗೆ ಶಾಸಕ ತನ್ವೀರ್ ಸೇಠ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಚೇತನ್ ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕ್ರೀಡಾಪಟು ಎಂ.ಎಸ್.ಅರ್ಷಿತ್ ವಿವಿಧ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ (1006) 'ಪುರುಷರ ವೈಯಕ್ತಿಕ ವಿಭಾಗದ ಅಥ್ಲೆಟಿಕ್ ಚಾಂಪಿಯನ್ ಶಿಪ್'ನಲ್ಲಿ ಬಹುಮಾನ ಪಡೆದುಕೊಂಡರೆ, ಬೆಂಗಳೂರು ನಗರ ವಿಭಾಗದ ಕ್ರೀಡಾಪಟು ನಿಯೋಲ್ ಅನ್ನಾ ಕಾರ್ನೆಲಿಯೊ ವಿವಿಧ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ (991) ಮಹಿಳಾ ವಿಭಾಗದ 'ವೈಯಕ್ತಿಕ ಅಥ್ಲೆಟಿಕ್ ಚಾಂಪಿಯನ್ ಶಿಪ್' ಪ್ರಶಸ್ತಿ ತಮ್ಮದಾಗಿಸಿಕೊಂಡರು. ಪುರುಷರ ವಿಭಾಗದ ಈಜು ಸ್ಪರ್ಧೆಯ ವೈಯಕ್ತಿಕ ಚಾಂಪಿಯನ್‌ಶಿಪ್‌ನಲ್ಲಿ 3 ಗೋಲ್ಡ್ ಮತ್ತು 15 ಪಾಯಿಂಟ್ ಗಳಿಸಿ ವೈಯಕ್ತಿಕ ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡರು.

3,136 ಕ್ರೀಡಾಪಟುಗಳು ಭಾಗಿ

ದಸರಾ ಸ್ಪೋರ್ಟ್ಸ್ ಮತ್ತು ಸಿಎಂ ಕಪ್‌ನ ಚಾಂಪಿಯನ್‌ಶಿಪ್ ಕ್ರೀಡಾಕೂಟದ ವಿವಿಧ 26 ಕ್ರೀಡೆಗಳಲ್ಲಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 1,398 ಮಹಿಳಾ ಕ್ರೀಡಾಪಟುಗಳು ಹಾಗೂ 1,738 ಪುರುಷ ಕ್ರೀಡಾಪಟುಗಳು ಸೇರಿದಂತೆ ಒಟ್ಟು 3,136 ಕ್ರೀಡಾಪಟುಗಳು ಭಾಗವಹಿಸಿ 256 ಚಿನ್ನದ ಪದಕ, 256 ಬೆಳ್ಳಿ, 330 ಕಂಚಿನ ಪದಕ ಪಡೆದಿದ್ದಾರೆ.

ಮಹಿಳಾ ವಿಭಾಗದ ಲಕ್ಷ್ಯ ಶಿವಾನಂದ, ವಿ.ಹಿತೈಷಿ ಅವರು, ವಿವಿಧ ಕ್ರೀಡಾ ವಿಭಾಗದಲ್ಲಿ ಗೆಲುವು ಸಾಧಿಸಿ 1 ಬೆಳ್ಳಿ, 2 ಚಿನ್ನ ಇತರೆ ವಿಭಾಗದಲ್ಲಿ ಗೆಲವು ಸಾಧಿಸಿ 16 ಪಾಯಿಂಟ್‌ಗಳಿಸಿರುವ ಈ ಇಬ್ಬರು ಕ್ರೀಡಾಪಟುಗಳು ಈಜು ಸ್ಪರ್ಧೆಯ 'ವೈಯಕ್ತಿಕ ವಿಭಾಗ'ದಲ್ಲಿ ಪ್ರಶಸ್ತಿ ಹಂಚಿಕೊಂಡಿದ್ದಾರೆ.

ಬ್ಯಾಸ್ಕೆಟ್ ಬಾಲ್‌ನ ಪುರುಷರ ವಿಭಾಗದಲ್ಲಿ ಬೆಂಗಳೂರು ನಗರ ತಂಡ ಪ್ರಥಮ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದ್ವಿತೀಯ ಸ್ಥಾನ ಹಾಗೂ ಮೈಸೂರು ತಂಡ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. **ಮಹಿಳಾ ವಿಭಾಗದ ಬ್ಯಾಸ್ಕೆಟ್ ಬಾಲ್‌ನಲ್ಲಿ** ಬೆಂಗಳೂರು ನಗರ ತಂಡ ಪ್ರಥಮ, ಮೈಸೂರು ತಂಡ ರನ್ನರ್ ಅಪ್ ಹಾಗೂ ಬೆಳಗಾವಿ ತಂಡ ಮೂರನೇ ಸ್ಥಾನಗಳಿಸಿದೆ.

ವಿವಿಧ ಕ್ರೀಡೆಗಳಲ್ಲಿ ಪ್ರಶಸ್ತಿ ಪಡೆದ ತಂಡಗಳ ವಿವರ: ಫುಟ್‌ಬಾಲ್ ತಂಡದ ಪುರುಷರ ವಿಭಾಗದಲ್ಲಿ ಮೈಸೂರು ತಂಡ ಪ್ರಥಮ, ಬೆಂಗಳೂರು ನಗರ ತಂಡ (ದ್ವಿ), ಬೆಂಗಳೂರು ಗ್ರಾಮಾಂತರ ಜಿಲ್ಲಾ ತಂಡ ತೃತೀಯ ಸ್ಥಾನಗಳಿಸಿದೆ. **ಹ್ಯಾಂಡ್‌ಬಾಲ್** ಪುರುಷರ ವಿಭಾಗದಲ್ಲಿ ಬೆಂಗಳೂರು ನಗರ ತಂಡ (ಪ್ರ), ಬೆಂಗಳೂರು ಗ್ರಾಮಾಂತರ ಜಿಲ್ಲಾ ತಂಡ (ದ್ವಿ) ಹಾಗೂ ಬೆಳಗಾವಿ ತಂಡ ತೃತೀಯ ಸ್ಥಾನಗಳಿಸಿದೆ. **ಹ್ಯಾಂಡ್‌ಬಾಲ್** ಮಹಿಳಾ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ತಂಡ (ಪ್ರ), ಮೈಸೂರು ತಂಡ (ದ್ವಿ) ಹಾಗೂ ಬೆಂಗಳೂರು ನಗರ ತಂಡ ತೃತೀಯ ಸ್ಥಾನಗಳಿಸಿದೆ.

ಹಾಕಿ ವಿಭಾಗ: ಪುರುಷ ವಿಭಾಗದಲ್ಲಿ ಬೆಳಗಾವಿ ತಂಡ(ಪ್ರ), ಮೈಸೂರು(ದ್ವಿ) ಹಾಗೂ ಬೆಂಗಳೂರು ನಗರ (ತೃ) ಗೆಲುವು ಸಾಧಿಸಿದೆ ಮಹಿಳಾ ವಿಭಾಗದಲ್ಲಿ ಮೈಸೂರು(ಪ್ರ), ಬೆಳಗಾವಿ(ದ್ವಿ), ಬೆಂಗಳೂರು ಗ್ರಾಮಾಂತರ (ತೃ) ತಂಡ ಗೆಲುವು ಸಾಧಿಸಿ ಟ್ರೋಫಿ ಪಡೆದುಕೊಂಡಿದ್ದಾರೆ.

ಕಬಡ್ಡಿ ಪುರುಷರ ವಿಭಾಗದಲ್ಲಿ ಮೈಸೂರು (ಪ್ರ), ಬೆಂಗಳೂರು ನಗರ (ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ (ತೃ) ತಂಡ ಗೆಲುವು ಸಾಧಿಸಿದೆ. ಮಹಿಳಾ ವಿಭಾಗದಲ್ಲಿ ಬೆಳಗಾವಿ (ಪ್ರ), ಮೈಸೂರು (ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ (ತೃ) ತಂಡ ಗೆಲುವು ಸಾಧಿಸಿದೆ. **ಖೋ ಖೋ** ಪುರುಷರ ವಿಭಾಗದಲ್ಲಿ ಬೆಂಗಳೂರು ನಗರ (ಪ್ರ), ಮೈಸೂರು (ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ (ತೃ) ತಂಡ ಗೆಲವು ಸಾಧಿಸಿದೆ. ಮಹಿಳಾ ವಿಭಾಗದಲ್ಲಿ ಮೈಸೂರು ತಂಡ (ಪ್ರ), ಬೆಂಗಳೂರು ನಗರ (ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ (ತೃ) ತಂಡ ಗೆಲವು ಸಾಧಿಸಿದೆ.

ನೆಟ್‌ಬಾಲ್ ಪುರುಷರ ವಿಭಾಗದಲ್ಲಿ ಮೈಸೂರು ತಂಡ (ಪ್ರ), ಬೆಂಗಳೂರು ಗ್ರಾಮಾಂತರ ತಂಡ (ದ್ವಿ) ಹಾಗೂ ಕಲಬುರಗಿ ತಂಡ (ತೃ) ಗೆಲುವು ಸಾಧಿಸಿದೆ. ಮಹಿಳಾ ವಿಭಾಗದಲ್ಲಿ ಮೈಸೂರು ತಂಡ (ಪ್ರ), ಬೆಂಗಳೂರು ನಗರ ತಂಡ(ದ್ವಿ) ಹಾಗೂ ಬೆಳಗಾವಿ ತಂಡ (ತೃ) ಸ್ಥಾನ ಗಳಿಸಿದ್ದಾರೆ. **ಥ್ರೋ ಬಾಲ್** ಪುರುಷರ ವಿಭಾಗದಲ್ಲಿ ಮೈಸೂರು ತಂಡ(ಪ್ರ), ಬೆಂಗಳೂರು ನಗರ ತಂಡ(ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ ತಂಡ (ತೃ) ಗೆಲುವು ಸಾಧಿಸಿದೆ. ಮಹಿಳಾ ವಿಭಾಗದಲ್ಲಿ ಮೈಸೂರು ತಂಡ(ಪ್ರ), ಬೆಂಗಳೂರು ನಗರ ತಂಡ(ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ ತಂಡ (ತೃ) ಸ್ಥಾನಗಳಿಸಿದೆ.

ವಾಲಿಬಾಲ್ ಪುರುಷರ ವಿಭಾಗದಲ್ಲಿ ಮೈಸೂರು ತಂಡ(ಪ್ರ), ಬೆಳಗಾವಿ ತಂಡ (ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ ತಂಡ(ತೃ) ಗೆಲುವು ಸಾಧಿಸಿದೆ. ಮಹಿಳಾ ವಿಭಾಗದಲ್ಲಿ ಬೆಂಗಳೂರು ನಗರ ತಂಡ(ಪ್ರ), ಮೈಸೂರು ತಂಡ(ದ್ವಿ) ಹಾಗೂ ಬೆಳಗಾವಿ ತಂಡ (ತೃ) ಗೆಲುವು ಸಾಧಿಸಿವೆ. ಮಹಿಳಾ ವಿಭಾಗದಲ್ಲಿ ಬೆಂಗಳೂರು ನಗರ ತಂಡ(ಪ್ರ), ಮೈಸೂರು ತಂಡ(ದ್ವಿ) ಹಾಗೂ ಬೆಳಗಾವಿ ತಂಡ(ತೃ) ಗೆಲುವು ಸಾಧಿಸಿವೆ. **ಬಾಲ್ ಬ್ಯಾಡ್‌ಮಿಂಟನ್** ಪುರುಷರ ವಿಭಾಗದಲ್ಲಿ ಬೆಂಗಳೂರು ತಂಡ(ಪ್ರ), ಮೈಸೂರು ತಂಡ(ದ್ವಿ) ಹಾಗೂ ಬೆಂಗಳೂರು ಗ್ರಾಮಾಂತರ ತಂಡ(ತೃ) ಸ್ಥಾನಗಳಿಸಿವೆ. ಮಹಿಳಾ ವಿಭಾಗದಲ್ಲಿ ಮೈಸೂರು ತಂಡ(ಪ್ರ), ಬೆಂಗಳೂರು ನಗರ ತಂಡ(ದ್ವಿ) ಹಾಗೂ ಬೆಂಗಳೂರು ನಗರ ತಂಡ (ತೃ) ಗೆಲುವು ಸಾಧಿಸಿವೆ. ಈ ವೇಳೆ ದಸರಾ ಕ್ರೀಡಾ ಸಮಿತಿ ಪದಾಧಿಕಾರಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

ಅರಮನೆ ವೇದಿಕೆಯಲ್ಲಿ ತಕ್ಕೊ...! ಪದಗೊಳ್ ಬಾಣ...! ; ತಾಳ ಹಾಕಿ ಸಂಭ್ರಮಿಸಿದ ಶ್ರೋತೃಗಳು

ಶಿವತಾಂಡವ ನೃತ್ಯರೂಪಕದಲ್ಲಿ ದೃಶ್ಯಕಾವ್ಯ ಅನಾವರಣ



ಅರಮನೆ ವೇದಿಕೆಯಲ್ಲಿ ಗುರುವಾರ ವಿದ್ವಾನ್ ಶ್ರೀಧರ್ ಜೈನ್ ತಂಡ ಭರತನಾಟ್ಯ ಶೈಲಿಯಲ್ಲಿ 'ಶಿವತಾಂಡವ' ನೃತ್ಯರೂಪಕ ಪ್ರದರ್ಶಿಸಿತು.

ಮೈಸೂರು,ಸೆ.25(ಪಿಎಂ)–ಅರಮನೆ ವೇದಿಕೆಯಲ್ಲಿ 'ತಕ್ಕೊ...! ಪದಗೊಳ್ ಬಾಣ...!' ಹೌದು, ಜಿ.ಪಿ.ರಾಜರತ್ನಂ ರಚಿತ 'ರತ್ನನ್ ಪದಗಳು' ಶೀರ್ಷಿಕೆಯ ಪದ್ಯದಲ್ಲಿರುವ ಈ ಸಾಲಿನಂತೆಯೇ, ಆ ಗೀತೆಯೂ ಒಳಗೊಂಡಂತೆ ಅರಮನೆ ವೇದಿಕೆಯಲ್ಲಿ ಗಾನ ಮಾಧುರ್ಯ ಸೂಸಿ ಕನ್ನಡ ನಾಡು–ನುಡಿಯ ವೈಭವ ಮೆರೆಯಿತು.

ಗಾಯನದ (ಪದಗಳ) ಬಾಣಗಳು ಶ್ರೋತೃಗಳ ಎದೆ ಮೀಟಿ ಅವರ ಮನ ತಣಿಸಿದವು. ಜೊತೆಗೆ ಶಿವತಾಂಡವ ನೃತ್ಯ ರೂಪಕ ದೃಶ್ಯಕಾವ್ಯ ಅನಾವರಣಗೊಳಿಸಿ ಪ್ರೇಕ್ಷಕರ ಮನಸೂರೆಗೊಂಡಿತು. ಅಲ್ಲದೆ, ಸಿತಾರ್ ವಾದನ, ನಾದಸ್ವರದ ನಾದಮಯ ಲೋಕದಲ್ಲಿ ಪ್ರೇಕ್ಷಕರು ಸಂಭ್ರಮಿಸಿದರು.

'ಕನ್ನಡ ಕವಿಗಳ ಗೀತಾಯನ' ಶೀರ್ಷಿಕೆಯ ಕಾರ್ಯಕ್ರಮದಲ್ಲಿ ರಶ್ಮಿ ಬಿ.ಚಿಕ್ಕಮಗಳೂರು ಹಾಗೂ ಶ್ರೀಹರ್ಷ ತಮ್ಮ ಕಂಠಸಿರಿಯಲ್ಲಿ ಸುಶ್ರಾವ್ಯವಾಗಿ ಹಾಡಿ ಕನ್ನಡದ ಅಭಿಮಾನ ಮೆರೆದು ಶ್ರೋತೃಗಳ ರಂಜಿಸಿದರು. 'ಯೆಂಡ ಯೆಡ್ತಿ ಕನ್ನಡ್ ಪದಗೊಳ್ ಅಂದ್ರೆ ರತ್ನಂಗ್ ಪ್ರಾಣ...!' ಗೀತೆ ಸಾದರಪಡಿಸಿದ ಮೈಸೂರಿನ ಗಾನ ಪ್ರತಿಭೆ ಶ್ರೀಹರ್ಷ, ಕನ್ನಡದ ಹಿರಿಮೆ ಅನಾವರಣಗೊಳಿಸಿದರು. ಇವರ ಈ ಹಾಡಿಗೆ ನೆರೆದಿದ್ದ ಸಭಿಕರು ಚಪ್ಪಾಳೆ ಮೂಲಕ ತಾಳ ಹಾಕಿ ಸಂಭ್ರಮದಲ್ಲಿ ತೇಲಾಡಿದರು.

ಶಿಶುನಾಳ ಶರೀಫರ 'ತರವಲ್ಲತಗಿ ನಿನ್ನ ತಂಬೂರಿ ಸ್ವರ' ಗಾಯನ ಇವರೇ ಪ್ರಸ್ತುತಪಡಿಸಿ ಸಭಿಕರ ಮನಕ್ಕೆ ಲಗ್ಗೆಯಿಟ್ಟರು. ಅವರು ಹಾಡಲು ಆರಂಭಿಸುತ್ತಿದ್ದಂತೆ ಸಭಿಕರು ದನಿಗೂಡಿಸಿ ಹಾಡಿದರಲ್ಲದೆ, ಮುಗಿಲು ಮುಟ್ಟುವಂತಹ ಹರ್ಷೋದ್ಗಾರದೊಂದಿಗೆ ಹರ್ಷ ವ್ಯಕ್ತಪಡಿಸಿದರು.

ಎಸ್.ಎಲ್.ಭೈರಪ್ಪನವರ ಸ್ಮರಣೆ

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರನ್ನು ಸ್ಮರಿಸಿದ ಗಾಯಕ ಶ್ರೀಹರ್ಷ, ಅವರ ಒಂದೊಂದು ಪುಸ್ತಕ ಕೂಡ ಒಂದೊಂದು ಗ್ರಂಥಾಲಯ ಇದ್ದಂತೆ ಎಂದು ನುಡಿ ನಮನ ಸಲ್ಲಿಸಿ, ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಿದರು. ಅಲ್ಲದೆ, ಮತ್ತೊಬ್ಬ ಹಿರಿಯ ಸಾಹಿತಿ ಹೆಚ್.ಎಸ್.ವೆಂಕಟೇಶಮೂರ್ತಿ ಅವರನ್ನು ಸ್ಮರಿಸಿ, ಅವರ ರಚನೆಯ 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ...' ಗೀತೆಯನ್ನು ಶ್ರೀಹರ್ಷ ಪ್ರಸ್ತುತಪಡಿಸಿ ಅಗಲಿದ ಹಿರಿಯ ಸಾಹಿತಿಗಳಿಗೆ ಗೌರವ ಸಲ್ಲಿಸಿದರು.

ಇದಕ್ಕೂ ಮುನ್ನ ಶ್ರೀಹರ್ಷ ಹಾಗೂ ರಶ್ಮಿ ಬಿ.ಚಿಕ್ಕಮಗಳೂರು ಜೊತೆಯಾಗಿ ಮೈಸೂರು ಸಂಸ್ಥಾನದ 'ಕಾಯೋ ಶ್ರೀಗೌರಿ ಕರುಣಾಲಹರಿ...' ಗೀತೆ ಸಾದರಪಡಿಸಿ ಮೈಸೂರು ಒಡೆಯರಿಗೆ ಗೌರವ ಸಲ್ಲಿಸಿದರು. ರಾಷ್ಟ್ರಕವಿ ಕುವೆಂಪು ರಚಿತ 'ಬಾ ಇಂದು ಸಂಭ್ರಮಿಸು ಇಂದೆನ್ನ ಹೃದಯದಲಿ...', 'ಕೆ.ಎಸ್.ನಿಸ್ಸಾರ್ ಅಹಮದ್ ಅವರ 'ನಿತ್ಯೋತ್ಸವ...' ಗೀತೆಗಳ ಮೂಲಕ ಶ್ರೀಹರ್ಷ ಸಭಿಕರ ಮನಸೂರೆಗೊಂಡರು.

ಹೆಚ್.ಎಸ್.ವೆಂಕಟೇಶಮೂರ್ತಿ ರಚಿತ 'ತೂಗು ಮಂಚದಲ್ಲಿ ಕೂತು... ಮೇಘ ಶಾಮ ರಾಧೇಗಾತು...' ಗೀತೆ ಹಾಡಿದ ರಶ್ಮಿ ಬಿ.ಚಿಕ್ಕಮಗಳೂರು, ಕೃಷ್ಣ ಮತ್ತು ರಾಧೆಯ ಪ್ರಣಯ ಪ್ರಸಂಗ ಅನಾವರಣಗೊಳಿಸಿ, ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು. ಅಲ್ಲದೆ, ಕೆ.ಎಸ್.ನರಸಿಂಹಸ್ವಾಮಿ ಅವರ 'ದೀಪವು ನಿನ್ನದೇ ಗಾಳಿಯು ನಿನ್ನದೇ...' ಗೀತೆ ಸೇರಿದಂತೆ ಅನೇಕ ಹಾಡುಗಳನ್ನು ಇವರು ಸಾದರಪಡಿಸಿ ಶ್ರೋತೃಗಳ ಮನತಣಿಸಿದರು.

ನೃತ್ಯರೂಪಕ: ಅಪ್ರಮಿತ್ರ ಖ್ಯಾತಿಯ ವಿದ್ವಾನ್ ಶ್ರೀಧರ್ ಜೈನ್ ಅವರು ಶಿವನ ಪಾತ್ರಧಾರಿಯಾಗಿ ತಮ್ಮ ತಂಡದೊಂದಿಗೆ ಭರತನಾಟ್ಯ ಶೈಲಿಯಲ್ಲಿ 'ಶಿವತಾಂಡವ' ನೃತ್ಯರೂಪಕದೊಂದಿಗೆ ಪ್ರೇಕ್ಷಕರಿಗೆ ಪುಳಕವಿಟ್ಟರು. ಇದಕ್ಕೂ ಮುನ್ನ ಡಾ.ಮೊಹಸಿನ್ ಖಾನ್ ಮತ್ತು ತಂಡದಿಂದ ಸಿತಾರ್ ವಾದನ ಕಾರ್ಯಕ್ರಮ ನಡೆಯಿತು. ಮೊಹಸಿನ್ ಖಾನ್ ತಮ್ಮ ಸಿತಾರ್ ವಾದನದ ಮೂಲಕ ಮಹಿಷಾಸುರ ಮರ್ದಿನಿ ಸ್ತೋತ್ರದ 'ಐಗಿರಿ ನಂದಿನಿ...' ಗೀತೆಯನ್ನು ವಾದ್ಯ ಸಂಗೀತದಲ್ಲಿ ಹೊಮ್ಮಿಸಿದ್ದು ವಿಶೇಷವಾಗಿತ್ತು.

ಮೈಸೂರು ಟಿಎಪಿಸಿಎಂಎಸ್ ವಾರ್ಷಿಕ ಮಹಾಸಭೆ




ಮೈಸೂರು: ಮೈಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷರಾದ ಶ್ರೀಮತಿ ಲಲಿತಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಧ್ಯಕ್ಷ ಜಿ.ಎಂ.ಅಂದಾನಿ, ನಿರ್ದೇಶಕರಾದ ಹೆಚ್.ಗೋಪಾಲ್, ಎಂ.ಕುಮಾರ್, ಹೊನ್ನಗಿರಿಗೌಡ, ಅಣ್ಣಯ್ಯ, ಕೆ.ಚಂದ್ರಶೇಖರ್, ಯೋಗೇಶ್ ಸಿ.,ಹೆಚ್.ಪ್ರಕಾಶ್, ರಾಮಕೃಷ್ಣಾಚಾರಿ, ಬಿ.ರೇಣುಕಾ, ಶ್ರೀಮತಿ ರುಕ್ಮಿಣಿ ಮತ್ತು ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆ. ರಮೇಶ್ ಮತ್ತು ಸಿಬ್ಬಂದಿ ಹಾಜರಿದ್ದರು.

ಇದೇ ವೇಳೆ ಎಂ.ಕುಮಾರ್, ಚಲುವರಾಜೇಗೌಡ, ಬಿ.ಪಿ.ತಿಬ್ಬೇಗೌಡ, ರುಕ್ಮಿಣಿ, ಪುರಂದರ, ಹೆಚ್.ಗೋಪಾಲ್, ಬಿ.ಕೆ.ಕೃಷ್ಣೇಗೌಡ, ಹಾಲಿ ಅಧ್ಯಕ್ಷರಾದ ಶ್ರೀಮತಿ ಲಲಿತಮ್ಮ ಉಪಾಧ್ಯಕ್ಷ ಜಿ.ಎಂ. ಅಂದಾನಿಯವರನ್ನು ಸನ್ಮಾನಿಸಲಾಯಿತು. 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಇಂದಿನಿಂದ ಕೆಆರ್‌ಎಸ್‌ನಲ್ಲಿ 'ಕಾವೇರಿ ಆರತಿ'

ಇಂದು ಸಂಜೆ 5 ಗಂಟೆಗೆ ಡಿಸಿಎಂ ಡಿಕೆಶಿ ಪುಷ್ಪಾರ್ಚನೆ



ಕಾವೇರಿ ಆರತಿಗೆ ಸಕಲ ರೀತಿಯಲ್ಲಿ ಸಜ್ಜಾಗಿರುವ ಕೆಆರ್‌ಎಸ್.

ಮಂಡ್ಯ,ಸೆ.25(ಮೋಹನ್‌ರಾಜ್)– ಕನ್ನಡ ನಾಡಿನ ಜೀವನದಿ ಕಾವೇರಿ ಆರತಿ ಭವ್ಯ ಕಾರ್ಯಕ್ರಮವು ಕೆಆರ್‌ಎಸ್‌ನಲ್ಲಿ ಸೆ.26ರಿಂದ ಐದು ದಿನಗಳು ನಡೆಯಲಿದೆ.

ಶುಕ್ರವಾರ ಸಂಜೆ 5 ಗಂಟೆಗೆ ಉಪ ಮುಖ್ಯಮಂತ್ರಿಯೂ ಆದ ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು ಕಾವೇರಿ ನದಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾವೇರಿ ಆರತಿ ಕಾರ್ಯಕ್ರಮಕ್ಕೆ ಶಾಸ್ತ್ರೋಕ್ತವಾಗಿ ಚಾಲನೆ ನೀಡಲಿದ್ದಾರೆ.

ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ವೀರ ಸಿಂಹಾಸನ ಮಹಾ ಸಂಸ್ಥಾನ ಮಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ರವಿಕುಮಾರ್ ಗಣಿಗ, ಉದಯ್, ದರ್ಶನ್ ಪುಟ್ಟಣ್ಣಯ್ಯ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳು, ನೀರಾವರಿ ನಿಗಮದ ಅಧಿಕಾರಿಗಳು ಪಾಲ್ಗೊಳ್ಳುವರು.

ಗಂಗೆಯಷ್ಟೇ ಪಾವಿತ್ರ್ಯತೆ ಹೊಂದಿರುವ ಕಾವೇರಿ ನದಿಗೆ ಕಾವೇರಿ ಆರತಿ ಮಾಡಿ ಭಕ್ತಿ ಭಾವದಿಂದ ನಮಿಸಿ ಪೂಜಿಸಬೇಕೆಂಬುದು ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರ ಕನಸಾಗಿತ್ತು.

ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2024ರಲ್ಲಿ ಕೆಆರ್‌ಎಸ್‌ನಲ್ಲಿ ಕಾವೇರಿಗೆ ಬಾಗಿನ ಅರ್ಪಿಸುವ ಸಂದರ್ಭದಲ್ಲಿ ಡಿಸಿಎಂ ಅವರು ಈ ವಿಷಯವನ್ನು ಘೋಷಣೆ ಮಾಡಿದ್ದರು. ಅದರಂತೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯ ಸ್ವಾಮಿ ಅವರ ನೇತೃತ್ವದ ಶಾಸಕರ ನಿಯೋಗ ವಾರಣಾಸಿ ಮತ್ತು ಹರಿದ್ವಾರಕ್ಕೆ ಭೇಟಿ ನೀಡಿ ಗಂಗಾರತಿಯನ್ನು ವೀಕ್ಷಿಸಿ ಸರ್ಕಾರಕ್ಕೆ ವರದಿ ನೀಡಿತ್ತು. ಆ ಪ್ರಕಾರ ಸರ್ಕಾರ ಕಾವೇರಿ ಆರತಿ ಮಾಡಲು ತೀರ್ಮಾನಿಸಿ, ಸುಮಾರು 10 ಸಾವಿರ ಜನರು ಭವ್ಯ ಕಾರ್ಯಕ್ರಮ ವೀಕ್ಷಣೆ ಮಾಡಬಹುದಾದ ಬೃಹತ್ ಸ್ಟೇಡಿಯಂ ನಿರ್ಮಿಸಲು ಸಚಿವ ಸಂಪುಟ ಅನುಮೋದನೆ ನೀಡಿತು.

ಕಾವೇರಿ ಆರತಿಯ ವಿಧಿ ವಿಧಾನಗಳು: 13 ಜನರಿಂದ ಆರತಿ. ಅವರಿಗೆ ತಲಾ ಇಬ್ಬರು ಸಹಾಯಕರು ಸೇರಿ ಒಟ್ಟು 40 ಜನರ ತಂಡ ಪೂಜೆಯಲ್ಲಿ ಭಾಗಿ. ಮೊದಲು "ವಾತಾಪಿ ಗಣಪತಿಂ ಭಜೆ" ಮಂಗಳ ವಾದ್ಯದಿಂದ ಪೂಜೆ ಪ್ರಾರಂಭ ಕಾವೇರಿ ಪ್ರಾರ್ಥನೆ, ಗಣಪತಿ ಪ್ರಾರ್ಥನೆ, ಗುರು ಪ್ರಾರ್ಥನೆ, ಸಂಕಲ್ಪ, ಕಾವೇರಿ ಸ್ತೋತ್ರದ ಮೂಲಕ ತೀರ್ಥಕ್ಕೆ ಪೂಜೆ, ಬಾಗಿನ ಅರ್ಪಣೆ. ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರಾರ್ಥನೆ, ಚಾಮರ ಸೇವೆ. ಮೂರು ದಿಕ್ಕಿಗೂ ಶಂಖನಾದ, ಧೂಪದ ಆರತಿ ಹಾಗೂ ಮಂತ್ರ ಪುಷ್ಪ ಪಠಣ ಕೊನೆಯಲ್ಲಿ ಕುಂಭಾರತಿ, ನಾಗಾರತಿ, ಕಾವೇರಿ ಆರತಿಯೊಂದಿಗೆ ಪೂಜಾ ಕೈಂಕರ್ಯ ಸಂಪನ್ನವಾಗಲಿದೆ.

ಲಾಡು ಪ್ರಸಾದ ವಿತರಣೆ

ಶ್ರೀರಂಗಪಟ್ಟಣ: ಗಂಗಾ ಆರತಿ ಮಾದರಿಯಲ್ಲಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಕಾವೇರಿ ನದಿಗೆ "ಕಾವೇರಿ ಆರತಿ" ಮಾಡುವ ಕಾರ್ಯಕ್ರಮವು ಸೆ.26ರಿಂದ ಐದು ದಿನಗಳ ಕಾಲ ಕೆಆರ್‌ಎಸ್‌ನಲ್ಲಿ ನೆರವೇರಲಿದ್ದು, ಉಚಿತವಾಗಿ ಲಾಡು ಪ್ರಸಾದ ವಿತರಿಸಲಾಗುವುದು. ಕಾವೇರಿ ಆರತಿ ಕಾರ್ಯಕ್ರಮದ ವೀಕ್ಷಣೆಗೆ ಪ್ರತಿ ನಿತ್ಯ 8 ರಿಂದ 10 ಸಾವಿರಕ್ಕೂ ಅಧಿಕ ಪ್ರವಾಸಿಗರು ರಾಜ್ಯ, ಹೊರರಾಜ್ಯದಿಂದ ಆಗಮಿಸಿ "ಕಾವೇರಿ ಆರತಿ" ಯನ್ನು ವೀಕ್ಷಿಸಿ ಕಣ್ತುಂಬಿಕೊಳ್ಳಲಿದ್ದಾರೆ. ಕಾವೇರಿ ಆರತಿ ವೀಕ್ಷಿಸಲು ಆಗಮಿಸುವ ಪ್ರವಾಸಿಗರಿಗೆ ಉಪಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ಅವರು ಲಾಡು ಮಾಡಿಸಿದ್ದಾರೆ. ಪ್ರತಿನಿತ್ಯ ಲಾಡು ವಿತರಣೆಗೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. "ಕಾವೇರಿ ಆರತಿ" ವೀಕ್ಷಣೆಗೆ ಆಗಮಿಸುವ ಪ್ರವಾಸಿಗರಿಗೆ ಕಾವೇರಿ ತಾಯಿ ಪ್ರಸಾದವಾಗಿ ಲಾಡನ್ನು ಉಚಿತವಾಗಿ ವಿತರಣೆ ಮಾಡಲಾಗುವುದು.

ಶ್ರೀರಂಗಪಟ್ಟಣದಲ್ಲಿ ಅದ್ದೂರಿ ಜಂಬೂ ಸವಾರಿ

- ನಾಡದೇವತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನೆರವೇರಿಸಿದ ಟಿ.ಎಸ್.ನಾಗಾಭರಣ
- ಅಂಬಾರಿ ಹೊತ್ತು ಸಾಗಿದ 'ಮಹೇಂದ್ರ'
- ಗಮನ ಸೆಳೆದ ಸಾಂಸ್ಕೃತಿಕ ಕಲಾತಂಡಗಳು

ಶ್ರೀರಂಗಪಟ್ಟಣ, ಸೆ.25–ಶ್ರೀರಂಗಪಟ್ಟಣದ 415ನೇ ಅದ್ದೂರಿ ದಸರಾವನ್ನು ಖ್ಯಾತ ರಂಗಕರ್ಮಿ ಟಿ.ಎಸ್.ನಾಗಾಭರಣ ಉದ್ಘಾಟಿಸಿದರು. ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಶ್ರೀರಂಗಪಟ್ಟಣದಲ್ಲಿ ಆಯೋಜಿಸಲಾಗಿದ್ದ ದಸರಾ ಜಂಬೂ ಸವಾರಿ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಲಾಯಿತು.















ಕಣ್ಮನ ಸೆಳೆದ ಮೆರವಣಿಗೆ: 415 ನೇ ಶ್ರೀರಂಗಪಟ್ಟಣ ದಸರಾ ಅಂಗವಾಗಿ ಆಯೋಜಿಸಲಾಗಿದ್ದ ಪೂಜಾಕುಣಿತ, ತಮಟೆ, ನಗಾರಿ, ಪಟ್ಟಕುಣಿತ, ಹುಲಿವೇಷ, ವೀರಗಾಸೆ, ವೀರಭದ್ರಕುಣಿತ, ಕಾಳಿ ಕುಣಿತ, ಕಂಸಾಳೆ, ವೀರ ಮಕ್ಕಳ ಕುಣಿತ, ಓನಕೆ ಕುಣಿತ, ಕೋಲಾಟ, ಕರಗಿದ ಕೋಲಾಟ, ಗೊಂಬೆ ಕುಣಿತ, ಡೊಳ್ಳು ಕುಣಿತ, ಬೆಂಕಿ ಭರಾಟೆ, ದೊಣ್ಣೆ ವರಸೆ, ಸೋಮನ ಕುಣಿತ, ಬೇಡರ ವೇಷ, ಹಾಲಕ್ಕಿ ಸುಗ್ಗಿ ಕುಣಿತ, ಗಾರುಡಿ ಗೊಂಬೆ, ಚಿಲಿಪಿಲಿಗೊಂಬೆ, ನಾಸಿಕ್ ಡೋಲಾಟಗಳು ನೋಡುಗರ ಗಮನ ಸೆಳೆದವು.

ಸ್ತಬ್ಧ ಚಿತ್ರಗಳು: ತೋಟಗಾರಿಕೆ ಇಲಾಖೆಯ ಸ್ತಬ್ಧ ಚಿತ್ರಗಳು, ಕೃಷಿ ಇಲಾಖೆಯ ಸ್ತಬ್ಧಚಿತ್ರ, ಭಾರತೀಯ ಬೌದ್ಧ ಮಹಾಸಭಾ, ಕೃಷಿ ಇಲಾಖೆಯ ಸ್ತಬ್ಧಚಿತ್ರ, ಶಿಕ್ಷಣ ಇಲಾಖೆಯ ಸ್ತಬ್ಧ ಚಿತ್ರ, ರೇಷ್ಮೆ ಇಲಾಖೆಯ ಸ್ತಬ್ಧ ಚಿತ್ರ, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಂಚ ಗ್ಯಾರಂಟಿ ಯೋಜನೆಗಳ ಸ್ತಬ್ಧ ಚಿತ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮಕ್ಕಳ ಮಾರಾಟ ನಿಷೇಧ ಮತ್ತು ಅಪರಾಧ, ಅರಣ್ಯ ಇಲಾಖೆಯ ಸ್ತಬ್ಧ ಚಿತ್ರಗಳು ನೆರೆದಿದ್ದ ಸಾರ್ವಜನಿಕರ ಚಿತ್ತವನ್ನು ತನ್ನತ್ತ ಸೆಳೆದವು. ನಾಡದೇವತೆ ಚಾಮುಂಡೇಶ್ವರಿ ಹೊತ್ತ ಅಂಬಾರಿಗೆ ಪೊಲೀಸ್ ಬ್ಯಾಂಡ್ ವತಿಯಿಂದ ವಿಶೇಷ ಗೌರವ ಸಲ್ಲಿಸಲಾಯಿತು.



ಜಂಬೂ ಸವಾರಿಗೆ ಪುಷ್ಪಾರ್ಚನೆ ಮೂಲಕ ಚಾಲನೆ ನೀಡಿದ ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ, ಪಾರಂಪರಿಕ ದಸರಾ ಉದ್ಘಾಟನೆಯನ್ನು ನಾಗಾಭರಣ ಅವರು ನೆರವೇರಿಸಿದ್ದು, ನಾಲ್ಕು ದಿನಗಳ ಕಾಲ ವೈಭವಯುತವಾಗಿ ಕಾರ್ಯಕ್ರಮ ನಡೆಯಲಿದೆ. ಶ್ರೀರಂಗಪಟ್ಟಣ ಸೇರಿದಂತೆ ಮಂಡ್ಯ ಜಿಲ್ಲೆಯ ಜನರು ದಸರಾ ಮಹೋತ್ಸವವನ್ನು ಕಣ್ತುಂಬಿಕೊಳ್ಳಬೇಕೆಂದು ಮನವಿ ಮಾಡಿದರು.

ಈ ವೇಳೆ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಶಾಸಕ ರವಿಕುಮಾರ್ ಗಣಿಗ, ಮಾಜಿ ಶಾಸಕಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ. ಕುಮಾರ್ ಉಪಸ್ಥಿತರಿದ್ದರು.



ನಾರಾಯಣಪುರ ಗ್ರಾಪಂಗೆ ಸುಶೀಲಮ್ಮ ಅಧ್ಯಕ್ಷೆ

ಚಿನಕುರಳಿ: ಇಲ್ಲಿಗೆ ಸಮೀಪದ ನಾರಾಯಣಪುರ ಗ್ರಾಪಂ ಅಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಸುಶೀಲಮ್ಮ ಸ್ವಾಮೀಗೌಡ ಆಯ್ಕೆಯಾದರು.

18 ಮಂದಿ ಗ್ರಾಪಂ ಸದಸ್ಯರ ಸಂಖ್ಯಾ ಬಲ ಹೊಂದಿರುವ ಗ್ರಾಪಂ ಹಿಂದಿನ ಅಧ್ಯಕ್ಷ ಪ್ರಕಾಶ್ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಸುಶೀಲಮ್ಮ ಸ್ವಾಮೀಗೌಡ ಹಾಗೂ ರೈತ ಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಕಾವ್ಯ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಪ್ರಕಾಶ್ ಗುಪ್ತ ಮತದಾನ ನಡೆಸಿದರು.

ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಸುಶೀಲಮ್ಮ ಸ್ವಾಮೀಗೌಡ ಅವರಿಗೆ 13 ಮತಗಳು ಹಾಗೂ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕಾವ್ಯಗೆ 4 ಮತಗಳು ಬಂದವು. ಒಂದು ಮತ ತಿರಸ್ಕೃತಗೊಂಡಿತ್ತು. ಅಧಿಕ ಮತಗಳನ್ನು ಪಡೆದ ಕೆ.ಸುಶೀಲಮ್ಮಸ್ವಾಮೀಗೌಡ ಗ್ರಾಪಂನ ನೂತನ ಅಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಘೋಷಿಸಿದರು.



ಅಧ್ಯಕ್ಷೆ ಕೆ.ಸುಶೀಲಮ್ಮ ಸ್ವಾಮೀಗೌಡ ಅವರನ್ನು ಅಭಿನಂಧಿಸಲಾಯಿತು.

ಗ್ರಾಪಂ ಅಧ್ಯಕ್ಷೆಯಾಗಿ ಕೆ.ಸುಶೀಲಮ್ಮ ಸ್ವಾಮೀಗೌಡ ಅವರ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಹೊರಗಡೆ ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಿಸಿದರು. ನೂತನ ಅಧ್ಯಕ್ಷೆಗೆ ಎಲ್ಲಾ ಸದಸ್ಯರು, ಬೆಂಬಲಿಗರು, ಮುಖಂಡರು ಅಭಿನಂಧನೆ ಸಲ್ಲಿಸಿದರು.

ಅಧ್ಯಕ್ಷೆ ಕೆ.ಸುಶೀಲಮ್ಮಸ್ವಾಮೀಗೌಡ ಮಾತನಾಡಿ, ನಮ್ಮ ನಾಯಕರು, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದ, ಸಹಕಾರ ಹಾಗೂ ಎಲ್ಲಾ ಸದಸ್ಯರ ಬೆಂಬಲದಿಂದ ಸಾಮಾನ್ಯ ಮೀಸಲಾತಿಯಿಂದ ಗ್ರಾಪಂನ ಅಧ್ಯಕ್ಷೆಯಾಗಿ ಚುನಾಯಿತಳಾಗಿದ್ದೇನೆ. ಮುಂದಿನ ದಿನಗಳಲ್ಲಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಸಂದರ್ಭದಲ್ಲಿ ಗ್ರಾಪಂ ಉಪಾಧ್ಯಕ್ಷ ನವೀನ್ ಯೋಗಶೆಟ್ಟಿ, ಸದಸ್ಯರಾದ ಶಿವಶಂಕರ್, ಎನ್.ಎಸ್.ಆನಂದ್, ಪ್ರಕಾಶ್, ಶಶಿಕಲಾ ರಾಮಚಂದ್ರು, ಪ್ರಮಿಳಾ, ನಾಗರಾಜು, ಧನಲಕ್ಷ್ಮಿವೆಂಕಟೇಶ್, ಮಂಗಳಪ್ರಕಾಶ್, ಪವಿತ್ರ ಲೋಕೇಶ್, ಗೋಪಾಲಗೌಡ, ಶೋಭಾ ರಾಜೇಶ್, ಶಿವಕುಮಾರ್, ವಿಜಯರಾಮಕೃಷ್ಣ, ಮಹೇಶ್, ದೊಡ್ಡನರಸಶೆಟ್ಟಿ, ಮುಖಂಡರಾದ ನಿವೃತ್ತ ಪೊಲೀಸ್ ಅಧಿಕಾರಿ ಸ್ವಾಮೀಗೌಡ, ಚಲನಚಿತ್ರ ನಿರ್ಮಾಪಕ ಕೆ.ಮಂಜು, ಉದ್ಯಮಿ ಸತೀಶ್, ಸುರೇಶ್, ಕೋಡಾಲರಾಧಾಕೃಷ್ಣ ಕೆಂಪರಾಜು, ಕುಮಾರ್, ಎನ್.ಎಚ್.ವೆಂಕಟೇಶ್, ರಾಮಚಂದ್ರ, ಯೋಗರಾಜು, ರೆಡ್ಡಿವೆಂಕಟೇಶ್, ದೇವೇಗೌಡ, ಲತಾ ಧೀರೇಶ್, ಯುಎಸ್‌ಪಿ ಸಹನಭರತ್ ಸ್ವಾಮಿ ಸೇರಿದಂತೆ ಮುಖಂಡರು ಹಾಜರಿದ್ದರು.

ಮೂರನೇ ಪುಟದಿಂದ

ಜಾತಿಗಣತಿಗೆ ತಡೆ ಇಲ್ಲ

ಸಮೀಕ್ಷೆಯನ್ನು ನಾವು ನಿಷೇಧಿಸಲು ಸಾಧ್ಯವಿಲ್ಲ. ಆದರೂ ಸಂಗ್ರಹಿಸಿದ ದತ್ತಾಂಶವನ್ನು ಯಾವುದೇ ವ್ಯಕ್ತಿ ಬಹಿರಂಗಪಡಿಸಬಾರದು ಎಂದು ಸೂಚಿಸಿತು.

ದತ್ತಾಂಶವನ್ನು ಸಂಪೂರ್ಣವಾಗಿ ರಕ್ಷಿಸಲಾಗಿದೆ ಮತ್ತು ಗೌಪ್ಯವಾಗಿಡಲಾಗಿದೆ ಎಂದು ಆಯೋಗವು ಖಚಿತಪಡಿಸಿಕೊಳ್ಳಬೇಕು. ಈ ಪ್ರಕರಣ ಇತ್ಯರ್ಥವಾಗುವವರೆಗೆ ಯಾವುದೇ ಕಾರಣಕ್ಕೂ ಸಂಗ್ರಹಿಸಿದ ಮಾಹಿತಿ ಸೋರಿಕೆ ಆಗುವುದಿಲ್ಲ ಎಂದು ಹಿಂದುಳಿದ ವರ್ಗಗಳ ಆಯೋಗ ಅಫಿಡವಿಟ್ ಸಲ್ಲಿಸಬೇಕು ಎಂದು ಆದೇಶಿಸಿತು.

ಸಮೀಕ್ಷೆಯ ಸಮಯದಲ್ಲಿ ಮಾಹಿತಿ ಸಂಗ್ರಹಿಸಲು ಅಧಿಕಾರಿಗಳು ಯಾವುದೇ ಬಲವಂತ ಅಥವಾ ಒತ್ತಡ ಹೇರ ಬಾರದು. ಜನರು ಸ್ವಯಂ ಪ್ರೇರಣೆ ಯಿಂದ ನೀಡಿದರಷ್ಟೇ ಮಾಹಿತಿ ಪಡೆಯಬೇಕು ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ಸೂಚಿಸಿ ಪ್ರಕರಣದ ವಿಚಾರಣೆಯನ್ನು ಡಿಸೆಂಬರ್ 2ನೇ ವಾರಕ್ಕೆ ಮುಂದೂಡಿತು.

ಗಣತಿಗೆ ಗೈರಾಗುವ ಸಿಬ್ಬಂದಿ ವಿರುದ್ಧ ಕ್ರಮ

- ಸಂಪುಟ ಸಭೆ ನಿರ್ಧಾರ
- ಇಂತಹ ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಪಾಲಿಕೆ ಆಯುಕ್ತರು, ಡಿಸಿ, ಸಿಇಓಗೆ ಪವರ್

ಬೆಂಗಳೂರು, ಸೆ.25(ಕೆಎಂಶಿ)– ಜಾತಿಗಣತಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳದ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರ ಕಟ್ಟಾದೇಶ ಮಾಡಿದೆ.

ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಚಿವ ಎಚ್.ಕೆ.ಪಾಟೀಲ್, ಸರ್ಕಾರದ ನೀತಿಗಳಿಗೆ ವಿರೋಧ ಮಾಡುವವರ ಬಗ್ಗೆ ಕ್ರಮ ಕೈಗೊಳ್ಳಲು ಆಯಾ ಪಾಲಿಕೆ ಆಯುಕ್ತರು, ಜಿಲ್ಲಾಧಿಕಾರಿ ಮತ್ತು ಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂದರು.

ಸರ್ಕಾರ ಕೈಗೆತ್ತಿಕೊಂಡಿರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಿಯಮಾವಳಿ ಅಡಿ ಸಿಬ್ಬಂದಿ ಮಾಡಬೇಕಿದೆ. ಇದರಲ್ಲಿ ಲೋಪವಾದರೆ ಸಂಬಂಧಪಟ್ಟವರ ಮೇಲೆ ಕ್ರಮಕೈಗೊಳ್ಳಲಾಗುವುದು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಪಾಲಿಕೆ ಆಯುಕ್ತರು, ಜಿಲ್ಲಾಧಿಕಾರಿ ಮತ್ತು ಕಾರ್ಯನಿರ್ವಹಣಾಧಿಕಾರಿಗಳ ಜೊತೆ ವಿಡಿಯೊ ಸಂವಾದ ನಡೆಸಿ ಜಾತಿಗಣತಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡಲಿದ್ದಾರೆ. ಮೊದಲ 2 ದಿನಗಳ ಸಮೀಕ್ಷೆ ವೇಳೆ ಆಗಿದ್ದ ಸರ್ವರ್ ಡೌನ್ ಸಮಸ್ಯೆ ಈಗ ಸುಧಾರಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಗಣತಿ ಕಾರ್ಯ ದಿನಾಂಕ ವಿಸ್ತರಿಸುವ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ ಎಂದರು.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕುರಿತು ಸಿಎಂ ಸಿದ್ದರಾಮಯ್ಯ ಕೆಲವು ನಿರ್ದೇಶನ ನೀಡಲು ಮತ್ತು ಸಮಸ್ಯೆ ಪರಿಹರಿಸಲು ನಾಳೆ ಬೆಳಗ್ಗೆ 11.30ಕ್ಕೆ ಆಯಾ ಜಿಲ್ಲಾಧಿಕಾರಿಗಳು ಮತ್ತು ಜಿಪಂ ಸಿಇಓಗಳೊಂದಿಗೆ ವಿಡಿಯೊ ಕಾನ್ಫರೆನ್ಸಿಂಗ್ ನಡೆಸಲಿದ್ದಾರೆ.

ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣ ಅಂತ್ಯ: ಡಿವೈಎಸ್‌ಪಿ ಗಣಪತಿ ಅಸ್ವಾಭಾವಿಕ ಮರಣಕ್ಕೆ ಸಂಬಂಧಿಸಿದಂತೆ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಂ.ಕೆ.ಶ್ರೀವಾಸ್ತವ ವರದಿ ತಿರಸ್ಕರಿಸಿ, ನ್ಯಾಯಮೂರ್ತಿ ಕೆ.ಎನ್.ಕೇಶವ ನಾರಾಯಣ್ ವಿಚಾರಣಾ ವರದಿಯನ್ನು ಸಂಪುಟ ಭಾಗಶಃ ಒಪ್ಪಿ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ ಶಿಫಾರಸ್ಸನ್ನು ತಿರಸ್ಕರಿಸಿದೆ ಎಂದರು.

ಅಂದಿನ ಗೃಹ ಸಚಿವರಾಗಿದ್ದ ಕೆ.ಜೆ.ಜಾರ್ಜ್ ಸೇರಿದಂತೆ ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ಆರೋಪ ಮಾಡಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಬಗ್ಗೆ ಆಯೋಗ ಮತ್ತು ಸಿಬಿಐ ತನಿಖೆ ನಡೆಸಿ ಗಣಪತಿ ಆರೋಪದಲ್ಲಿ ಹುರುಳಿಲ್ಲ ಎಂಬುದಾಗಿ ನೀಡಿದ್ದ ವರದಿಯನ್ನು ರಾಜ್ಯ ಹೈಕೋರ್ಟ್ ಪುರಸ್ಕರಿಸಿತ್ತು ಇದರ ಆಧಾರದ ಮೇಲೆ ಸಂಪುಟ ಇಂದು ಈ ತೀರ್ಮಾನ ಕೈಗೊಂಡಿದೆ ಎಂದರು.

ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ಸೇವೆಯಿಂದ ನಿವೃತ್ತಿ ಹೊಂದುವ ವೇಳೆ 5 ಪಕ್ಷ ರೂ.ವರೆಗೆ ನಿಡುಘಂಟು ನೀಡಲು ಸಂಪುಟ ಸಮ್ಮತಿಸಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ನಿರ್ಣಯವೇ 15,000 ಗ್ರಾಮ ಸಹಾಯಕರಿಗೂ ಅನ್ವಯವಾಗಲಿದೆ ಕರ್ನಾಟಕ ರಾಜ್ಯ ಕೌಶಲಾಭಿವೃದ್ಧಿ ನೀತಿಗೆ ಅನುಮೋದನೆ ನೀಡಲಾಗಿದೆ ಎಂದರು.

ವಿರಾಜಪೇಟೆ ಆಸ್ಪತ್ರೆ ಮೇಲ್ದರ್ಜೆಗೆ: ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿ ಪ್ರಸ್ತುತ ಇರುವ 60 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಮೊದಲನೇ ಹಂತದಲ್ಲಿ 250 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ 95.60 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಸಚಿವರು ತಿಳಿಸಿದರು.

ಮೈಸೂರಲ್ಲಿ ಭೈರಪ್ಪನವರ ಸ್ಮಾರಕ

ಸಾಕ್ಷಿಯಾಗಿದೆ ಎಂದರು. ತಾವು ಬಿಹಾರದ ಪಾಟ್ನಾದಲ್ಲಿದ್ದಾಗಲೇ ಭೈರಪ್ಪ ನಿಧನದ ಮಾಹಿತಿ ದೊರೆಯಿತು. ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವಗಳೊಂದಿಗೆ ಮೈಸೂರಿನಲ್ಲಿ ನಡೆಸಲು ನಿರ್ಧರಿಸಲಾಯಿತು. ಸಾಹಿತ್ಯ ಹಾಗೂ ಸ್ನೇಹ ಬೇರೆಯಾಗಿದ್ದು, ನಮ್ಮ ದೃಷ್ಟಿಕೋನಗಳು ಬೇರೆಯಾಗಿದ್ದರೂ, ಉತ್ತಮ ಬಾಂಧವ್ಯ ಇತ್ತು, ವಿಚಾರಗಳಲ್ಲಿ ವಿಭಿನ್ನತೆ ಇರಬಹುದು. ಆದರೆ, ಅವರ ಬರಹಕ್ಕೆ ಎಲ್ಲರೂ ಗೌರವ ಸಲ್ಲಿಸಲೇಬೇಕು. ಹಾಗೆಂದು ನಾನು ಅವರ ಅಭಿಮಾನಿ ಆಗಿರಬೇಕೆಂದಿಲ್ಲ ಅಥವಾ ಆಗಬಾರದೂ ಎಂದಿಲ್ಲ.

ಎಸ್.ಎಲ್.ಭೈರಪ್ಪನವರ ಪಾರ್ಥಿವ ಶರೀರ; ಅಪಾರ ಜನ ನಮನ



ಭೈರಪ್ಪನವರ ಅಂತಿಮ ದರ್ಶನ ಪಡೆದ ನಂತರ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತುಕತೆಯಲ್ಲಿ ತೊಡಗಿರುವುದು. ವಿಶ್ವೇಶ್ವರ ಭಟ್, ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಭೈರಪ್ಪ ಪಾರ್ಥಿವ ಶರೀರರೊಂದಿಗೆ ಅವರ ಕುಟುಂಬದವರು, ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಮತ್ತಿತರರು ಆಗಮಿಸಿದರು.

ಗಣ್ಯರು, ಓದುಗ ಅಭಿಮಾನಿಗಳು ಸೇರಿದಂತೆ ಅಪಾರ ಸಂಖ್ಯೆಯ ಜನ ಭೈರಪ್ಪನವರ ಅಂತಿಮ ದರ್ಶನ ಪಡೆದು, ನಮನ ಸಲ್ಲಿಸಿದರು. ಸಂಜೆ 6 ಗಂಟೆವರೆಗೆ ಅಂತಿಮ ದರ್ಶನಕ್ಕೆ ಅನುವು ಮಾಡಿಕೊಟ್ಟು ನಂತರ ಪಾರ್ಥಿವ ಶರೀರವನ್ನು ಜೆಎಸ್‌ಎಸ್ ಆಸ್ಪತ್ರೆಯ ಕೋಲ್ಡ್ ಸ್ಟೋರೇಜ್‌ಗೆ ರವಾನೆ ಮಾಡಲಾಯಿತು. ಶುಕ್ರವಾರ(ಸೆ.26) ಬೆಳಗ್ಗೆ 8.30ಕ್ಕೆ ಕುವೆಂಪುನಗರ ಉದಯ ರವಿ ರಸ್ತೆಯಲ್ಲಿರುವ ಭೈರಪ್ಪ ಅವರ ನಿವಾಸದಲ್ಲಿ ಅಂತಿಮ ವಿಧಿವಿಧಾನ ನಡೆಸಿ, ಬೆಳಗ್ಗೆ 11 ಗಂಟೆ ಹೊತ್ತಿಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತದೆ.

ಗಣ್ಯರಿಂದ ದರ್ಶನ: ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ರಾಮಕೃಷ್ಣ ಆಶ್ರಮದ ಶ್ರೀಯುಕ್ತೇಶಾನಂದಜೀ ಸೇರಿದಂತೆ ಅನೇಕ ಸ್ವಾಮೀಜಿಗಳು, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಕೆ.ಶಿವಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಪಂ ಸಿಇಓ ಯುಕೇಶ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಮೈಸೂರು ವಿಭಾಗದ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯದರ್ಶಿ ಶಿವಕುಮಾರಸ್ವಾಮಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಲೋಕನಾಥ್, ಮಾಜಿ ಮೇಯರ್ ಶಿವಕುಮಾರ್, ಹಿರಿಯ ವಿದ್ವಾಂಸ ಟಿ.ವಿ.ವೆಂಕಟಚಲಶಾಸ್ತ್ರಿ, ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಮಾಜಿ ನಿರ್ದೇಶಕರಾದ ಅಡ್ಡಂಡ ಕಾರ್ಯಪ್ಪ, ಹೆಚ್.ಜನಾರ್ಧನ್ (ಜನ್ನಿ), ಪ್ರೊ.ನಂಜರಾಜ ಅರಸ್, ಪ್ರೊ.ಅರವಿಂದ ಮಾಲಗತ್ತಿ, ಪ್ರತಾಪ್ ಸಿಂಹ ಅವರ ಪತ್ನಿ ಅರ್ಪಿತಾ ಸಿಂಹ, ಮೈಸೂರು ಲಿಟರರಿ ಫೋರಂನ ಶುಭ ಸಂಜಯ್ ಅರಸ್, ತಾತಯ್ಯ ಅನಾಥಾಲಯದ ಸಿ.ವಿ.ಗೋಪಿನಾಥ್, ಬ್ರಾಹ್ಮಣರ ಸಂಘದ ಡಿ.ಟಿ.ಪ್ರಕಾಶ್, ಜಯಪ್ರಕಾಶ್(ಜೆಪಿ), ಮೂಗೂರು ನಂಜುಂಡಸ್ವಾಮಿ, ರಘುರಾವ್ ವಾಜಪೇಯಿ ಸೇರಿದಂತೆ ಅನೇಕ ಗಣ್ಯರು ಭೈರಪ್ಪನವರ ಅಂತಿಮ ದರ್ಶನ ಪಡೆದರು.

ಭೈರವೇಶ್ವರನ ಹೆಸರಿಟ್ಟಿದ್ದರು: ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ಭೈರಪ್ಪನವರು ಸಾರಸ್ವತ ಲೋಕಕ್ಕೆ ಅಗಾಧವಾದ ಕೊಡುಗೆ ನೀಡಿದ್ದಾರೆ ಭೈರಪ್ಪ ಅವರ ತಾಯಿ ಅವರ ಊರಿನಲ್ಲಿರುವ ಭೈರವೇಶ್ವರ ಸ್ವಾಮಿಯನ್ನು ಪೂಜಿಸುತ್ತಿದ್ದ ಕಾರಣ ಪುತ್ರನಿಗೆ ಭೈರಪ್ಪ ಎಂದು ಹೆಸರಿಟ್ಟರಂತೆ. ಭೈರಪ್ಪ ಅವರಿಗೆ ಆದಿಚುಂಚನಗಿರಿ ಕ್ಷೇತ್ರದಿಂದ ಚುಂಚಶ್ರೀ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಲಾಗಿತ್ತು ಎಂದು ಸ್ಮರಿಸಿಕೊಂಡರು.

ಉದಾತ್ತ ಧ್ಯೇಯದವರು: ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಭೈರಪ್ಪನವರ ಅಗಲಿಕೆಯಿಂದ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಮೇರುಪರ್ವತದಂತಿದ್ದ ಅವರ ಕಾದಂಬರಿಗಳು ಯುವ ಜನತೆಯ ಓದುವ ದಿಕ್ಕನ್ನೇ ಬದಲಾಯಿಸಿದವು. ವಂಶವೃಕ್ಷ ಇಡೀ ಸಮಾಜದ ಬೇರನ್ನೇ ಅಲುಗಾಡಿಸಿತ್ತು. ಅವರೆಂದೂ ಒಂದೆಡೆ ಕೂತು ಬರೆದವರಲ್ಲ. ಪ್ರವಾಸ ಮಾಡಿ ನಿಜ ಜೀವನಕ್ಕೆ ಹತ್ತಿರವಾದ ವಿಚಾರಗಳ ಬಗ್ಗೆ ಕೂಲಂಕುಶವಾಗಿ ಅಧ್ಯಯನ ಮಾಡಿದ ನಂತರವೇ ಬರೆದಿದ್ದಾರೆ. ಭೈರಪ್ಪನವರು ಬಡತನದ ಬಂದವರಾದ್ದರಿಂದ ಅನುಭವ, ಆಳವಾದ ಚಿಂತೆಯಿಂದ ಕಾದಂಬರಿ ರಚಿಸುತ್ತಿದ್ದರು. ಬಾನು ಮುಷ್ತಾಕ್ ಅವರೂ ಭೈರಪ್ಪನವರನ್ನು ಸಹೋದರನೆಂದು ಹೇಳಿದ್ದಾರೆ. ಇಂತಹ ಉದಾತ್ತ ಗುಣ ಹಾಗೂ ಧ್ಯೇಯ ಹೊಂದಿದ್ದ ರಾಷ್ಟ್ರವಾದಿ ಭೈರಪ್ಪನವರ ಅಗಲಿಕೆ ತುಂಬಲಾರದ ನಷ್ಟ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಮೈಸೂರಲ್ಲಿ ಭೈರಪ್ಪ ಸ್ಮಾರಕ ಸ್ಥಾಪನೆ ಸಂಬಂಧ ಮನೆಯವರೊಂದಿಗೆ ಮಾತನಾಡುವುದಾಗಿ ತಿಳಿಸಿದರು.

ವಿಧಾನಪರಿಷತ್ ಸದಸ್ಯ ಶಿವಕುಮಾರ್, ಹಿರಿಯ ವಿದ್ವಾಂಸರಾದ ಟಿ.ವಿ.ವೆಂಕಟಾಚಲ ಶಾಸ್ತ್ರಿ, ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಸೇರಿದಂತೆ ಹಲವು ಗಣ್ಯರು ಹಾಗೂ ಭೈರಪ್ಪ ಅವರ ಅಭಿಮಾನಿಗಳು ಮಾಧ್ಯಮಗಳೊಂದಿಗೆ ಮಾತನಾಡಿ, ಭೈರಪ್ಪ ಅವರ ಸಾಹಿತ್ಯ ಸಾಧನೆ, ವ್ಯಕ್ತಿತ್ವ, ಬದುಕಿನ ಬದ್ಧತೆಯನ್ನು ಬಣ್ಣಿಸಿದರು.

ಭೈರಪ್ಪನವರ ಕೊನೆ ಆಸೆ ಈಡೇರಿಸಿದ ಸಮಾಧಾನ

ಮೈಸೂರು: ದಿವಂಗತ ಎಸ್.ಎಲ್.ಭೈರಪ್ಪನವರ ಆಸೆ ಈಡೇರಿಸಿದ ಸಂತೃಪ್ತಿ ನನಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೈಸೂರಿನಲ್ಲಿ ಎಸ್.ಎಲ್.ಭೈರಪ್ಪ ಅವರ ಅಂತಿಮ ದರ್ಶನ ಪಡೆದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್.ಎಲ್.ಭೈರಪ್ಪ ಅವರು ಎಷ್ಟೇ ಎತ್ತರಕ್ಕೆ ಬೆಳೆದರೂ ತಮ್ಮ ಮೂಲ ಬೇರನ್ನು ಎಂದೂ ಮರೆಯಲಿಲ್ಲ. ಹುಟ್ಟೂರು ಹಾಗೂ ರೈತರ ಬಗ್ಗೆ ಅಪಾರ ಪ್ರೀತಿ ಇತ್ತು ಎಂದರು.

ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನನ್ನನ್ನು ಭೇಟಿ ಮಾಡಿದ ಅವರು ಯಾವ ಪ್ರಶಸ್ತಿ ಅಥವಾ ಸ್ವಂತಕ್ಕೆ ಬೇರೆ ಏನನ್ನು ಕೇಳಲಿಲ್ಲ. ನಮ್ಮ ಊರಿಗೆ ನೀರು ಕೊಡಪ್ಪಾ ಅಂತ ಕೇಳಿದರು. ನಾವು ಅದನ್ನ ಮರೆಯದೆ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿದೆವು. ಅವರ ಬೇಡಿಕೆ ಈಡೇರಿದ ನಂತರ ನಾನು ಮುಖ್ಯಮಂತ್ರಿ ಸ್ಥಾನದಲ್ಲಿ ಇಲ್ಲದಿದ್ದರೂ ಸಮಾರಂಭಕ್ಕೆ ನನ್ನನ್ನೇ ಆಹ್ವಾನಿಸಿದ್ದರು. ಅವರ ಆಸೆ ಈಡೇರಿಸಿದ ಸಂತೃಪ್ತಿ ನನಗಿದೆ. ಭೈರಪ್ಪನವರ ಟ್ರಸ್ಟ್ ಅನ್ನು ನಾನೇ ಉದ್ಘಾಟಿಸಿದ್ದೆ ಎಂದು ತಿಳಿಸಿದರು.

ಸಾಹಿತ್ಯ ಲೋಕದ ಅತ್ಯಂತ ಕ್ರಿಯಾಶೀಲ ಸಾಹಿತಿ ನಮ್ಮನ್ನು ಅಗಲಿದ್ದಾರೆ. ತಮ್ಮನ್ನು ತಾವು ಆಚೆ ಇಟ್ಟುಕೊಂಡು ವಿಶ್ಲೇಷಣೆ ಮಾಡಿ ಮಾಡುವವರು ಸಾಕಷ್ಟಿದ್ದಾರೆ. ಆದರೆ ತಮ್ಮನ್ನೂ ಒಳಗೊಂಡಂತೆ ವೈಚಾರಿಕತೆ, ವಸ್ತುಸ್ಥಿತಿಯ ಮೇಲೆ ಸಾಹಿತ್ಯ ರಚನೆ ಮಾಡುವ ವ್ಯಕ್ತಿತ್ವ ಭೈರಪ್ಪನವರದ್ದಾಗಿತ್ತು. ಈ ರೀತಿಯ ವೈಚಾರಿಕ ವ್ಯಕ್ತಿತ್ವ ಬಹಳ ಅಪರೂಪ. ಎಲ್ಲವನ್ನು ಕೂಡ ಸತ್ಯದ ದೃಷ್ಟಿಯಿಂದ ನೋಡುತ್ತಿದ್ದರು ಎಂದರು.

ಉತ್ತರಕಾಂಡದಲ್ಲಿ ರಾಮಾಯಣದ ಮತ್ತೊಂದು ಆಯಾಮ ಹಾಗೂ ಪರ್ವದಲ್ಲಿ ಮಹಾಭಾರತದ ಮತ್ತೊಂದು ಆಯಾಮವನ್ನು ಅನಾವರಣಗೊಳಿಸಿದ್ದಾರೆ. ವಂಶವೃಕ್ಷ ಕಾದಂಬರಿ ದೇಶಾದ್ಯಂತ ಕ್ರಾಂತಿ ಉಂಟು ಮಾಡಿ, ಸಿನಿಮಾ ಕೂಡ ಆಯಿತು. ವಸ್ತುನಿಷ್ಠ ಸತ್ವ ಹಾಗೂ ಬದುಕಿನ ಸಾರ ಭೈರಪ್ಪನವರ ಸಾಹಿತ್ಯದಲ್ಲಿತ್ತು. ಭೈರಪ್ಪನವರು ಯಾವತ್ತು ಬದುಕು ಬಿಟ್ಟವರಲ್ಲ. ವಸ್ತುನಿಷ್ಠ ಸಮಾಜ ಭೈರಪ್ಪನವರಿಗೆ ವಿಶ್ವಾಸ ತೋರಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿಬಾಯಿಸುವುದೆಂಬ ವಿಶ್ವಾಸವಿದೆ. ಸಾಧಕನ ಸಾವು ಅಂತ್ಯವಲ್ಲ, ಆ ನಂತರವೂ ಸಾಧಕ ಬದುಕಿರುತ್ತಾನೆ ಎಂಬ ಸ್ವಾಮಿ ವಿವೇಕಾನಂದರ ನುಡಿಯಂತೆ ಭೈರಪ್ಪನವರು ಶಾಶ್ವತವಾಗಿರುತ್ತಾರೆ ಎಂದು ಅಭಿಪ್ರಾಯಿಸಿದರು.

> ಸಕಲ ಸರ್ಕಾರಿ ಗೌರವಗಳೊಂದಿಗೆ ಭೈರಪ್ಪನವರ ಅಂತ್ಯಕ್ರಿಯೆ ನಡೆಸಲು ಸಿಎಂ ಸಿದ್ದರಾಮಯ್ಯನವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಮಹದೇವಪ್ಪನವರು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ. ಭೈರಪ್ಪನವರ ಪಾರ್ಥಿವ ಶರೀರವನ್ನು ಇಂದು ರಾತ್ರಿ ಜೆಎಸ್‌ಎಸ್ ಆಸ್ಪತ್ರೆಯ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು, ನಾಳೆ(ಶುಕ್ರವಾರ) ಬೆಳಗ್ಗೆ 8 ಗಂಟೆ ಹೊತ್ತಿಗೆ ಅವರ ನಿವಾಸದ ಬಳಿ ಕೊಂಡೊಯ್ದು ಅಲ್ಲಿಯೂ ಅಂತಿಮ ದರ್ಶನಕ್ಕೆ ಅನುವು ಮಾಡಿಕೊಟ್ಟು, ನಂತರ ಚಾಮುಂಡಿಬೆಟ್ಟ ತಪ್ಪಲಿನ ಚಿತಾಗಾರದಲ್ಲಿ ಬೆಳಗ್ಗೆ 11 ಗಂಟೆ ವೇಳೆಗೆ ಅಂತ್ಯಕ್ರಿಯೆ ನಡೆಸಲು ನಿರ್ಧರಿಸಲಾಗಿದೆ.
>
> -ಪ್ರತಾಪ್ ಸಿಂಹ, ಮಾಜಿ ಸಂಸದ

> ಭೈರಪ್ಪನವರು ಕನ್ನಡನಾಡಿನ ಸಾಹಿತ್ಯ ಲೋಕದ ದಿಗ್ಗಜ. ಇಂತಹ ಸಾಹಿತಿಗೆ ಜ್ಞಾನಪೀಠ ಪುರಸ್ಕಾರ ಸಿಗಲಿಲ್ಲ. ಇದು ಸರಕಾರದ ಉತ್ಪೇಕ್ಷೆಯೊ... ರಾಜಕಾರಣವೋ ಗೊತ್ತಿಲ್ಲ. ಆದರೆ ಹೀಗೆ ಆಗಬಾರದಿತ್ತು. ಸಾಹಿತ್ಯ ಲೋಕಕ್ಕೆ ರಾಜಕಾರಣಿಗಳು ಮಾಡಿದ ಅಪಮಾನವೆನಿಸುತ್ತದೆ.
>
> -ಎ.ಹೆಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

> ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿರುವ ಸರಸ್ವತಿ ಸಮ್ಮಾನ್, ಪದ್ಮಭೂಷಣ ಡಾ.ಎಸ್.ಎಲ್.ಭೈರಪ್ಪನವರ ಅಗಲಿಕೆ ಅತೀವ ನೋವು ತಂದಿದೆ. ಕಾದಂಬರಿ ಮೂಲಕ ಇಡೀ ಮನುಕುಲವನ್ನು ಎಚ್ಚರಿಸಿದ್ದಾರೆ. ಇಂಥಹ ಸಾಹಿತ್ಯ ರತ್ನವನ್ನು ಕಳೆದುಕೊಂಡ ನಾವುಗಳು ಅನಾಥರಾಗಿದ್ದೇವೆ. ಆದರೂ ಅವರ ಸಾಹಿತ್ಯದ ಮೂಲಕ ಸದಾ ಜೀವಂತವಾಗಿರುತ್ತಾರೆ. ಅವರ ಅಪಾರ ಓದುಗ ಅಭಿಮಾನಿಗಳು, ಹಿತೈಷಿಗಳು, ಕುಟುಂಬ ವರ್ಗಕ್ಕೆ ಭಗವಂತ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.
>
> -ವಿ.ಶೈಲೇಂದ್ರ, ಮಾಜಿ ಉಪ ಮೇಯರ್

> ಎಸ್.ಎಲ್.ಭೈರಪ್ಪ ಅವರು ತಾವು ಸಂಪಾದಿಸಿದ ಹಣದಲ್ಲಿ ಸ್ವಲ್ಪ ಭಾಗವನ್ನು ಬಡಜನರ ಕಲ್ಯಾಣಕ್ಕಾಗಿ ದಾನ ಮಾಡುತ್ತಿದ್ದರು. ತಮಗೆ ಬಂದ ಪ್ರಶಸ್ತಿಗಳ ಮೊತ್ತವನ್ನು ಸದ್ವಿನಿಯೋಗ ಮಾಡುತ್ತಿದ್ದರು. ಪುಸ್ತಕಗಳ ಗೌರವ ಧನವನ್ನು ತಾವು ರಚಿಸಿದ ಟ್ರಸ್ಟ್‌ಗೆ ನೀಡುತ್ತಿದ್ದರು. ಇಂತಹ ಮೇರು ವ್ಯಕ್ತಿತ್ವದ ಸಾಹಿತಿಯ ನಿಧನ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.
>
> -ಶಿವಕುಮಾರ್, ವಿಧಾನ ಪರಿಷತ್ ಸದಸ್ಯ

ವಿಲ್‌ನಲ್ಲಿ ಬರೆದಂತೆ ಅಂತ್ಯಸಂಸ್ಕಾರ ನಡೆಯಲೆಂದು ಒತ್ತಾಯ


ಮೈಸೂರು: ಅಂತಿಮ ದರ್ಶನದ ವೇಳೆ ಕೆಲವರು ಏರುಧ್ವನಿಯಲ್ಲಿ ಭೈರಪ್ಪನವರ ಅಂತ್ಯಕ್ರಿಯೆಯನ್ನು ಅವರು ವಿಲ್ (ಉಯಿಲು)ನಲ್ಲಿ ಬರೆದಿರುವಂತೆ ನಡೆಸಬೇಕೆಂದು ಆಗ್ರಹಿಸಿದ್ದರಿಂದ ಕೆಲಕಾಲ ಗದ್ದಲ ಉಂಟಾಗಿತ್ತು.

ಭೈರಪ್ಪನವರ ಪಾರ್ಥಿವ ಶರೀರವನ್ನು ಕಲಾಮಂದಿರ ಆವರಣದಿಂದ ಜೆಎಸ್‌ಎಸ್ ಆಸ್ಪತ್ರೆಗೆ ರವಾನಿಸುವ ಹತ್ತು ನಿಮಿಷ ಮುನ್ನ ವ್ಯಕ್ತಿಯೊಬ್ಬರು ಜೋರಾಗಿ ಮಾತನಾಡಲಾರಂಭಿಸಿದ್ದರು. ಇದರಿಂದ ನೆರೆದಿದ್ದವರು ಹಾಗೂ ಮಾಧ್ಯಮವರು ಅವರನ್ನು ವಿಚಾರಿಸಲು ಮುಂದಾದರು.

ಆಗ ತಮ್ಮನ್ನು ಭೈರಪ್ಪ ಅವರ ಅಭಿಮಾನಿ ಫಣೀಶ್ ಎಂದು ಪರಿಚಯಿಸಿಕೊಂಡ ವ್ಯಕ್ತಿ, ಭೈರಪ್ಪನವರು ತಮ್ಮ ಮಕ್ಕಳು ಅಂತ್ಯಕ್ರಿಯೆ ನಡೆಸಬಾರದು. ಕಡೇ ದಿನಗಳಲ್ಲಿ ಮಗಳಂತೆ ಆರೈಕೆ ಮಾಡಿದ ಶ್ರೀಮತಿ ಸಹನಾ ವಿಜಯ್ ಕುಮಾರ್ ಅವರೇ ಈ ಜವಾಬ್ದಾರಿ ನೆರವೇರಿಸಬೇಕು. ಹುಟ್ಟೂರಾದ ಸಂತೇಶಿವರದಲ್ಲೇ ಅಂತ್ಯಸಂಸ್ಕಾರ ಮಾಡಬೇಕು ಎಂದು ವಿಲ್‌ನಲ್ಲಿ ಬರೆದಿದ್ದಾರೆ. ವಿಲ್‌ನ ಪ್ರತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಗಮನಿಸಿದ್ದೇವೆ ಅವರು ತಿಳಿಸಿರುವಂತೆಯೇ ಅಂತ್ಯಕ್ರಿಯೆ ನಡೆಸಬೇಕು ಎನ್ನುವುದು ನಮ್ಮ ಆಶಯ. ಇದನ್ನು ಸರ್ಕಾರವೇ ನಿಬಾಯಿಸಬೇಕು ಎಂದು ಆಗ್ರಹಿಸಿದರು. ಜನ ಗುಂಪು ಸೇರಿದ್ದರಿಂದ ಕೂಡಲೇ ಪೊಲೀಸರು ಆ ವ್ಯಕ್ತಿಯನ್ನು ಕಲಾಮಂದಿರ ಆವರಣದಿಂದ ಹೊರಗೆ ಕಳುಹಿಸಿ, ಪರಿಸ್ಥಿತಿ ತಿಳಿಗೊಳಿಸಿದರು.

ಮೈಸೂರು ದಸರಾ ಮಹೋತ್ಸವ-2025

ಬಾಲಿವುಡ್ ಗಾಯಕ ಜುಬಿನ್ ನೌಟಿಯಾಲ್ ಮೋಡಿಗೆ ಮಾರು ಹೋದ ಕಿಕ್ಕಿರಿದಿದ್ದ ಸಂಗೀತ ಪ್ರಿಯರು


ಜುಬಿನ್ ನೌಟಿಯಾಲ್ ಗಾಯನ ಮೋಡಿ


ತೆಲುಗು ಗಾಯಕ ಶ್ರೀರಾಮ ಚಂದ್ರ ಗಾಯನದೊಂದಿಗೆ ತಂಡದ ಜೊತೆ ನೃತ್ಯ ಪ್ರದರ್ಶಿಸಿದರು.

ಮೈಸೂರು, ಸೆ.25(ವಿವಿಹೆಚ್)– ಮೊಹಬ್ಬತ್ ಕೆ ಮೇರಿ.. ಎಲ್ಲರಿಗೂ ಹಾಯ್ ಹೇಳುತ್ತಾ ಬೆಂಕಿ ಉಂಡೆಗಳ ನಡುವೆ ಹಿತವಾದ ದನಿಯೊಂದು ಜನರ ಕಡೆಗೆ ಹಾದು ಬಂತು.. ತಮ್ಮ ನೆಚ್ಚಿನ ಗಾಯಕ ಜುಬಿನ್ ನೌಟಿಯಾಲ್ ಅವರನ್ನು ಕಂಡ ಅಭಿಮಾನಿ ವರ್ಗ ತಮ್ಮ ಮೊಬೈಲ್‌ನಲ್ಲಿ ಅವರ ಸೆರೆಹಿಡಿಯಲು ಮುಂದಾದರು.

ಮೈಸೂರು ದಸರಾ ಉತ್ಸವದ ಸಂಗೀತ ರಸಸಂಜೆ ಮಹಾ ವೇದಿಕೆಯಾದ 'ಯುವ ದಸರಾ' ಮೂರನೇ ದಿನವಾದ ಗುರುವಾರ ನಗರದ ಹೊರ ವಲಯದ ಉತ್ತನಹಳ್ಳಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸಮೀಪದ ಆವರಣದಲ್ಲಿ ಕಂಡುಬಂದ ದೃಶ್ಯಗಳಿವು...

ನಮಸ್ಕಾರ ಮೈಸೂರು... ಎಲ್ಲರೂ ಹೇಗಿದ್ದೀರಾ.... ಇದೇ ಮೊದಲ ಬಾರಿಗೆ ಮೈಸೂರಿನ ದಸರಾದಲ್ಲಿ ಸಂಗೀತ ಕಾರ್ಯಕ್ರಮ ನೀಡುತ್ತಿದ್ದೇನೆ.. ನಿಜಕ್ಕೂ ಇದು ಸಂತಸದ ಕ್ಷಣವಾಗಿದೆ. ಕನ್ನಡದಲ್ಲಿ ಹಾಡು ಹಾಡಲು ಈವರೆಗೆ ಅವಕಾಶ ಸಿಕ್ಕಿಲ್ಲ. ಕನ್ನಡದಲ್ಲಿ ಹಾಡುಗಳನ್ನು ಹಾಡಲು ಪ್ರಯತ್ನಿಸುತ್ತೇನೆ ಎಂದು ಅಭಿಮಾನಿಗಳತ್ತ ಕೈಬೀಸಿದರು ಗಾಯಕ ನೌಟಿಯಾಲ್.

ಗಿಟಾರ್ ಹಿಡಿದು ಹಿಂದಿಯ ಹಾಡುಗಳಾದ ಫಹಲಾ ಸಫರ್ ಮೇ.., ಏಕ್ ಮುಲಾಕಾತ್ ಹು.. ತ ಮೇರೆ ಪಾಸ್ ಹೋ.., ನಾ ಚಯನೆ ಸೇ ಜೀನಾ ದೇದಿ, ನಾ ಚಯನೇ ಸೇ ಮರನಾ ದೇದಿ.., ಜಬ್ ಜಬ್ ತೇರೆ.. ಜಿಸ್ ಮೇ ಕಾ.. ಸೇರಿದಂತೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದ್ದ ಸಯಾರಾ ಚಿತ್ರದ ಗೀತೆಗೆ ಮೊದಲ ಬಾರಿಗೆ ಯುವ ದಸರಾ ವೇದಿಕೆಯಲ್ಲಿ ತುಜಸೇ ದೂರ್ ಮೇ ಕಿ ವಜಾ ಕೆ ಲಿಯೇ ಹೂ.... ಎಂದು ಹಾಡುವ ಮೂಲಕ ಪ್ರೇಕ್ಷಕ ಮಹೋದಯರನ್ನು ಮನರಂಜಿಸಿದರು.

ಶ್ರೀರಾಮ ಚಂದ್ರ ಅವರ ಗಾಯನ ಮೋಡಿ ಎಲ್ಲರನ್ನೂ ಹುಚ್ಚೆದ್ದು ಕುಣಿಯುವಂತೆ ಮಾಡಿತು. ಕನ್ನಡ, ತೆಲುಗು, ಹಿಂದಿ ಹಾಡುಗಳನ್ನು ಹಾಡುವ ಮೂಲಕ ಪ್ರೇಕ್ಷಕರ ಶಿಳ್ಳೆ ಚಪ್ಪಾಳೆ ಗಳಿಸಿದರು.

> ನಾನು ಯುವ ದಸರಾ ಕಾರ್ಯಕ್ರಮ ನೋಡಲು ಚಾಮರಾಜನಗರದಿಂದ ಬಂದಿದ್ದೇನೆ. ಕೋಟ್ಯಾಂತರ ರೂ. ಖರ್ಚು ಮಾಡಿ ಸರ್ಕಾರ ಕಾರ್ಯಕ್ರಮ ಆಯೋಜಿಸಿದೆ. ಆದರೆ ಇಲ್ಲಿ ಅವ್ಯವಸ್ಥೆ ತಾಂಡವ ವಾಡುತ್ತಿದೆ. ನಮಗೆ ಹಿಂದಿ ಅರ್ಥವೇ ಆಗದ ಭಾಷೆ.. ಮೊದಲೇ ಹಿಂದಿ ಏರಿಕೆ ವಿರುದ್ಧ ದನಿ ಎತ್ತುವ ಸರ್ಕಾರ ಎಲ್ಲ ಕಾರ್ಯಕ್ರಮವನ್ನು ಪರ ಭಾಷೆಯ ವರಿಗೆ ನೀಡಿರುವುದು ಅವರ ದ್ವಂದ ನಿಲುವಿಗೆ ಹಿಡಿದ ಕೈಗನ್ನಡಿಯಾಗಿದೆ. ಬಹುಶಃ ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ಹಿಂದಿ ಏರಿಕೆಗೆ ಸರ್ಕಾರವೇ ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿದೆ ಎಂದು ನನಗನ್ನಿಸುತ್ತಿದೆ.
> -ಕಿರಣ್ ಎಸ್.
> ರಾಮ ಸಮುದ್ರ, ಚಾಮರಾಜನಗರ

ಜವಾನ್ ಚಿತ್ರದ ಚಲಿಯಾ ತೇರಿ ಓರ್ ಕೇ, ಚಲೆಯಾ ಹೇ ಜೋರ್ ಕೇ.., ಕೇಸರಿಯಾ ತೇರಾ.., ರಬನೆ ಬನಾಂಯಾ.., ಎಂಬ ಗಾಯನದೊಂದಿಗೆ ನೃತ್ಯದ ಝಳಕ್ ಅನ್ನು ಸಹ ಪ್ರದರ್ಶಿಸಿದರು. ಜೊತೆಗೆ ಕನ್ನಡದ ಮುಂಗಾರು ಮಳೆ ಚಿತ್ರದ ಅನಿಸುತಿದೆ ಯಾಕೋ ಇಂದು.. ನೀನೇನೆ ನನ್ನವಳೆಂದು ಹಾಡುವ ಮೂಲಕ ಕನ್ನಡಿಗರ ಮನಸ್ಸನ್ನು ಕದ್ದರೆ, ಬ್ರಹ್ಮಾಸ್ತ್ರದ ದೇವಾ ದೇವಾ ಹೋ. ದಿ ಬೀಸ್ಟ್ ಚಿತ್ರ ಸೇರಿದಂತೆ ಸಾಕಷ್ಟು ಪ್ರಸಿದ್ಧ ತೆಲುಗು, ಹಿಂದಿ ಚಿತ್ರಗಳ ಹಾಡನ್ನು ಹಾಡುವ ಮೂಲಕ ನೆರೆದಿದ್ದ ಯುವ ಸಮೂಹದ ನಿಂತಲ್ಲೇ ಕುಣಿದು ಕುಪ್ಪಳಿಸುವಂತೆ ಮಾಡಿದರು.

ಇದಕ್ಕೂ ಮುನ್ನ ಗಾಯಕ ಚಿನ್ಮಯ್ ಆತ್ರೇಯ ಅವರಿಂದ ಕರಾಟೆ ಕಿಂಗ್ ಶಂಕರ್ ಅವರ 'ಒಂದೇ ಒಂದು ಆಸೆಯು ತೋಳಲಿ ಬಳಸಲು..', ಡಾ.ರಾಜ್‌ಕುಮಾರ್ ಅವರ 'ಹೊಸ ಬೆಳಕು ಮೂಡುತ್ತಿದೆ...', ರವಿಚಂದ್ರನ್ ಅವರ 'ಯಾರೇ ನೀನು ರೋಜಾ ಹೂವೆ, ಯಾರೇ ನೀನು ಮಲ್ಲಿಗೆ ಹೂವೇ...', ಎಂಬಿನ್ನಿತರೆ ಕನ್ನಡದ ಹಾಡಿಗೆ ಧ್ವನಿಗೂಡಿಸಿದರು

ಪೊಲೀಸರಿಂದ ರೂಲ್ಸ್ ಬ್ರೇಕ್: ನೌಟಿಯಾಲ್ ಕಾರ್ಯಕ್ರಮ ವೀಕ್ಷಣೆಗೆ ಆಗಮಿಸಿದ್ದ ಅಪಾರ ಜನಸಂಖ್ಯೆ ಜನರನ್ನು ನಿಯಂತ್ರಿಸುವಲ್ಲಿ ವಿಫಲವಾದ ಪೊಲೀಸರು ಕೊನೆಗೆ ಲಾಠಿ ಬೀಸಿ ಜನದಟ್ಟಣೆ ನಿಯಂತ್ರಿಸಿದರು.

ಇತ್ತ ತಮ್ಮ ನೆಚ್ಚಿನ ಗಾಯಕನನ್ನು ನೋಡಲು ಮುಗಿ ಬೀಳಲುತ್ತಿದ್ದ ಅಭಿಮಾನಿಗಳನ್ನು ಒಳಾಂಗಣಕ್ಕೆ ಬಿಡದೇ ಲಾಠಿ ಬೀಸುತ್ತಿದ್ದರೆ, ಮತ್ತೊಂದೆಡೆ ಕರ್ತವ್ಯಕ್ಕೆ ನಿಯೋಜಿಸದಿದ್ದರೂ ಕುಟುಂಬ ಸಮೇತ ಬಂದು ಬೇಕೆಂದ ಜಾಗದಲ್ಲಿ ಪೊಲೀಸರು ಒಳನುಗ್ಗುತ್ತಿದ್ದರು. ಇದನ್ನು ಕಂಡ ಸಾರ್ವಜನಿಕರು ಪೊಲೀಸರ ಈ ನಡೆಗೆ ಕಿಡಿಕಾರಿದರು.


ಕರ್ತವ್ಯಕ್ಕೆ ನಿಯೋಜಿಸದಿದ್ದರೂ ಕಾರ್ಯಕ್ರಮ ವೀಕ್ಷಣೆಗಾಗಿ ಕುಟುಂಬ ಸಮೇತ ಬ್ಯಾರಿಕೇಡ್ ಒಳ ನುಸುಳುತ್ತಿರುವ ಪೊಲೀಸರು

ದಸರಾ ಹಿನ್ನೆಲೆಯಲ್ಲಿ ಮಹಿಳೆಯರ ವಾಕಥಾನ್

ರೇಷ್ಮೆ ಸೀರೆಯುಟ್ಟು, ಮಲ್ಲಿಗೆ ಮುಡಿದು ಹೆಜ್ಜೆ ಹಾಕಿದ ನಾರಿಯರ ಸಂಭ್ರಮ


ಮಹಿಳಾ ದಸರಾ ಉಪಸಮಿತಿ ಆಯೋಜಿಸಿದ್ದ ರೇಷ್ಮೆ ಸೀರೆ, ಮಲ್ಲಿಗೆ ಮುಡಿದ ಮಹಿಳೆಯರ ವಾಕಥಾನ್‌ಗೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಚಾಲನೆ ನೀಡಿ, ವಾಕಥಾನ್‌ನಲ್ಲಿ ಸಾಗಿದರು.

ಮೈಸೂರು, ಸೆ.25(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಗುರುವಾರ ನಾರಿಯರು ರೇಷ್ಮೆ ಸೀರೆಯುಟ್ಟು ನಡಿಗೆಯಲ್ಲಿ ಪಾಲ್ಗೊಳ್ಳುವ ಮೂಲಕ ಮಹಿಳಾ ದಸರೆಗೆ ಮೆರಗು ನೀಡಿದರು.

ಮಹಿಳಾ ದಸರಾ ಉಪಸಮಿತಿ ಆಯೋಜಿಸಿದ್ದ ವಾಕಥಾನ್‌ನಲ್ಲಿ ನೂರಾರು ಮಹಿಳೆಯರು ರೇಷ್ಮೆ ಸೀರೆಯುಟ್ಟು, ಮಲ್ಲಿಗೆ ಮುಡಿದು ವಾಕಥಾನ್ ಪಾಲ್ಗೊಂಡು ಮಹಿಳಾ ದಸರಾದಲ್ಲಿ ನಾರಿ ಶಕ್ತಿ ಬಿಂಬಿಸಿದರು.

ಅರಮನೆಯ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಗುರುವಾರ ಬೆಳಗ್ಗೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್ ಹಸಿರು ನಿಶಾನೆ ತೋರಿ, ಡಮರುಘ ಬಾರಿಸುವ ಮೂಲಕ ಚಾಲನೆ ನೀಡಿದರು.

ಕಂಸಾಳೆ, ಡೊಳ್ಳು ಕುಣಿತ, ಗೊರವರ ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ದಿವಾನ್ಸ್ ರಸ್ತೆ ಮೂಲಕ ಜೆ.ಕೆ.ಮೈದಾನ ತಲುಪಿತು. ಪರಂಪರೆ ಬಿಂಬಿಸುವ ಸಂದೇಶ ನೀಡಲು ಆಯೋಜಿಸಿದ್ದ ವಾಕಥಾನ್‌ನಲ್ಲಿ ಪಾಲ್ಗೊಳ್ಳುವ ಮಹಿಳೆಯರು ಮೈಸೂರು ರೇಷ್ಮೆ ಸೀರೆಯುಟ್ಟು, ಮಲ್ಲಿಗೆ ಹೂವು ಮುಡಿದು ಬರುವಂತೆ ಸೂಚಿಸಲಾಗಿತ್ತು. ಅದರಂತೆ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಮಹಿಳೆಯರು, ಯುವತಿಯರು ವಾಕಥಾನ್‌ನಲ್ಲಿ ಪಾಲ್ಗೊಂಡು ಗಮನ ಸೆಳೆದರು.

ವಾಕಥಾನ್‌ಗೆ ಚಾಲನೆ ನೀಡಿದ ಬಳಿಕ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ನಾಡಹಬ್ಬ ದಸರಾ ಮಹೋತ್ಸವದ ಸಂಭ್ರಮ ಎಲ್ಲೆಡೆ ಮನೆ ಮಾಡಿದೆ. ದೇಶಕ್ಕೆ ಸಂಸ್ಕೃತಿಯನ್ನು ಪರಿಚಯಿಸಿದ ಮೈಸೂರಲ್ಲಿ ಇಂದು ದಸರಾ ಮಹೋತ್ಸವ ಮೂಲಕ ಕಲೆ, ಸಂಸ್ಕೃತಿಯ ಪರಿಚಯವಾಗುತ್ತಿದೆ. ಮಹಿಳಾ ದಸರಾ ಉಪಸಮಿತಿ ಆಯೋಜಿಸಿರುವ ಪರಂಪರೆ ಬಿಂಬಿಸುವ ಮಹಿಳೆಯರ ವಾಕಥಾನ್‌ನಲ್ಲಿ ಮೈಸೂರು ರೇಷ್ಮೆ ಸೀರೆಯುಟ್ಟು, ಮಲ್ಲಿಗೆ ಮುಡಿದು ಸಂಭ್ರಮದಿಂದ ನಡಿಗೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದಾರೆ ಎಂದರು.

> **ಸಂಭ್ರಮಿಸಿದ ಮಹಿಳೆಯರು**
> ರೇಷ್ಮೆ ಸೀರೆಯುಟ್ಟು, ಮಲ್ಲಿಗೆ ಮುಡಿದು ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ತಮಟೆ ಸದ್ದಿಗೆ ಹೆಜ್ಜೆ ಹಾಕಿದರು. ವಾಕಥಾನ್‌ಗೆ ಚಾಲನೆ ನೀಡಿದ ಡಾ.ನಾಗಲಕ್ಷ್ಮೀ ಚೌಧರಿ, ಡಾ.ಪುಷ್ಪ ಅಮರನಾಥ್ ಸೇರಿದಂತೆ ಹಲವರು ಸಂಭ್ರಮದಲ್ಲಿ ಮಿಂದೆದ್ದರು.

ಈ ವಾಕಥಾನ್‌ನಲ್ಲಿ ಸೀರೆಯುಟ್ಟು ಪಾಲ್ಗೊಂಡಿರುವುದು ಮಹಿಳೆ ಅಡುಗೆ ಮನೆಗೆ ಸೀಮಿತವಲ್ಲ ಎಂಬ ಸಂದೇಶ ನೀಡಿದ್ದಾರೆ. ಸೀರೆಯುಟ್ಟಾಗ ಮನೆಯಿಂದ ಹೊರಗೆ ಬಂದು ಸಾಧನೆ ಮಾಡಬಹುದು ಎಂಬ ಸಂದೇಶ ನೀಡುವ ಸಾಂಕೇತಿಕ ನಡೆ ಇದಾಗಿದೆ. ಎಲ್ಲಾ ಮಹಿಳೆಯರು ಸಂಭ್ರಮದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಮಾಡ್ರನ್ ಡ್ರೆಸ್ ಹಾಕುವ ಮಹಿಳೆಯರು ಹಾಗೂ ಯುವತಿಯರು ಸೀರೆಯನ್ನು ಸಹ ಉಡುತ್ತಾರೆ. ಮಾಡ್ರನ್ ಡ್ರೆಸ್‌ಗಿಂತ ಸೀರೆಯುಟ್ಟಾಗ ಮಹಿಳೆಯರು ಸುಂದರವಾಗಿ ಕಾಣುತ್ತಾರೆ. ಸೀರೆ ಉಡುವ, ಮಲ್ಲಿಗೆ ಮುಡಿಯುವ ಸಂಪ್ರದಾಯವನ್ನು ಮಹಿಳೆಯರು ಮುಂದುವರೆಸಿಕೊಂಡು ಹೋಗುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಮಾತನಾಡಿ, ಈ ದಸರಾ ಮಹೋತ್ಸವ ಮಹಿಳೆಯರ ದಸರಾ ಎಂಬಂತಾಗಿದೆ. ಮಹಿಳೆಯರಿಲ್ಲದ ದಸರಾ ಇಲ್ಲ. ಸೀರೆ ಉಡುವ, ಮಲ್ಲಿಗೆ ಹೂವು ಮುಡಿಯುವ ಸಂಸ್ಕೃತಿ ಮಹಿಳೆಯರದ್ದಾಗಿದೆ. ಈ ವಾಕಥಾನ್‌ನಲ್ಲಿ ಮೈಸೂರು ರೇಷ್ಮೆ, ಮೈಸೂರು ವಿಳ್ಯದೆಲೆ, ನಂಜನಗೂಡು ರಸಬಾಳೆ, ಮೈಸೂರು ಪಾಕ್ ಮಹತ್ವವನ್ನು ಸಾರಲಾಗಿದೆ. ಇದು ಸ್ತ್ರೀ ಸಬಲೀಕರಣದ ಸಂಕೇತ, ಒಗ್ಗಟ್ಟು, ಸಂಸ್ಕೃತಿ ಉಳಿವಿಗಾಗಿ ನಡೆಸುತ್ತಿರುವ ವಾಕಥಾನ್ ಆಗಿದೆ ಎಂದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಉಪ ವಿಶೇಷಾಧಿಕಾರಿ ಬಿ.ಎಂ.ಸವಿತಾ, ಮಹಿಳಾ ಮತ್ತು ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಿ.ಬಸವರಾಜು, ಮಹಿಳಾ ದಸರಾ ಉಪ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.


ವಾಕಥಾನ್‌ನಲ್ಲಿ ತಮಟೆ ಶಬ್ದಕ್ಕೆ ನೃತ್ಯ ಮಾಡುತ್ತಿರುವ ಡಾ.ನಾಗಲಕ್ಷ್ಮೀ ಚೌಧರಿ.

ಸೆ.28, ದಸರಾ ಅಂಗವಾಗಿ 10 ಕಿಲೋ ಮೀಟರ್ ಓಟದ ಸ್ಪರ್ಧೆ

ಮೈಸೂರು, ಸೆ.25(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ–2025ರ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಸೆ.28 ರಂದು 'ಡಿವೈಇಎಸ್ ಮೈಸೂರು ದಸರಾ 10 ಕಿಲೋ ಮೀಟರ್ ಓಟದ ಸ್ಪರ್ಧೆ' ಆಯೋಜಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್.ಚೇತನ್ ತಿಳಿಸಿದರು.

ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಅಂದು ಬೆಳಗ್ಗೆ 6.30ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 45 ವರ್ಷದೊಳಗಿನ ಮತ್ತು 45 ವರ್ಷ ಮೇಲ್ಪಟ್ಟ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ 10 ಕಿಲೋ ಮೀಟರ್ ಓಟದ ಸ್ಪರ್ಧೆ ನಡೆಯಲಿದೆ ಎಂದು ಮಾಹಿತಿ ನೀಡಿದರು. ವಿಜೇತರಿಗೆ ಪ್ರಥಮ ಬಹುಮಾನ 10 ಸಾವಿರ ರೂ., ದ್ವಿತೀಯ ಬಹುಮಾನ 7 ಸಾವಿರ ರೂ., ತೃತೀಯ ಬಹುಮಾನ 5 ಸಾವಿರ ರೂ.ನಗದು ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 0821–2564179, ಮೊ.ನಂ.8151993256, 7411763256 ಗೆ ಸಂಪರ್ಕಿಸಬಹುದಾಗಿದೆ. ಹಾಗೆಯೇ https://mysamay.in/event/info/30521215-56d-4a2f-aeea-d061517b900e ವೆಬ್‌ಸೈಟ್ ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೊಂದಾಯಿಸಿಕೊಳ್ಳಬಹುದಾಗಿದೆ ಎಂದು ವಿವರಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಉಪಸ್ಥಿತರಿದ್ದರು.

ಮೈಸೂರು ದಸರಾ ಕ್ರೀಡಾಕೂಟ ಸಿಎಂ ಕಪ್

ಸೈಕಲ್ ಪೋಲೋದಲ್ಲಿ ಬಾಗಲಕೋಟೆ ಪುರುಷರು, ಮೈಸೂರು ಮಹಿಳೆಯರು ಚಾಂಪಿಯನ್ಸ್


ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆದ ಮೈಸೂರು ತಂಡ


ಮೈಸೂರು, ಸೆ.25(ಎಂಕೆ)– ಮೈಸೂರು ದಸರಾ ಕ್ರೀಡಾಕೂಟ ಸಿಎಂ ಕಪ್ ಅಂಗವಾಗಿ ನಡೆದ ರಾಜ್ಯಮಟ್ಟದ ಸೈಕಲ್ ಪೋಲೋ ಪಂದ್ಯಾವಳಿಯ ಪುರುಷ ವಿಭಾಗದಲ್ಲಿ ಬಾಗಲಕೋಟೆ, ಮಹಿಳೆಯರ ವಿಭಾಗದಲ್ಲಿ ಮೈಸೂರು ತಂಡ ಚಾಂಪಿಯನ್ ಆಗಿ ಹೊರ ಹೊಮ್ಮಿದವು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಗೌತಮ್ ಹಾಸ್ಟೆಲ್ ಮೈದಾನದಲ್ಲಿ ಕರ್ನಾಟಕ ಸೈಕಲ್ ಪೋಲೋ ಅಸೋಸಿಯೇಷನ್ ಸಹಯೋಗದೊಂದಿಗೆ ನಡೆದ ಸೈಕಲ್ ಪೋಲೋ ಪಂದ್ಯಾವಳಿಯ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಚಾಮರಾಜನಗರ ತಂಡದ ವಿರುದ್ಧ ಬಾಗಲಕೋಟೆ ತಂಡ 0–9 ಗೋಲ್‌ಗಳ ಮೂಲಕ ಜಯಗಳಿಸಿ ಚಾಂಪಿಯನ್ ಆದರೆ, ಚಾ.ನಗರ ತಂಡ ರನ್ನರ್‌ಅಪ್ ಆಯಿತು. ಮೂರನೇ ಸ್ಥಾನಕ್ಕೆ ಮೈಸೂರು ಮತ್ತು ಬೆಂಗಳೂರು ಗ್ರಾಮಂತರ ತಂಡದ ನಡುವೆ ನಡೆದ ಪಂದ್ಯದಲ್ಲಿ 4–2 ಗೋಲ್‌ಗಳ ಮೂಲಕ ಮೈಸೂರು ತಂಡ ಮೂರನೇ ಸ್ಥಾನ ಪಡೆಯಿತು.

ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ಬೆಂಗಳೂರು ತಂಡದ ವಿರುದ್ಧ ಮೈಸೂರು ತಂಡ 2–5 ಗೋಲ್‌ಗಳ ಅಂತರದಲ್ಲಿ ಗೆದ್ದು ಚಾಂಪಿಯನ್ ಆದರೆ, ಬೆಂಗಳೂರು ತಂಡ ರನ್ನರ್ ಅಪ್‌ಗೆ ತೃಪ್ತಿಪಡಬೇಕಾಯಿತು. ಹಾಗೆಯೇ ಮೂರನೇ ಸ್ಥಾನಕ್ಕೆ ಮಂಡ್ಯ ಮತ್ತು ಬೆಳಗಾವಿ ನಡುವೆ ನಡೆದ ಪಂದ್ಯದಲ್ಲಿ 3–0 ಗೋಲ್‌ಗಳೊಂದಿಗೆ ಮಂಡ್ಯ ತಂಡ ಮೂರನೇ ಸ್ಥಾನ ಪಡೆದುಕೊಂಡಿತು.

ಇದಕ್ಕೂ ಮುನ್ನ ಪಂದ್ಯಾವಳಿ ಉದ್ಘಾಟಿಸಿದ ಕರ್ನಾಟಕ ಸೈಕಲ್ ಪೋಲೋ ಅಸೋಸಿಯೇಷನ್ ಅಧ್ಯಕ್ಷ ಎನ್.ಆರ್.ಮಂಜುನಾಥ್ ಮಾತನಾಡಿ, ದಸರಾ ಕ್ರೀಡಾ ಕೂಟದಲ್ಲಿ ಸೈಕಲ್ ಪೋಲೋ ಕ್ರೀಡೆಗೆ ಅವಕಾಶ ಮಾಡಿಕೊಟ್ಟಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಈ ಕ್ರೀಡೆಗೆ ರಾಜ್ಯ ಸರ್ಕಾರ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಅಂತರರಾಷ್ಟ್ರೀಯ ಕ್ರೀಡಾ ಪಟು ಎಸ್.ಎಂ.ಶಾನ್ವಿ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ವೆಂಕಟೇಶ್, ಕರ್ನಾಟಕ ಸೈಕಲ್ ಪೋಲೋ ಅಸೋಸಿಯೇಷನ್ ಸಂಸ್ಥಾಪಕ ಅರುಣ್‌ಕುಮಾರ್ ಹೆಚ್.ಪಾಟೀಲ್, ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಎಪಾಟೀಲ್, ಅಂಟಿ ಕಾರ್ಯದರ್ಶಿ ಅಕ್ಷಯ್ ಎ.ಪಾಟೀಲ್, ಅರ್ಚನ ಜೋಶಿ ಮತ್ತಿತರರಿದ್ದರು.


ಸೈಕಲ್ ಪೋಲೋ ಕ್ರೀಡೆಯಲ್ಲಿ ಪಾಲ್ಗೊಂಡ ಕ್ರೀಡಾಪಟುಗಳು

ಸೈಕಲ್ ಜಾಥಾ ಮೂಲಕ ಮೈಸೂರು ಪಾರಂಪರಿಕ ಕಟ್ಟಡಗಳ ಮಾಹಿತಿ ಸಂಗ್ರಹ

ಮೈಸೂರು, ಸೆ.25(ಎಂಕೆ)– 'ನಮ್ಮ ಪರಂಪರೆ ನಮ್ಮ ಹೆಮ್ಮೆ' ಟೀ ಶರ್ಟ್ ಧರಿಸಿ, ಟ್ರಿನ್ ಟ್ರೀನ್ ಸೈಕಲ್ ಸವಾರಿ ನಡೆಸಿದ ನೂರಾರು ಯುವಕ–ಯುವತಿಯರು, ಮೈಸೂರಿನಲ್ಲಿರುವ ಪ್ರಮುಖ 20 ಪಾರಂಪರಿಕ ಕಟ್ಟಡಗಳ ಇತಿಹಾಸ, ಅವುಗಳ ಹಿನ್ನೆಲೆ, ಪ್ರಾಮುಖ್ಯತೆ ಹಾಗೂ ವಾಸ್ತುಶಿಲ್ಪಗಳ ಬಗ್ಗೆ ಮಾಹಿತಿ ಪಡೆದರು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025 ಅಂಗವಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಗುರುವಾರ ಆಯೋಜಿಸಿದ್ದ 'ಪಾರಂಪರಿಕ ಸೈಕಲ್ ಜಾಥಾ'ದಲ್ಲಿ ಪಾರಂಪರಿಕ ಕಟ್ಟಡಗಳ ಅರಿವು ಮೂಡಿಸಲಾಯಿತು.

ಟೌನ್‌ಹಾಲ್ ಎದುರು ಆರಂಭವಾದ ಪಾರಂಪರಿಕ ಸೈಕಲ್ ಜಾಥಾ, ಸಿಲ್ವರ್ ಜೂಬಿಲಿ ಕ್ಲಾಕ್ ಟವರ್(ದೊಡ್ಡ ಗಡಿಯಾರ), ಫ್ರಿಮೇಸನ್ಸ್ ಕ್ಲಬ್, 10ನೇ ಚಾಮರಾಜ ಒಡೆಯರ್ ವೃತ್ತ, ಅರಮನೆ, ಕೆ.ಆರ್.ವೃತ್ತ, ಲ್ಯಾನ್ಸ್‌ಡೌನ್ ಕಟ್ಟಡ, ಜಗನ್ ಮೋಹನ ಅರಮನೆ, ಪರಕಾಲ ಮಠ, ವಾಣಿಜ್ಯ ತೆರಿಗೆ ಕಚೇರಿ, ಪದ್ಮಾಲಯ, ಹಳೆ ಜಿಲ್ಲಾಧಿಕಾರಿಗಳ ಕಛೇರಿ, ಕ್ರಾಫರ್ಡ್ ಹಾಲ್, ಮೆಟ್ರೋಪೋಲ್ ವೃತ್ತ, ರೈಲ್ವೆ ನಿಲ್ದಾಣ, ಕೃಷ್ಣ ರಾಜೇಂದ್ರ ಆಸ್ಪತ್ರೆ (ಕೆ.ಆರ್.ಆಸ್ಪತೆ) ವೃತ್ತ, ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟಿಟ್ಯೂಟ್, ಕಾವೇರಿ ಎಂಪೋರಿಯಂ, ಗಾಂಧಿ ವೃತ್ತದ ಮೂಲಕ ವಾಪಸ್ ಟೌನ್‌ಹಾಲ್ ಎದುರು ಮುಕ್ತಾಯಗೊಂಡಿತು.


ಮೈಸೂರು ದಸರಾ ಮಹೋತ್ಸವ–2025ದ ಅಂಗವಾಗಿ 'ಪಾರಂಪರಿಕ ಸೈಕಲ್ ಜಾಥಾ'.

ಇದಕ್ಕೂ ಮುನ್ನ ಪಾರಂಪರಿಕ ಸೈಕಲ್ ಜಾಥಾಗೆ ಚಾಲನೆ ನೀಡಿದ ಅಲ್ಟ್ರಾ ಸೈಕ್ಲಿಸ್ಟ್ ನವೀನ್ ಸೋಲಂಕಿ ಮಾತನಾಡಿ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ 10 ದಿನಗಳಲ್ಲಿ 15 ಗಂಟೆಗಳ ಅವಧಿಯಲ್ಲಿ 3758 ಕಿಲೋ ಮೀಟರ್ ಸೈಕ್ಲಿಂಗ್ ಮಾಡಿರುವುದು ಹೆಮ್ಮೆ ತಂದಿದೆ. ದೇಹವನ್ನು ಆರೋಗ್ಯ ಹಾಗೂ ಸದೃಢವಾಗಿ ಇಟ್ಟುಕೊಳ್ಳಬೇಕು. ಪ್ರತಿದಿನ ಸೈಕ್ಲಿಂಗ್ ಅಭ್ಯಾಸ ಮಾಡಲು ಮೈಸೂರು ಉತ್ತಮವಾದ ಸ್ಥಳವಾಗಿದೆ ಎಂದರು.

ಮೈಸೂರಲ್ಲಿವೆ 129 ಪಾರಂಪರಿಕ ಕಟ್ಟಡಗಳು: ಪುರಾತತ್ವ ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ಮಾತನಾಡಿ, ಮೈಸೂರಿನಲ್ಲಿ ಸುಮಾರು 129 ಪಾರಂಪರಿಕ ಕಟ್ಟಡಗಳಿದ್ದು, ಪಾರಂಪರಿಕ ಸೈಕಲ್ ಜಾಥಾ ಮೂಲಕ ಮಾರ್ಗ ದುದ್ದಕ್ಕೂ ಎದುರಾಗುವ ಸುಮಾರು 20 ಪಾರಂಪರಿಕ ಕಟ್ಟಡಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಪ್ರಯತ್ನ ಮಾಡಲಾಗಿದೆ ಪಾರಂಪರಿಕ ನಗರವಾದ ಮೈಸೂರಿನ ಪರಂಪರೆಯನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಪ್ರತೀ ವರ್ಷ ದಸರಾ ಸಂದರ್ಭದಲ್ಲಿ ಪಾರಂಪರಿಕ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಇತಿಹಾಸ ತಜ್ಞರಾದ ಪ್ರೊ.ರಂಗರಾಜು ಹಾಗೂ ಡಾ.ಶೆಲ್ವಪಿಳ್ಳೆ ಅಯ್ಯಂಗಾರ್ ದೊಡ್ಡ ಗಡಿಯಾರ, 10ನೇ ಚಾಮ ರಾಜೇಂದ್ರ ವೃತ್ತ, ಅರಮನೆ, ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತ ಸೇರಿದಂತೆ ಪ್ರಮುಖ 20 ಪಾರಂಪರಿಕ ಕಟ್ಟಡಗಳ ಇತಿಹಾಸದ ಸಂಗತಿಗಳನ್ನು ತಿಳಿಸಿದರು. ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಅಧಿಕಾರಿ ಮಂಜುಳ, ತಾರಕೇಸ್, ಅಂಬರೀಶ್ ಮತ್ತಿತರರು ಉಪಸ್ಥಿತರಿದ್ದರು.

ಸಾಹಿತ್ಯ ಸಾಮಾಜಿಕ ಬದಲಾವಣೆಗಳಿಗೂ ಪ್ರೇರಕ

ದಸರಾ ಬಹುಭಾಷಾ ಕವಿಗೋಷ್ಠಿಯಲ್ಲಿ ಹರಪಳ್ಳಿ ರವೀಂದ್ರ ಅಭಿಪ್ರಾಯ


ಬಹುಭಾಷಾ ಕವಿಗೋಷ್ಠಿಯಲ್ಲಿ ವಿವಿಧ ಲೇಖಕರ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಮಡಿಕೇರಿ,ಸೆ.25– ಅತ್ಯಂತ ಪ್ರಭಾವಶಾಲಿಯಾದ ಸಾಹಿತ್ಯ ಕ್ಷೇತ್ರ ಸಾಮಾಜಿಕ ಬದಲಾವಣೆಗಳಿಗೂ ಪ್ರೇರಕ ಶಕ್ತಿಯಾಗಿದೆ ಎಂದು ಸಮಾಜ ಸೇವಕ ಹಾಗೂ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಹರಪಳ್ಳಿ ರವೀಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮಡಿಕೇರಿ ನಗರ ದಸರಾ ಸಮಿತಿ ಹಾಗೂ ಬಹುಭಾಷಾ ಕವಿಗೋಷ್ಠಿ ಸಮಿತಿ ವತಿಯಿಂದ ನಗರದ ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ ನಡೆದ ಬಹು ಭಾಷಾ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೈನಿಕರು, ಪತ್ರಕರ್ತರು, ಕವಿಗಳು ಹಾಗೂ ಆರಕ್ಷಕರು ತಮ್ಮದೇ ಆದ ಕಾರ್ಯ ಕ್ಷೇತ್ರದ ಮೂಲಕ ನಾಡಿನ ಅಖಂಡತೆಯನ್ನು ಕಾಯ್ದು ಕೊಳ್ಳುತ್ತಿದ್ದಾರೆ. ಆ ಮೂಲಕ ಸೌಹಾರ್ದಯುತ ಸಮಾಜವನ್ನು ನಿರ್ಮಿಸಲು ವಿಶೇಷ ಕಾಣಿಕೆ ಮತ್ತು ಉತ್ತಮ ಸಂದೇಶವನ್ನು ನೀಡುತ್ತಿದ್ದಾರೆ. ತಮ್ಮ ಆಂತರ್ಯದ ಭಾವನೆಗಳಿಗೆ ಅಕ್ಷರಗಳ ರೂಪ ನೀಡುವ ಕವಿಗಳು ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಸಾಹಿತ್ಯದ ಸವಿಯನ್ನು ಪ್ರತಿಯೊಬ್ಬರು ಓದಿನ ಮೂಲಕ ಪಡೆಯುವಂತಾಗಬೇಕು ಎಂದು ಹರಪಳ್ಳಿ ರವೀಂದ್ರ ಕರೆ ನೀಡಿದರು. ವಿಶೇಷ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೆ.ಜಿ.ಎಫ್, ಸಲಾರ್ ಚಲನಚಿತ್ರ ಖ್ಯಾತಿಯ ಸಾಹಿತಿ ಕಿನ್ನಾಳ ರಾಜ್ ಮಾತನಾಡಿ, ಕವಿಗಳು ತಮ್ಮ ಕಲ್ಪನೆಗಳನ್ನು ಪದಗಳ ಮೂಲಕ ವರ್ಣಿಸುತ್ತಾರೆ. ಕವಿಗಳ ಬದುಕಿನ ಅವಿಭಾಜ್ಯ ಅಂಗ ಲೇಖನಿಯೇ ಆಗಿದೆ. ಅತ್ಯಂತ ಪ್ರಭಾವಶಾಲಿಯಾದ ಲೇಖನಿಯ ಮೂಲಕ ನಮ್ಮೆಲ್ಲರ ಕನಸುಗಳನ್ನು ಅವರು ಅಕ್ಷರ ರೂಪದಲ್ಲಿ ಸಾಕಾರಗೊಳಿಸುವಂತಾಗಬೇಕೆಂದು ಆಶಿಸಿದರು.

ನಿವೃತ್ತ ಸೇನಾಧಿಕಾರಿ ಹಾಗೂ ಸಾಹಿತಿ ಕ್ಯಾಪ್ಟನ್ ಬಿದ್ದಂಡ ನಾಣಯ್ಯ, ನಾಪೋಕ್ಲು ಬಿಲ್ಲವ ಸಮಾಜದ ಅಧ್ಯಕ್ಷ ಬಿ.ಎಂ.ಪ್ರತೀಪ್ ಮಾತನಾಡಿದರು. ಮಡಿಕೇರಿ ನಗರ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿಯ ಅಧ್ಯಕ್ಷ ಉಜ್ವಲ್ ರಂಜಿತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಡಿಕೇರಿ ನಗರಸಭಾ ಅಧ್ಯಕ್ಷೆ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ದಸರಾ ಸಮಿತಿಯ ಕಾರ್ಯಾಧ್ಯಕ್ಷ ಬಿ.ಕೆ.ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಅರುಣ್ ಶೆಟ್ಟಿ, ಖಜಾಂಚಿ ಸವಿತಾ, ಸಾಹಿತಿ ಸುನೀತಾ ಲೋಕೇಶ್, ಬಹುಭಾಷಾ ಕವಿಗೋಷ್ಠಿ ಸಮಿತಿಯ ಪ್ರಧಾನ ಕಾರ್ಯದರ್ಶಿ ರಂಜಿತ್ ಕವಲಪಾರ, ಸಹ ಕಾರ್ಯದರ್ಶಿ ಪ್ರಸಾದ್ ಸಂಪಿಗೆಕಟ್ಟೆ, ಸದಸ್ಯರಾದ ಎಸ್.ಜಿ. ಉಮೇಶ್, ಎಂ.ಯು.ಹನೀಫ್, ಪಿ.ವಿ.ಪ್ರಭಾಕರ್, ಎಂ.ಎಸ್.ನಾಸಿರ್, ಎಂ.ಪಿ.ಅನುಷಾ, ಹೆಚ್.ಎನ್.ಲಕ್ಷ್ಮೀಶ್, ಸಯ್ಯದ್ ಇರ್ಫಾನ್, ಚೋಕಿರ ಅನಿತಾ ದೇವಯ್ಯ, ಅಂಜಲಿ ಅಶೋಕ್, ಶ್ರೀ ರಕ್ಷಾ, ವಿಜಯ್ ಹಾನಗಲ್, ಓಂಶ್ರೀ ದಯಾನಂದ ಕೂಡಕಂಡಿ, ಪಿ.ಎಂ. ರವಿ, ಅಂಕಿತಾ ಕಡ್ಲೇರ ಉಪಸ್ಥಿತರಿದ್ದರು.

ಸನ್ಮಾನ–ಸಂತಾಪ: ಕಾರ್ಯಕ್ರಮದಲ್ಲಿ ಸಮಾಜ ಸೇವಕ ಹಾಗೂ ಕರ್ನಾಟಕ ಒಕ್ಕಲಿಗರ ಸಂಘದ ನಿರ್ದೇಶಕ ಹರಪಳ್ಳಿ ರವೀಂದ್ರ ಸಾಹಿತಿ ಕ್ಯಾಪ್ಟನ್ ಬಿದ್ದಂಡ ನಾಣಯ್ಯ, ಕೆ.ಜಿ.ಎಫ್., ಸಲಾರ್ ಚಲನಚಿತ್ರ ಖ್ಯಾತಿಯ ಸಾಹಿತಿ ಕಿನ್ನಾಳ ರಾಜ್, ನಗರಸಭೆಯ ನಿವೃತ್ತ ಪೌರಾಯುಕ್ತರಾದ ಬಿ.ಬಿ.ಪುಷ್ಪಾವತಿ ಹಾಗೂ ನಾಪೋಕ್ಲು ಬಿಲ್ಲವ ಸಮಾಜದ ಅಧ್ಯಕ್ಷ ಬಿ.ಎಂ.ಪ್ರತೀಪ್‌ರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭ ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿ, ಎಸ್.ಎಲ್.ಭೈರಪ್ಪ ನಿಧನಕ್ಕೆ ಸಭೆ ಮೌನಾಚರಣೆಯ ಮೂಲಕ ಸಂತಾಪ ಸೂಚಿಸಿತು.

ಪುಷ್ಪ ನಮನ: ಸಭಾ ಕಾರ್ಯಕ್ರಮಕ್ಕೂ ಮೊದಲು ನಗರದಲ್ಲಿರುವ ಕುವೆಂಪು ಪುತ್ಥಳಿಗೆ ಕವಯಿತ್ರಿ ಹಾಗೂ ಬಹುಭಾಷಾ ಕವಿಗೋಷ್ಠಿ ಅಧ್ಯಕ್ಷೆ ಸುನೀತಾ ಲೋಕೇಶ್ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭ ನಗರ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ ಅಧ್ಯಕ್ಷ ಉಜ್ವಲ್ ರಂಜಿತ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

'ಕಾವ್ಯ ಕಲರವ' ಅನಾವರಣ

ಸಮಾರಂಭದಲ್ಲಿ ಬಹುಭಾಷಾ ಕವಿಗೋಷ್ಠಿಗೆ ಆಯ್ಕೆಯಾದ ಕವನಗಳನ್ನು ಒಳಗೊಂಡ 'ಕಾವ್ಯ ಕಲರವ' ಕವನ ಸಂಕಲನವನ್ನು ಬಹುಭಾಷಾ ಕವಿಗೋಷ್ಠಿ ಅಧ್ಯಕ್ಷರಾದ ಸುನೀತಾ ಲೋಕೇಶ್ ಅನಾವರಣಗೊಳಿಸಿದರು. ಇದೇ ಸಂದರ್ಭ ಲೇಖಕಿ ಡಿ.ಹೆಚ್.ಪುಷ್ಪ ಅವರ 'ಸಂವೇದನೆ' ಕವನ ಸಂಕಲನ ಹಾಗೂ ಕೆ.ಶೋಭಾ ರಕ್ಷಿತ್ ಅವರ 'ಮನ ಸೆಳೆದ ಹಿಮಗಿರಿ' ಪ್ರವಾಸ ಕಥನವನ್ನು ಕಿನ್ನಾಳ ರಾಜ್ ಅವರು ಬಿಡುಗಡೆಗೊಳಿಸಿದರು.

ಬ್ರೇಕ್ ವಿಫಲಗೊಂಡ ಖಾಸಗಿ ಬಸ್ ಓಮ್ನಿಗೆ ಡಿಕ್ಕಿ: 21 ಮಂದಿಗೆ ಗಾಯ



ಮಡಿಕೇರಿ,ಸೆ.25– ಬ್ರೇಕ್ ವಿಫಲಗೊಂಡ ಖಾಸಗಿ ಬಸ್‌ವೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ಓಮ್ನಿ ವಾಹನಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ 21 ಮಂದಿ ಗಾಯಗೊಂಡಿರುವ ಘಟನೆ ಮಡಿಕೇರಿ ಸಮೀಪ ತಾಳತ್‌ಮನೆ ತಿರುವಿನಲ್ಲಿ ಬುಧವಾರ ರಾತ್ರಿ ಸಂಭವಿಸಿದೆ.

ಮೈಸೂರಿನಿಂದ ಮಂಗಳೂರು ಕಡೆಗೆ ತೆರಳುತ್ತಿದ್ದ ಬಸ್ ಇಳಿಜಾರಿನಲ್ಲಿ ಬ್ರೇಕ್ ವಿಫಲಗೊಂಡು ಮಡಿಕೇರಿ ಕಡೆಗೆ ಬರುತ್ತಿದ್ದ ಓಮ್ನಿಗೆ ಡಿಕ್ಕಿಯಾಗಿ ನಂತರ ಮಗುಚಿಕೊಂಡಿದೆ. ಓಮ್ನಿಯಲ್ಲಿದ್ದ ನಾಲ್ವರಿಗೆ ಗಂಭೀರ ಗಾಯಗಳಾಗಿದ್ದು, ಮಂಗಳೂರು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಮಂಗಳೂರು ಮೂಲದ ಗಾಯಾಳುಗಳು ಕಾರ್ಯ ನಿಮಿತ್ತ ಮಡಿಕೇರಿಗೆ ಬರುತ್ತಿದ್ದರು ಎಂದು ತಿಳಿದು ಬಂದಿದೆ. ಅದೃಷ್ಟವಶಾತ್ ಬಸ್‌ನಲ್ಲಿದ್ದ 17ಕ್ಕೂ ಹೆಚ್ಚು ಪ್ರಯಾಣಿಕರು ಹಾಗೂ ಚಾಲಕ ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದಾರೆ. ಮಡಿಕೇರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪಲ್ಟಿಯಾದ ಬಸ್ ಅನ್ನು ಕ್ರೇನ್ ಮೂಲಕ ಮೇಲೆತ್ತಲಾಗಿದೆ. ಅಪಘಾತದಿಂದ ಓಮ್ನಿ ಜಖಂಗೊಂಡಿದೆ.

ವಿರಾಜಪೇಟೆಯಲ್ಲಿ ಹುತಾತ್ಮರ ದಿನ ಆಚರಣೆ


ಹುತಾತ್ಮ ಯೋಧರಿಗೆ ಪುಷ್ಪನಮನ ಸಲ್ಲಿಸುತ್ತಿರುವುದು.

ವಿರಾಜಪೇಟೆ, ಸೆ.25– ವಿರಾಜಪೇಟೆಯ ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ಆಶ್ರಯದಲ್ಲಿ ವಿರಾಜಪೇಟೆ ಭಾರತೀಯ ಸ್ಟೇಟ್ ಬ್ಯಾಂಕ್ ಮುಂಭಾಗದಲ್ಲಿರುವ ಅಮರ್ ಜವಾನ್ ಸ್ಮಾರಕದಲ್ಲಿ ನಡೆದ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಲೆಫ್ಟಿನೆಂಟ್ ಕರ್ನಲ್ ಒಲಂಪಿಯನ್ ಬಾಳೆಯಡ. ಕೆ. ಸುಬ್ರಮಣಿ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಅವರು ಪುಷ್ಪ ಗುಚ್ಚವಿರಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ವಿರಾಜಪೇಟೆ ತಹಸೀಲ್ದಾರ್ ಪ್ರವೀಣ್ ಕುಮಾರ್, ಪುರಸಭೆ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಕಾಳಪ್ಪ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಅರಮೇರಿ ಕಳಂಚೇರಿ ಮಠದ ಮಠಾಧೀಶರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕೊಡಗು ಹೆಗ್ಗಡೆ ಸಮಾಜ, ಕೊಡವ ಮುಸ್ಲಿಂ ಅಸೋಸಿಯೇಷನ್, ಕೊಡಗು ಮಲೆಯಾಳಿ ಸಮಾಜ, ಕರ್ನಾಟಕ ಸಂಘ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಕೊಡಗು ಜಿಲ್ಲೆ, ಕೊಡವ ತಕ್ಕ್ ಜನಾಂಗದ ಅಧ್ಯಕ್ಷ ಪಡಿಞರಂಡ ಅಯ್ಯಪ್ಪ, ಹಿಂದು ಮಲೆಯಾಳಿ ಸಮಾಜ, ವಿರಾಜಪೇಟೆ ಗೋಲ್ಡನ್ ಫಾರಂ, ಕಾವೇರಿ ಲಘುವಾಹನ ಚಾಲಕರ ಮಾಲೀಕರ ಸಂಘ, ವಿವಿಧ ಶಾಲಾ ಮುಖ್ಯಸ್ಥರು ಮಾಜಿ ಸೈನಿಕರು, ಸಾರ್ವಜನಿಕರು ಪುಷ್ಪ ಗುಚ್ಚ ಇರಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ಹುತಾತ್ಮರ ದಿನಾಚರಣೆಯ ಅಂಗವಾಗಿ ಯೋಧರ ಸ್ಮಾರಕ ಸ್ಥಂಭ ಆವರಣದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಚೆನ್ನಕೇಶವ ನೇತೃತ್ವದಲ್ಲಿ ಮೂರು ಸುತ್ತು ಕುಶಲ ತೋಪು ಹಾರಿಸಲಾಯಿತು. ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ, ಉಪಾಧ್ಯಕ್ಷ ರಾಜ ಚಂದ್ರಶೇಖರ್ ಕಾರ್ಯದರ್ಶಿ ಪುಗ್ಗೆರ ನಂದಾ, ಖಜಾಂಚಿ ತೋರೆರ ಪೂವಯ್ಯ, ನಿರ್ದೇಶಕರಾದ ಎಂ.ಕೆ ಸಲಾಂ, ಪುತ್ರಂಡ ಎಂ.ಕುಂಬಯ್ಯ, ಕೊಂಗಂಡ ಎ.ಭೀಮಯ್ಯ, ಅಣ್ಣಾಳಮಾಡ ಡಿ.ಸುಬ್ಬಯ್ಯ, ಬಾಳೆಕುಟ್ಟೀರ ಎ.ಬೋಪಯ್ಯ, ಅಪ್ಪಯ್ಯ ಹೆಚ್.ಕೆ, ಕಬ್ಬಚ್ಚಿರ ಎ.ಬೋಪಣ್ಣ ಇದ್ದರು.

'ಕಂದೀಲು' ಕನ್ನಡ ಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ

ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸಿದ ಕೊಡಗಿನ ನಿರ್ದೇಶಕಿ, ನಿರ್ಮಾಪಕ


ರಾಷ್ಟ್ರಪತಿಯಿಂದ ಪ್ರಶಸ್ತಿ ಸ್ವೀಕಾರ.

ಮಡಿಕೇರಿ,ಸೆ.25– ಸ್ವಸ್ತಿಕ್ ಎಂಟರ್ಟೈನ್ಮೆಂಟ್ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ 'ಕಂದೀಲು' ಕನ್ನಡ ಚಲನಚಿತ್ರಕ್ಕೆ ಚಿತ್ರದ ನಿರ್ದೇಶಕಿ ಕೊಡಗಿನ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಹಾಗೂ ನಿರ್ಮಾಪಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರು ರಾಷ್ಟ್ರಪತಿಗಳಿಂದ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದರು. ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಿದರು. 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಪ್ರಾದೇಶಿಕ ಚಿತ್ರ ವಿಭಾಗಗಳಲ್ಲಿ ಕನ್ನಡ ಸೇರಿದಂತೆ ಒಟ್ಟು 13 ಪ್ರಾದೇಶಿಕ ಭಾಷೆಗಳ 13 ಸಿನಿಮಾಗಳಿಗೆ ರಾಷ್ಟ್ರ ಪ್ರಶಸ್ತಿ ನೀಡಲಾಯಿತು.

ಕೊಡಗು ಜಿಲ್ಲೆಯ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಅವರು ನಿರ್ವಿಸಿ, ನಿರ್ದೇಶಿಸಿರುವ ಕಂದೀಲು ಚಿತ್ರ ಫೀಚರ್ ಫಿಲ್ಮ್ ವಿಭಾಗದಲ್ಲಿ ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಕಂದೀಲು ಗ್ರಾಮವೊಂದರ ಕಥೆಯಾಗಿದ್ದು, ರೈತ ಹಾಗೂ ಆತನ ಕುಟುಂಬದ ಸುತ್ತ ಬೆಳಕು ಚೆಲ್ಲಲಾಗಿದೆ. ಕಂದೀಲು ಚಿತ್ರದ ಮೂಲಕ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿರುವ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಅವರು ರಾಷ್ಟ್ರ ಪ್ರಶಸ್ತಿ ಪಡೆದ ಕೊಡಗಿನ ಮೊದಲ ಮಹಿಳಾ ನಿರ್ದೇಶಕಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿ ಪಡೆದು ಹರ್ಷ ವ್ಯಕ್ತಪಡಿಸಿದ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಹಾಗೂ ಪತಿ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಇಡೀ ಚಿತ್ರತಂಡ ಹಾಗೂ ಕಲಾವಿದರ ಸಹಕಾರದಿಂದ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿದೆ. ಈ ಪ್ರಶಸ್ತಿ ಚಲನಚಿತ್ರ ರಂಗದಲ್ಲಿ ಮತ್ತಷ್ಟು ಸೇವೆಯನ್ನು ಸಲ್ಲಿಸಲು ಸ್ಫೂರ್ತಿ ತುಂಬಿದೆ ಎಂದರು.

ಗುಂಡಿಮಯ ರಸ್ತೆ: ಕುಶಾಲನಗರದಲ್ಲಿ ಬಿಜೆಪಿ ಪ್ರತಿಭಟನೆ


ಕುಶಾಲನಗರದಲ್ಲಿ ಬಿಜೆಪಿ ಕಾರ್ಯಕರ್ತರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಕುಶಾಲನಗರ: ಗುಂಡಿಮಯ ರಸ್ತೆಗಳ ಅವ್ಯವಸ್ಥೆ ಖಂಡಿಸಿ ಸೋಮವಾರಪೇಟೆ ಮಂಡಲ ಭಾರತೀಯ ಜನತಾ ಪಾರ್ಟಿ ವತಿಯಿಂದ ಕುಶಾಲನಗರದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಸರಕಾರ ಆಡಳಿತ ವ್ಯವಸ್ಥೆ ವೈಫಲದಿಂದ ಕೂಡಿದೆ. ರಾಜ್ಯದಲ್ಲಿ ಗುಂಡಿಯಲ್ಲಿ ರಸ್ತೆಯನ್ನು ಹುಡುಕುವ ವಾತಾವರಣ ಸೃಷ್ಟಿಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿ ಮುಖ್ಯಮಂತ್ರಿ ಹಾಗೂ ಕ್ಷೇತ್ರದ ಶಾಸಕರುಗಳ ವಿರುದ್ಧ ಧಿಕ್ಕಾರ ಕೂಗಿದರು.

ಮಾಜಿ ಶಾಸಕ ಅಪ್ಪಚ್ಚುರಂಜನ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಫೀ.ಮಾ ಕಾರ್ಯಪ್ಪ ವೃತ್ತದಿಂದ ಜಾಮೀಯಾ ಮಸೀದಿವರೆಗೆ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭ ಐಬಿ ಮಾರ್ಗದ ರಸ್ತೆ ಗುಂಡಿಗಳಿಗೆ ಕಾಂಕ್ರೀಟ್ ಹಾಕಿ ಮುಚ್ಚಲಾಯಿತು. ಬಳಿಕ ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಳಿತ ಪ್ರತಿಭಟನಾಕಾರರು ಕೆಲಕಾಲ ರಸ್ತೆ ತಡೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಶಾಸಕ ಅಪ್ಪಚ್ಚುರಂಜನ್, ಕಾಂಗ್ರೆಸ್ ಸರಕಾರ ಜನ ವಿರೋಧಿ, ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ. ನಿರಂತರ ಬೆಲೆ ಏರಿಕೆ, ಭ್ರಷ್ಟಾಚಾರದಲ್ಲಿ ತೊಡಗಿದ್ದು ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಆರೋಪಿಸಿದರು.

ರಾಜ್ಯದ ಸಿದ್ದರಾಮಯ್ಯ ಸರಕಾರ ರಾಜ್ಯಾದ್ಯಂತ ಗುಂಡಿ ಭಾಗ್ಯ ಕಲ್ಪಿಸಿದ್ದು ಇದನ್ನು ವಿರೋಧಿಸಿ ಹೋರಾಟ ಹಮ್ಮಿಕೊಳ್ಳಲಾಗಿದೆ. ಜನವಿರೋಧಿ ನೀತಿಗಳು ಒಂದೆಡೆಯಾದರೆ ಮತ್ತೊಂದೆಡೆ ಲೂಟಿ ಹೊಡೆಯುವುದಲ್ಲಿ ಸರಕಾರ ಮಗ್ನವಾಗಿದೆ.

ಕಳೆದ ಎರಡೂವರೆ ವರ್ಷದಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತಗೊಂಡಿದೆ. ರಾಜ್ಯದಲ್ಲೆಡೆ ಸೇರಿದಂತೆ ಕೊಡಗಿನ ರಸ್ತೆಗಳು ತೀವ್ರವಾಗಿ ಹದಗೆಟ್ಟಿವೆ. ರಸ್ತೆ ಸಂಚಾರ ದುಸ್ತರವಾಗಿದೆ. ನಮ್ಮ ಬಿಜೆಪಿ ಸರಕಾರದ ಅವಧಿಯಲ್ಲಿ ಅನುಷ್ಠಾನಕ್ಕೆ ತಂದ ಬಹುತೇಕ ಅಭಿವೃದ್ಧಿ ಯೋಜನೆಗಳನ್ನು ತಮ್ಮ ಯೋಜನೆಗಳೆಂದು ಬಿಂಬಿಸುತ್ತಿದ್ದಾರೆ. ಎಸ್.ಟಿ.ನಿಗಮದ 87 ಕೋಟಿ ದುರುಪಯೋಗವಾಗಿದೆ, ಸಿ ಅಂಡ್ ಡಿ ಲ್ಯಾಂಡ್ ಅರಣ್ಯವೆಂದು ಘೋಷಿಸುವ ಮೂಲಕ ಬೆಳೆಗಾರರಿಗೆ ಈ ಸರಕಾರ ಮಾರಕವಾಗಿದೆ ಎಂದು ಅವರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್, ಉಪಾಧ್ಯಕ್ಷ ಭುವನೇಂದ್ರ, ನಗರ ಬಿಜೆಪಿ ಅಧ್ಯಕ್ಷ ಚರಣ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಆರ್.ಕೆ.ಚಂದ್ರ, ಕಾರ್ಯದರ್ಶಿಗಳಾದ ರಕ್ಷಿತ್ ಮಾವಜಿ, ಇಂದಿರಾ ರಮೇಶ್, ಯುವ ಮೋರ್ಚಾದ ಸಚಿನ್, ಅವಿನಾಶ್, ಆದರ್ಶ, ಪ್ರಮುಖರಾದ ಎಂ.ಡಿ.ಕೃಷ್ಣಪ್ಪ, ಅಮೃತ್ ರಾಜ್, ಚಂದ್ರಶೇಖರ್ ಹೇರೂರು, ವೈಶಾಖ್, ಭಾಸ್ಕರ್ ನಾಯಕ್, ನವನೀತ್, ಸುಮನ್, ರವಿ, ಆಸಿಫ್ ಇತರರಿದ್ದರು.

ಕೃಷಿ ಹೊಂಡದಲ್ಲಿ ಬಿದ್ದು ಅಣ್ಣ–ತಮ್ಮ ಸಾವು

ಹನೂರು ಬಳಿ ಕುರುಬರ ದೊಡ್ಡಿಯಲ್ಲಿ ದುರಂತ



ಹನೂರು, ಸೆ.25– ಕೃಷಿ ಹೊಂಡದಲ್ಲಿ ಆಕಸ್ಮಿಕವಾಗಿ ಬಿದ್ದು ಅಣ್ಣ–ತಮ್ಮ ಸಾವನ್ನಪ್ಪಿರುವ ಘಟನೆ ಕುರುಬರದೊಡ್ಡಿ ಗ್ರಾಮದಲ್ಲಿ ಸಂಭವಿಸಿದೆ.

ತಾಲೂಕಿನ ಕುರುಬರ ದೊಡ್ಡಿ ಗ್ರಾಮದ ಕುಮಾರ್ ಎಂಬುವರ ಮಕ್ಕಳಾದ ಯೋಗೇಶ್(9) ಮತ್ತು ಸಂಜಯ್ (7) ಮೃತ ದುರ್ದೈವಿಗಳು.

ಘಟನೆ ವಿವರ : ಕುರುಬರದೊಡ್ಡಿ ಗ್ರಾಮದವರಾಗಿದ್ದ ಕುಮಾರ್ ಪ್ರಸ್ತುತ ಹನೂರು ಸಮೀಪದ ಆರ್.ಎಸ್.ದೊಡ್ಡಿಯಲ್ಲಿ ವಾಸವಿದ್ದು, ದಸರಾ ರಜೆ ಹಿನ್ನೆಲೆ ಮಕ್ಕಳು ಅಜ್ಜಿಯ ಮನೆಗೆ ಬಂದಿದ್ದರು ಎನ್ನಲಾಗಿದೆ. ಯೋಗೇಶ್ ಮತ್ತು ಸಂಜಯ್ ಹನೂರು ಪಟ್ಟಣದ ವಿವೇಕಾನಂದ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮನೆಯ ಸಮೀಪ ಅಣ್ಣ–ತಮ್ಮ ಆಟವಾಡುತ್ತಿದ್ದಾಗ ಲಿಂಗಪ್ಪ ಎಂಬುವರ ಕೃಷಿ ಹೊಂಡದಲ್ಲಿ ಆಕಸ್ಮಿಕವಾಗಿ ಬಿದ್ದು ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ರಾಮಾಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮುಗಿಲು ಮುಟ್ಟಿದ ಆಕ್ರಂದನ: ಕುರುಬರ ದೊಡ್ಡಿ ಗ್ರಾಮದ ಮೃತ ಮಕ್ಕಳ ಪೋಷಕರು ಇದ್ದ ಎರಡು ಗಂಡು ಮಕ್ಕಳನ್ನು ಕಳೆದುಕೊಂಡು ಅವರ ಆಕ್ರಂದನ ಮುಗಿಲು ಮುಟ್ಟಿತ್ತು. ಗ್ರಾಮಸ್ಥರು ಮತ್ತು ನೆರೆದಿದ್ದವರು ಸಹ ಕಂಬನಿ ಮಿಡಿದರು.

ಇಂದು ನಗರದಲ್ಲಿ ಶ್ರೀ ವಿಶ್ವಕರ್ಮ ಜಯಂತಿ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಶ್ರೀ ವಿಶ್ವಕರ್ಮ ಜಯಂತಿಯನ್ನು ಸೆ.26 ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. 11.30 ಗಂಟೆಗೆ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ

ವಿವಿಧ ಗ್ರಾಮಗಳಿಂದ ಬೈಕ್ ರ್‍ಯಾಲಿ ಮೂಲಕ ಆಗಮಿಸಿದ ರೈತರು


ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಸುತ್ತಿರುವುದು.

ಚಾಮರಾಜನಗರ, ಸೆ.25– ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಯಿತು.

ಜಿಲ್ಲೆಯ ತಾಲೂಕು ಕೇಂದ್ರಗಳಿಂದ ಬೈಕ್ ರ್‍ಯಾಲಿ ಮೂಲಕ ಆಗಮಿಸಿದ ನೂರಾರು ರೈತರು ನಗರದ ಪ್ರವಾಸಿ ಮಂದಿರದಲ್ಲಿ ಜಮಾಯಿಸಿದರು. ಬಳಿಕ ಅಲ್ಲಿಂದ ಡಿವಿಯೇಷನ್ ರಸ್ತೆ ಭುವನೇಶ್ವರಿ ವೃತ್ತ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಬೇಡಿಕೆ ಈಡೇರಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹನೂರು ತಾಲೂಕು ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಮಳೆ ಕೊರತೆಯಿಂದ ಅಂತರ್ಜಲದ ಮಟ್ಟ ಕುಸಿದಿದೆ. ಆದ್ದರಿಂದ ಈ ಭಾಗದ ಕೆರೆಗಳಿಗೆ ಕಾವೇರಿ ನದಿಯಿಂದ ನೀರು ತುಂಬಿಸಲು ಕ್ರಮ ವಹಿಸಬೇಕು. ಉಡುತೊರೆ ಹಳ್ಳ ಜಲಾಶಯ, ಕೀರೆಪಾತಿ ಜಲಾಶಯ ಹಾಗೂ ಕೊಳ್ಳೇಗಾಲ ತಾಲೂಕಿನ ಕೋಟೆ ಕೆರೆಗೆ ಏತ ನೀರಾವರಿ ಮೂಲಕ ನೀರು ತುಂಬಿಸಬೇಕು ಎಂದು ಆಗ್ರಹಿಸಿದರು.

ಗುಂಡ್ಲುಪೇಟೆ ತಾಲೂಕಿನಲ್ಲಿ ಬಾಕಿ ಉಳಿದಿರುವ 110 ಕೆರೆಗಳಿಗೆ ಡಿಪಿಆರ್ ಆಗಿದ್ದು, ಶೀಘ್ರವೇ ಎಲ್ಲಾ ಕೆರೆ–ಕಟ್ಟೆಗಳಿಗೆ ನೀರು ತುಂಬಿಸಬೇಕು. ಗೋಪಿನಾಥಂ ಗ್ರಾಪಂ ವ್ಯಾಪ್ತಿಗೆ ಸೇರಿದ ಗ್ರಾಮಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಿ ಪಾರಂಪರಿಕ ಅರಣ್ಯ ಹಕ್ಕು ಕಾಯ್ದೆಯಡಿ ರೈತರು ಕೃಷಿ ಮಾಡಲು ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು.

ರೈತರು ತಮ್ಮ ಜಮೀನಿನಲ್ಲಿ ಬೆಳೆದಿರುವ ಸಾಗುವನಿ, ಬೀಟೆ ಮರಗಳನ್ನು ಕಟಾವು ಮಾಡಲು ಅನುಮತಿಯನ್ನು ಸರಳೀಕರಣಗೊಳಿಸಬೇಕು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಅನಧಿಕೃತ, ಅಧಿಕೃತ ಯೋಜನೆಯಲ್ಲಿ ಹಳೆಯ ಪದ್ಧತಿಯಂತೆಯೇ ವಿದ್ಯುತ್ ಸಂಪರ್ಕವನ್ನು ನೀಡಬೇಕು. ಮಾನವ ಮತ್ತು ವನ್ಯಜೀವಿ ಸಂಘರ್ಷವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು. ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಬದನಗುಪ್ಪೆ ಮತ್ತು ಕೆಲ್ಲಂಬಳ್ಳಿಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ರೈತರ ಜಮೀನುಗಳನ್ನು ವಶಪಡಿಸಿಕೊಂಡಿದ್ದು, ಭೂಮಿ ಕಳೆದುಕೊಂಡ ರೈತ ಕುಟುಂಬಗಳ ಒಬ್ಬ ಸದಸ್ಯನಿಗೆ ಉದ್ಯೋಗ ನೀಡಬೇಕು. ಬ್ಯಾಂಕ್‌ಗಳಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

2024–25 ಮತ್ತು 2025–26ನೇ ಸಾಲಿನಲ್ಲಿ ಪೂರ್ವ ಮುಂಗಾರು ಮತ್ತು ಹಿಂಗಾರಿನಲ್ಲಿ ಬಾರಿ ಗಾಳಿ ಮತ್ತು ಮಳೆಯಿಂದ ವಿವಿಧ ಬೆಳೆಗಳು ಜಿಲ್ಲೆಯಲ್ಲಿ ನಷ್ಟವಾಗಿದ್ದು, ತಕ್ಷಣ ರೈತರಿಗೆ ನಷ್ಟ ತುಂಬಿಕೊಡಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಮಲೆ ಮಹದೇಶ್ವರ ವನ್ಯಜೀವಿ ಧಾಮವನ್ನು ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಿಸುವುದನ್ನು ಸರ್ಕಾರ ಕೈಬಿಡಬೇಕು. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ರೈತರಿಗೆ ನೀಡುತ್ತಿರುವ ಕೃಷಿ ಸಲಕರಣೆಗಳು ಕಳಪೆ ಮಟ್ಟದ್ದಾಗಿದ್ದು, ಈ ಬಗ್ಗೆ ಅಧಿಕಾರಿಗಳು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಮಹೇಶ್‌ಪ್ರಭು, ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ವಿಭಾಗೀಯ ಕಾರ್ಯದರ್ಶಿ ಸಿದ್ದರಾಜು, ಜಿಲ್ಲಾ ಗೌರವಾಧ್ಯಕ್ಷ ಚಿನ್ನಸ್ವಾಮಿ ಗೌಂಡರ್, ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾಸ್ಕರ್, ಜಿಲ್ಲಾ ಮಹಿಳಾ ಅಧ್ಯಕ್ಷರು ಮಾದಮ್ಮ ಇದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಸೆ.25– ಚಾಮರಾಜನಗರ ಮತ್ತು ಹರದನಹಳ್ಳಿ ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಎರಡನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ನಿಮಿತ್ತ ಸೆ.27 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂಧಿಗೌಡನಹಳ್ಳಿ, ಅಟ್ಟುಗೂಳಿಪುರ ಮತ್ತು ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣ ನಗರ, ಫ್ಯಾಕ್ಟರಿ, ಬಿಸಲವಾಡಿ, ಮಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಹಾಗೂ ಕಿಲಿಗೆರೆ, ಯಣಗುಂಬ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಇದೇ ರೀತಿ ಚಾಮರಾಜನಗರ ಉಪ ವಿಭಾಗ ವ್ಯಾಪ್ತಿಯಲ್ಲಿ ಎರಡನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ನಿಮಿತ್ತ ಸೆ.27ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಗಾಳಿಪುರ, ಮೆಡಿಕಲ್ ಕಾಲೇಜು, ಮಲ್ಲಯ್ಯನಪುರ, ಮೂಡಲಪುರ, ಮೂಡಲಪುರ ಸಣ್ಣ ಕೈಗಾರಿಕಾ ಇಲಾಖೆ, ಉತ್ತುವಳ್ಳಿ, ಯಡಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಶಿಕ್ಷಕರ ಕೌನ್ಸಲಿಂಗ್

ಚಾಮರಾಜನಗರ: ಜಿಲ್ಲೆಯ 2024–25ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಕೋರಿಕೆ ವರ್ಗಾವಣೆ ಕೌನ್ಸಲಿಂಗ್ ನಗರದ ರೈಲ್ವೆ ನಿಲ್ದಾಣದ ಹತ್ತಿರವಿರುವ ಸಂತ ಪೌಲರ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ನಡೆಯುತ್ತಿದೆ.

26ರಂದು ಪ್ರೌಢಶಾಲಾ ಶಿಕ್ಷಕರಿಗೆ ಸೆ.29 ಮತ್ತು 30ರಂದು ಬೆಳಿಗ್ಗೆ 10 ಗಂಟೆಗೆ ಶಿಕ್ಷಕರ ವರ್ಗಾವಣೆ ಕೌನ್ಸಲಿಂಗ್ ನಡೆಯಲಿದೆ. ಸದರಿ ದಿನಗಳಂದು ಶಿಕ್ಷಕರು ನಿಗದಿತ ಸಮಯಕ್ಕೆ ಹಾಜರಾಗಿ ಆನ್‌ಲೈನ್ ಕೌನ್ಸಲಿಂಗ್‌ನಲ್ಲಿ ತೋರಿಸುವ ಖಾಲಿ ಹುದ್ದೆಗಳ ಶಾಲೆಯನ್ನು ಸ್ವಇಚ್ಛೆಯಿಂದ ಆಯ್ಕೆಮಾಡಿಕೊಂಡು ವರ್ಗಾವಣಾ ಕೌನ್ಸಲಿಂಗ್ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕು.

ಮಾಹಿತಿಗಾಗಿ ದೂ.ಸಂ.08226–222406 ಮತ್ತು ಮೊ.ಸಂ.9743099505, 9448978661 ಸಂಪರ್ಕಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.28, ಕುಂದು ಕೊರತೆ ಸಭೆ

ಚಾಮರಾಜನಗರ, ಸೆ.25– ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಮುಖಂಡರ ಕುಂದು ಕೊರತೆ ಸಭೆಯನ್ನು ಸೆ.28ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರೈತರು ಸಕಾಲದಲ್ಲಿ ಸಾಲ ಮರುಪಾವತಿಸಿ


ಚಾಮರಾಜನಗರ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭೆ.

ಚಾಮರಾಜನಗರ, ಸೆ.25– ರೈತರು ಸಕಾಲದಲ್ಲಿ ಸಾಲವನ್ನು ಮರುಪಾವತಿ ಮಾಡುವ ಮೂಲಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಏಳಿಗೆಗೆ ಸಹಕರಿಸಬೇಕು ಎಂದು ಬದನಗುಪ್ಪೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಕುಮಾರ್ ಹೇಳಿದರು.

ತಾಲೂಕಿನ ಬದನಗುಪ್ಪೆ ಗ್ರಾಮದ ಸಂಘದ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ 2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಕೃಷಿ ಪತ್ತಿನ ಸಹಕಾರ ಸಂಘದಿಂದ ರೈತರಿಗೆ ವಿವಿಧ ಉದ್ದೇಶಗಳಿಂದ ಸಾಲವನ್ನು ನೀಡಲಾಗಿದೆ. ರೈತರು ಸಂಘದಿಂದ ಪಡೆದುಕೊಂಡಿರುವ ಸಾಲವನ್ನು ಸಕಾಲದಲ್ಲಿ ಪಾವತಿಸಿದರೆ ಸಂಘದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಸಾಲವನ್ನು ಪಾವತಿ ಮಾಡದೇ ದೀರ್ಘಕಾಲ ಉಳಿಸಿಕೊಂಡರೆ ಅದು ರೈತರಿಗೆ ಹೊರೆಯಾಗುತ್ತದೆ ಎಂದರು.

ಸಹಕಾರ ಸಂಘದ ವತಿಯಿಂದ ಸಾರ್ವಜನಿಕರಿಗೆ ವಿತರಣೆ ಮಾಡುವ ಪಡಿತರವನ್ನು ಸೂಕ್ತ ಸಮಯಕ್ಕೆ ವಿತರಣೆ ಮಾಡಬೇಕು. ಈ ಸಂಬಂಧ ಸಂಘದ ಕಾರ್ಯದರ್ಶಿ ಹೆಚ್ಚಿನ ಗಮನವನ್ನು ಹರಿಸಬೇಕು. ಸಂಘದ ಅಭಿವೃದ್ಧಿ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ರೈತರು ಭಾವಿಸಿಕೊಳ್ಳಬೇಕು. ಪ್ರತಿಯೊಬ್ಬರು ಸಂಘದ ಏಳಿಗೆಗೆ ಶ್ರಮಿಸಬೇಕು ಎಂದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ದೇವರಾಜ್, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಟಿ.ಮಂಜು, ಎಪಿಎಂಸಿ ನಿರ್ದೇಶಕ ಗುರುಸ್ವಾಮಿ, ಸಂಘದ ನಿರ್ದೇಶಕರಾದ ಗುರುಪಾದಸ್ವಾಮಿ, ಜಿ.ನಂಜುಂಡಸ್ವಾಮಿ, ಬಿ.ಆರ್.ಕುಮಾರ್, ದಾಸ್ನಾಯಕ, ಗುರು ಸಿದ್ದಯ್ಯ, ಚಿನ್ನಸ್ವಾಮಿ, ಸುಶೀಲಾಮ್ಮ, ಮುಖಂಡರಾದ ಬಿ.ಪಿ.ನಾಗರಾಜ್ ಮೂರ್ತಿ, ಮೇಲಾಜಿಪುರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಗುರುಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಎಂ.ಎನ್.ಕುಮಾರ್, ಗಿರೀಶ್ ಹಾಗೂ ಇತರರು ಹಾಜರಿದ್ದರು.

ಜಾತಿಗಣತಿಯಿಂದ ಹಿಂದೂ ಸಮಾಜ ಛಿದ್ರ, ಮಾದಿಗ ಜನಸಂಖ್ಯೆ ಇಳಿಸುವ ಹುನ್ನಾರ

ಜಾತಿಗಣತಿ ಸಮೀಕ್ಷೆಯಲ್ಲಿ ಮಾದಿಗ ಎಂದು ನಮೂದಿಸಲು ಮನವಿ


ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ವೇದಿಕೆ ಅಧ್ಯಕ್ಷ ಎಸ್. ಅರುಣ್‌ಕುಮಾರ್.

ಚಾಮರಾಜನಗರ : ರಾಜ್ಯ ಸರ್ಕಾರ ಜಾತಿಗಣತಿ ಮೂಲಕ ಮಾದಿಗ ಜನಸಂಖ್ಯೆಯನ್ನು ನಂಬರ್‌ಒನ್ ಸ್ಥಾನದಿಂದ ಕೆಳಗಿಸುವುದು ಹಾಗೂ ಹಿಂದೂ ಸಮಾಜವನ್ನು ಛಿದ್ರ ಮಾಡುವ ಹುನ್ನಾರ ಮಾಡುತ್ತಿದೆ ಎಂದು ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್. ಅರುಣ್‌ಕುಮಾರ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಪರಿಶಿಷ್ಟ ಜಾತಿಯಲ್ಲಿ ಮಾದಿಗ ಸಮುದಾಯ ರಾಜ್ಯದ ಜನಸಂಖ್ಯೆಯಲ್ಲಿ ನಂಬರ್ ಒನ್ ಆಗಿದ್ದು ಅದನ್ನು ಅಲುಗಾಡಿಸಲು ಆಸ್ಪದ ಕೊಡಬೇಡಿ. ನೀವು ಎಷ್ಟೇ ಕುತಂತ್ರ ಮಾಡಿದರು. 2026ಕ್ಕೆ ರಾಷ್ಟ್ರೀಯ ಜನಗಣತಿ ಬರುತ್ತಿದೆ ಈಗ ಮಾದಿಗ ಸಮುದಾಯವನ್ನು 1.40 ಲಕ್ಷಕ್ಕೆ ನಿಲ್ಲಿಸಿದ್ದೀರಾ? ಇದು ರಾಜ್ಯ ಸರ್ಕಾರ ಕುತಂತ್ರ, ಹುನ್ನಾರದಿಂದ ಸಮುದಾಯದ ಜನಸಂಖ್ಯೆ ಕಡಿಮೆ ಆಗಿದೆ. ರಾಷ್ಟ್ರೀಯ ಜನಗಣತಿಯಲ್ಲಿ ಮಾದಿಗ ಸಮುದಾಯ ಕನಿಷ್ಠ 7 ಲಕ್ಷದಿಂದ 10 ಲಕ್ಷ ಪರಿಶಿಷ್ಟ ಜಾತಿಯ ಇತರ ಸಮುದಾಯದಿಂದ ಮುಂದೆ ಬರುತ್ತದೆ ಎಂದರು.

ಪರಿಶಿಷ್ಟ ಜಾತಿಯೊಳಗೆ ದೊಡ್ಡ ಮಟ್ಟದ ಅನ್ಯಾಯ. ಅದರಲ್ಲಿ ಒಳಮೀಸಲಾತಿ ಜಾರಿ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ 25–8–2025 ರಂದು ಹೊರಡಿಸಿದ ಆದೇಶ ಮಾದಿಗ ಸಮುದಾಯಕ್ಕೆ ಮರಣಶಾಸನವಾಗಿದೆ. ಅಲ್ಲದೆ ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಸೆ.22ರಿಂದ ನಡೆಸುತ್ತಿರುವ ಜಾತಿಗಣತಿ ಸಮೀಕ್ಷೆ ಹಿಂದೂ ಸಮಾಜವನ್ನು ಛಿದ್ರ ಮಾಡುವ ಸಂಚು, ಇನ್ನೊಂದು ದೊಡ್ಡ ಮಟ್ಟದ ಸಂಚು ದಲಿತ ಕ್ರಿಶ್ಚಿಯನ್ ಮಾಡಿ ಮೀಸಲಾತಿ ಕೊಡುವುದು. ಅ ಮೂಲಕ ರಾಜ್ಯದ ಪರಿಶಿಷ್ಟ ಜಾತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯ ಜನಸಂಖ್ಯೆಯನ್ನು ನಂಬರ್ ಒನ್ ಸ್ಥಾನದಿಂದ ಕೆಳಗಿಸುವ ಏಕೈಕ ಉದ್ದೇಶದಿಂದ ರಾಜ್ಯ ಸರ್ಕಾರ ನಿರಂತರವಾಗಿ ಮಾದಿಗ ಸಮುದಾಯದ ಮೇಲೆ ದಾಳಿ ಮಾಡುತ್ತಿದೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಆಯೋಗದ ಮೂಲಕ ನಡೆಸುತ್ತಿರುವ ಜಾತಿಗಣತಿ ಸಮೀಕ್ಷೆಯಲ್ಲಿ ಮಾದಿಗ ಸಂಬಂಧಿಸಿದ ಜಾತಿಗಳು ಜಾತಿಕಾಲಂನಲ್ಲಿ ಮಾದಿಗ, ಧರ್ಮಕಾಲಂನಲ್ಲಿ ಹಿಂದೂ ಎಂದು ಬರೆಸಬೇಕು ಎಂದು ಮನವಿ ಮಾಡಿದರು.

ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ ಮಾತನಾಡಿ, ಆದಿಕರ್ನಾಟಕ, ಆದಿದ್ರಾವಿಡ, ಆದಿ ಆಂಧ್ರ ಬರೆಸಬೇಡಿ ಎಂದು ಹೇಳಿದರೂ ಕೂಡ 4.74 ಲಕ್ಷ ಜನರು ಬರೆಸಿದ್ದಾರೆ. ನೀವೇ ಗುರುತಿಸಿರುವ 1.ಕೋಟಿ 5 ಲಕ್ಷ 64 ಸಾವಿರ ಜನರಿಗೆ ಮೂಲಜಾತಿ ಪ್ರಮಾಣ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರದ ನಡೆಸುತ್ತಿರುವ ಜಾತಿಗಣತಿ ಸಮೀಕ್ಷೆಯಲ್ಲಿ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ ಬರೆಸಬಾರದು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಕಾರಕಾರಿಣಿ ಸಮಿತಿ ಸದಸ್ಯರಾದ ಎಂ.ಆರ್. ಸುರೇಂದ್ರಕುಮಾರ್, ಎಸ್.ಮಾಳಪ್ಪಕುರ್ಕಿ, ಮಲ್ಲು, ಮುತ್ತುರಾಜು, ಸಿದ್ದೇಶ್ ಇದ್ದರು.

■ ಸತ್ಯಮೂರ್ತಿ ತೋಳಹುಣಸೆ

ಕಾಂತಾರ-1 ಕನ್ನಡ ಮಣ್ಣಿನ ಕಥೆ




ಇಡೀ ಚಿತ್ರೋದ್ಯಮವೇ ಕಾತುರದಿಂದ ಕಾಯುತ್ತಿರುವ ಕಾಂತಾರ-1 ಅ.2ರಂದು ದೇಶಾದ್ಯಂತ ರಿಲೀಸಾಗುತ್ತಿದೆ, ಅದಕ್ಕೂ ಮುನ್ನ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ನಡೆಯಿತು. ಈ ವೇಳೆ ನಟ, ನಿರ್ದೇಶಕ ರಿಷಬ್ ಶೆಟ್ಟಿ ಮಾತನಾಡುತ್ತಾ, ಕಾಂತಾರ ತುಂಬಾ ಕಷ್ಟಗಳನ್ನು ದಾಟಿ ರಿಲೀಸ್ ಹಂತಕ್ಕೆ ಬಂದಿದೆ. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಘರ್ಷದ ಕಥೆಯನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ, ಇದೊಂದು ಎಮೋಷನಲ್ ಜರ್ನಿಯೂ ಹೌದು. ನನ್ನ ಪ್ರಯತ್ನಕ್ಕೆ ಇಡೀ ತಂಡ ಶಕ್ತಿಯಾಗಿ ನಿಂತಿದೆ. ಎಲ್ಲರೂ ನಮ್ಮ ಸಿನಿಮಾ ಅಂತ ಕೆಲಸ ಮಾಡಿದ್ದಾರೆ. ಬಜೆಟ್ ಬಗ್ಗೆ ಲೆಕ್ಕ ಹಾಕದೆ ನಿರ್ಮಾಪಕರು ಎಲ್ಲವನ್ನೂ ಕೊಟ್ಟಿದ್ದಾರೆ. ಮೂರು ತಿಂಗಳಿನಿಂದ ನಮ್ಮ ತಂಡ ನಿದ್ದೆ ಮಾಡದೆ ಕೆಲಸ ಮಾಡುತ್ತಿದೆ. ಶೂಟಿಂಗ್ ಟೈಮಲ್ಲಿ ನಾಲ್ಕೈದು ಬಾರಿ ನಾನು ಹೋಗೇ ಬಿಡ್ತಿದ್ದೆ, ನಾನಿವತ್ತು ಇಲ್ಲಿ ನಿಂತಿದ್ದೇನೆ ಅಂದರೆ ಅದಕ್ಕೆ ದೈವದ ಆಶೀರ್ವಾದವೇ ಕಾರಣ. ನಿರ್ಮಾಪಕರು ಈ ಚಿತ್ರಕ್ಕಾಗೇ ನಾಲ್ಕುವರೆ ಲಕ್ಷ ಜನರಿಗೆ ಊಟ ಹಾಕಿದ್ದಾರೆ. ನಮ್ಮ ಚಿತ್ರವನ್ನು ಕನ್ನಡಿಗರು, ಮಾಧ್ಯಮಗಳು ಇಷ್ಟು ದೊಡ್ಡ ಮಟ್ಟಕ್ಕೆ ತೆಗೆದು ಕೊಂಡು ಹೋಗಿದ್ದಾರೆ. ಮನುಷ್ಯರು ಹೋಗಲು ಆಗದಂಥ ಲೊಕೇಶನ್‌ಗಳಲ್ಲಿ ಶೂಟ್ ಮಾಡಿಕೊಂಡು ಬಂದಿದ್ದೇವೆ, ಕಾಂತಾರ ಕಂಡಿತ ನೀವೆಲ್ಲ ಹೆಮ್ಮೆ ಪಡುವಂಥ ಸಿನಿಮಾ ಆಗುತ್ತೆ ಎಂದು ಹೇಳಿದರು. ರಾಣಿ ಪಾತ್ರ ಮಾಡಿರುವ ನಾಯಕಿ ರುಕ್ಮಿಣಿ ವಸಂತ್ ಮಾತನಾಡಿ, ನಾನು ಇಂಥ ಚಿತ್ರದ ಭಾಗವಾಗಿರುವುದಕ್ಕೆ ಹೆಮ್ಮೆಯಿದೆ ಎಂದರು.


ಮೂರು ವರ್ಷ ನಾವು ಮನೆಬಿಟ್ಟು ಕುಂದಾಪುರದಲ್ಲೇ ವಾಸವಿದ್ದೆವು. ಹೊಂಬಾಳೆ ಫಿಲಂಸ್ ನಮ್ಮ ಜತೆ ಫ್ಯಾಮಿಲಿಯಾಗಿ ನಿಂತಿದೆ. 5 ವರ್ಷದ ಹಿಂದೆ ಫೋನ್‌ನಲ್ಲಿ ಒನ್‌ಲೈನ್ ಕಥೆ ಕೇಳಿ ಒಪ್ಪಿದ್ದರು. ಆ ದಿನಗಳಲ್ಲಿ ಅವರು ಒಪ್ಪಿದ್ದೇ ದೊಡ್ಡ ವಿಷಯ. ಛಾಯಾಗ್ರಾಹಕ ಅರವಿಂದ್ ರಿಶಭ್‌ಗೆ ತಮ್ಮನಂತಿದ್ದರು. ಲೊಕೇಶನ್ ಇಷ್ಟು ಚೆನ್ನಾಗಿ ಬರಲು ಅವರೇ ಕಾರಣ. ಪ್ರತಿಯೊಬ್ಬರೂ ಸಿನಿಮಾಗೆ ಒಳ್ಳೇದಾಗಲಿ ಅಂತ ಕೆಲಸ ಮಾಡಿದ್ದಾರೆ. ಪ್ರೇಕ್ಷಕರು ಸಿನಿಮಾ ನೋಡಿ ಒಪ್ಪಿಕೊಳ್ಳೋವರೆಗೆ ನನಗೂ ಆತಂಕವಿದೆ ಎಂದು ವಸ್ತ್ರವಿನ್ಯಾಸಕಿ, ರಿಶಭ್ ಪತ್ನಿ ಪ್ರಗತಿಶೆಟ್ಟಿ ಮಾಹಿತಿ ನೀಡಿದರು.

ನಿರ್ಮಾಪಕ ವಿಜಯ್ ಕಿರಗಂದೂರು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತಾ, ಕಾಂತಾರ ಅ.2ಕ್ಕೆ ಭಾರತದಾದ್ಯಂತ 7000ಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ, ಜೊತೆಗೆ 30 ದೇಶಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಲಿದೆ. ಇದೇ ಮೊದಲಬಾರಿಗೆ ಕನ್ನಡ ಚಿತ್ರವೊಂದು ಸ್ಪ್ಯಾನಿಷ್ ಭಾಷೆಗೆ ಡಬ್ ಆಗುತ್ತಿದೆ ಎಂದು ಹೇಳಿದರು.

ಬರಹಗಾರರಾದ ಅನಿರುದ್ಧ್ ಮಹೇಶ್, ಸುನೀಲ್ ಗೌತಮ್ ಚಿತ್ರದ ಕಾರ್ಯನಿರ್ವಾಹಕ ನಿರ್ಮಾಪಕ ಆದರ್ಶ್, ಸಾಹಸ ನಿರ್ದೇಶಕ ಅರ್ಜುನ್, ಸಂಕಲನಕಾರ ಸುರೇಶ್, ನೃತ್ಯ ನಿರ್ದೇಶಕ ಭೂಷಣ್ ಚಿತ್ರದ ಬಗ್ಗೆ ಮಾತನಾಡಿದರು.

ಚಿತ್ರರಂಗದಲ್ಲಿ ಎಸ್.ಎಲ್.ಭೈರಪ್ಪ ಹೆಜ್ಜೆ ಗುರುತು







ಕಳೆದ ಬುಧವಾರ ಇಹಲೋಕ ತ್ಯಜಿಸಿದ ಕನ್ನಡ ಸಾಹಿತ್ಯ ಲೋಕದ ಮಹಾನ್ ಚೇತನ, ಹಿರಿಯ ಸಾಹಿತಿ, ಪದ್ಮಭೂಷಣ ಎಸ್.ಎಲ್.ಭೈರಪ್ಪ ಅವರು ಸಾಹಿತ್ಯ ಕ್ಷೇತ್ರ ಮಾತ್ರವಲ್ಲ, ಚಲನಚಿತ್ರ ರಂಗದಲ್ಲೂ ಸಹ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅವರ ರಚನೆಯ 25ಕ್ಕೂ ಹೆಚ್ಚು ಕೃತಿಗಳಲ್ಲಿ ಕೆಲವು ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಿವೆ ಎಲ್ಲಕ್ಕಿಂತ ಹೆಚ್ಚಾಗಿ ಇವರ ರಚನೆಯ ಮೂರು ಕೃತಿಗಳನ್ನಾಧರಿಸಿ ಜನಪ್ರಿಯ ಚಲನಚಿತ್ರಗಳು ನಿರ್ಮಾಣವಾಗಿವೆ ಕೆಲವು ಕಾದಂಬರಿಗಳು ಧಾರಾವಾಹಿಗಳಾಗಿಯೂ ಸಹ ರೂಪುಗೊಂಡಿವೆ.

ಎಸ್.ಎಲ್. ಭೈರಪ್ಪ ಅವರ ಜನಪ್ರಿಯ ಕಾದಂಬರಿಗಳಲ್ಲಿ 'ವಂಶವೃಕ್ಷ' ಕೂಡ ಒಂದು. ಈ ಕಾದಂಬರಿಯನ್ನಾಧರಿಸಿ, ಬಿ.ವಿ.ಕಾರಂತ್ ಹಾಗೂ ಗಿರೀಶ್ ಕಾರ್ನಾಡ್ ಅವರು ಇದೇ ಹೆಸರಿನ ಚಲನಚಿತ್ರವನ್ನು ನಿರ್ದೇಶನ ಮಾಡಿದ್ದರು. 1971ರಲ್ಲಿ ತೆರೆಕಂಡ ಈ ಚಿತ್ರದಲ್ಲಿ ಡಾ.ವಿಷ್ಣುವರ್ಧನ್ ಅವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದರು. ಇದು ವಿಷ್ಣುವರ್ಧನ್ ಅಭಿನಯದ ಚೊಚ್ಚಲ ಸಿನಿಮಾ ಕೂಡ ಆಗಿತ್ತು.

ಇನ್ನು 1977ರಲ್ಲಿ ತೆರೆಕಂಡ ತಬ್ಬಲಿಯು ನೀನಾದೆ ಮಗನೇ, ಕನ್ನಡದಲ್ಲೇ ಒಂದು ವಿಶಿಷ್ಟ ಪ್ರಯತ್ನದ ಚಲನಚಿತ್ರವಾಗಿತ್ತು. ಬಿ.ವಿ. ಕಾರಂತ್ ಹಾಗೂ ಗಿರೀಶ್ ಕಾರ್ನಾಡ್ ಜಂಟಿಯಾಗಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದರು. ಈ ಸಿನಿಮಾದಲ್ಲಿ ನಸೀರುದ್ದೀನ್ ಷಾ, ಓಂಪುರಿ, ಕುಲಭೂಷನ್ ಖರಬಂಧ ಮನು ಸೇರಿದಂತೆ ಹಲವಾರು ಬಾಲಿವುಡ್ ನಟರು ಈ ಚಿತ್ರದಲ್ಲಿ ಬಣ್ಣ ಹಚ್ಚಿದ್ದರು.

ಎಸ್.ಎಲ್.ಭೈರಪ್ಪ ಅವರ ಕಾದಂಬರಿಗಳಲ್ಲಿ ಸಾಕಷ್ಟು ಗಮನ ಸೆಳೆದದ್ದು 'ಮತದಾನ. ಇದೇ ಕೃತಿಯನ್ನಾಧರಿಸಿ ಟಿ.ಎನ್. ಸೀತಾರಾಮ್ ಅವರು ಮತದಾನ ಎಂಬ ಚಲನಚಿತ್ರವನ್ನು ನಿರ್ದೇಶಿಸಿದ್ದರು. 2001ರಲ್ಲಿ ತೆರೆಕಂಡ ಈ ಚಿತ್ರದಲ್ಲಿ ಹಿರಿಯನಟ ಅನಂತನಾಗ್, ದೇವರಾಜ್ ಹಾಗೂ ತಾರಾ ಅನುರಾಧಾ ಅವರುಗಳು ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಎಸ್.ಎಲ್.ಭೈರಪ್ಪ ಅವರ ಕೃತಿಗಳು ಕೇವಲ ಸಿನಿಮಾ ಅಷ್ಟೇ ಅಲ್ಲ ಧಾರಾವಾಹಿಗಳೂ ಆಗಿವೆ 'ಗೃಹಭಂಗ', 'ದಾಟು' ಕಾದಂಬರಿಗಳೂ ಕಿರುತೆರೆ ಧಾರಾವಾಹಿಗಳಾಗಿ ನಿರ್ಮಾಣವಾಗಿವೆ ಹಾಗೇ 'ಪರ್ವ' ಕಾದಂಬರಿಯನ್ನು ನಾಟಕವನ್ನಾಗಿ ಪರಿವರ್ತಿಸಿ ಪ್ರಕಾಶ್ ಬೆಳವಾಡಿ ಅವರು ನಿರ್ದೇಶಿಸಿದ್ದಾರೆ. ಎಸ್.ಎಲ್.ಭೈರಪ್ಪ ಅವರ ಅಗಲಿಕೆ ಕೇವಲ ಸಾಹಿತ್ಯಲೋಕಕ್ಕೆ ಮಾತ್ರವಲ್ಲ, ಚಲನಚಿತ್ರರಂಗಕ್ಕೂ ದೊಡ್ಡ ನಷ್ಟ ಉಂಟುಮಾಡಿದೆ.

ಸೆ.28ರಂದು ಕಿಚ್ಚ ಸುದೀಪ್ ಸಾರಥ್ಯದ ಬಿಗ್‌ಬಾಸ್‌ಗೆ ಚಾಲನೆ



ಬಿಗ್‌ಬಾಸ್ ರಿಯಾಲಿಟಿ ಶೋ ಆರಂಭವಾದಾಗಿನಿಂದ 11 ವರ್ಷದವರೆಗೆ ಯಶಸ್ವಿಯಾಗಿ ನಿರೂಪಣೆ ಮಾಡಿಕೊಂಡು ಬರುತ್ತಿದ್ದ ನಟ ಕಿಚ್ಚ ಸುದೀಪ್ ಈ ವರ್ಷ ನಾನು ಹೋಸ್ಟ್ ಮಾಡಲ್ಲ ಎಂದು ಪ್ರಕಟಿಸಿದ್ದರು. ಆನಂತರ ಅಭಿಮಾನಿಗಳ ಒತ್ತಾಯದ ಮೇರೆಗೆ ಬಿಗ್‌ಬಾಸ್ ಸೀಸನ್-12 ನಿರೂಪಣೆ ಮಾಡಲು ಒಪ್ಪಿಕೊಂಡರು. ಈ ಬಾರಿ ಕಲರ್ಸ್ ಕನ್ನಡ ವಾಹಿನಿಯಲ್ಲಿ ಬಿಗ್ ಬಾಸ್ ಸೀಜನ್-12 ಇದೇ ತಿಂಗಳ 28ರ ಭಾನುವಾರದಿಂದ ಪ್ರಾರಂಭವಾಗಲಿದೆ.



ಈ ಸಲ "ಅನಿರೀಕ್ಷಿತವನ್ನು ನಿರೀಕ್ಷಿಸಿ" ಎಂಬ ಕಾನ್ಸೆಪ್ಟ್ ಮೇಲೆ ಬಿಗ್ ಬಾಸ್ ಶೋ ನಡೆಯಲಿದೆ. ಕೋಟ್ಯಾಧಿಪತಿ ನಂತರ ಭಾರತದ ಅತಿದೊಡ್ಡ ರಿಯಾಲಿಟಿ ಶೋ ಎಂದು ಗುರುತಿಸಿಕೊಂಡಿರುವ ಬಿಗ್‌ಬಾಸ್ ಈ ವರ್ಷ ಸಂಪೂರ್ಣವಾಗಿ ಹೊಸ ರೂಪ, ಹೊಸ ವಿನ್ಯಾಸದಲ್ಲಿ ಮತ್ತು ಹೆಚ್ಚು ಮನರಂಜನೆಯೊಂದಿಗೆ ಮೂಡಿಬರಲಿದೆ.

ಈ ರಿಯಾಲಿಟಿ ಶೋನ ಗ್ರಾಂಡ್ ಓಪನಿಂಗ್ ಕಾರ್ಯಕ್ರಮ ಸೆ. 28ರ ಭಾನುವಾರ ಸಂಜೆ 6 ಗಂಟೆಗೆ ನಡೆಯಲಿದೆ, ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9.30ಕ್ಕೆ ಕಲರ್ಸ್ ಕನ್ನಡ ಮತ್ತು ಜಿಯೋ ಹಾಟ್ ಸ್ಟಾರ್‌ನಲ್ಲಿ ಪ್ರಸಾರವಾಗಲಿದೆ. ಜತೆಗೆ ದಿನದ 24 ಗಂಟೆಯೂ ಪ್ರೇಕ್ಷಕರು ಜಿಯೋ ಹಾಟ್‌ಸ್ಟಾರ್‌ನಲ್ಲಿ ಕಾರ್ಯಕ್ರಮವನ್ನು ಲೈವ್ ಆಗಿ ವೀಕ್ಷಿಸಬಹುದಾಗಿದೆ. ಅಲ್ಲದೆ ಶನಿವಾರ ಮತ್ತು ಭಾನುವಾರ ಸಂಜೆ ವಾರದ ವಿಶೇಷ ಕಂತುಗಳು ಪ್ರಸಾರವಾಗಲಿದೆ.

ಎಂದಿನಂತೆ ಈ ಬಾರಿಯೂ ಸಹ ಕಿಚ್ಚ ಸುದೀಪ್ ಅವರು ಬಿಗ್‌ಬಾಸ್ ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದಾರೆ. ಕಿಚ್ಚ ಸುದೀಪ್ ಅವರ ಸ್ಫೂರ್ತಿದಾಯಕ ಹಾಗೂ ಕಂಚಿನ ಕಂಠದ ಮಾತುಗಳು, ಮೊನಚು ವ್ಯಕ್ತಿತ್ವ, ನಿಬ್ಬೆರಗಾಗಿಸೋ ವೈಖರಿ, ಕಣ್ಸೆಳೆಯೋ ನಗು, ಸಮಸ್ಯೆಗಳನ್ನು ಅಲ್ಲೇ ಪರಿಹರಿಸೋ ಚಾಣಾಕ್ಷತೆ, ದಾರಿ ತಪ್ಪಿದವರನ್ನು ತಿದ್ದೋ ಹಿರಿತನ, ಪ್ರತಿಬಾರಿ ಸಂದೇಶ ಹೇಳುವುದು ಇವೆಲ್ಲ ಬಿಗ್‌ಬಾಸ್ ಸ್ಪರ್ಧಿಗಳಲ್ಲಿ ಹೊಸ ಉತ್ಸಾಹ ವನ್ನು ತುಂಬುವಂತಿದ್ದು, ವಾರಾಂತ್ಯದಲ್ಲಿ ಅವರ ಸ್ಫಟಿಕದಂಥ ಮಾತುಗಳನ್ನು ಕೇಳಲು ಬಿಗ್ ಬಾಸ್ ಸ್ಪರ್ಧಿಗಳೆಲ್ಲರೂ ಕಾಯುತ್ತಿರುತ್ತಾರೆ.

ಈ ಬಾರಿ ಹಲವು ಕ್ಷೇತ್ರಗಳ ಸೆಲೆಬ್ರಿಟಿಗಳು, ಬೇರೆ ಬೇರೆ ರಂಗಗಳಲ್ಲಿ ಗುರುತಿಸಿಕೊಂಡ ಪ್ರಮುಖರು ಪ್ರವೇಶಿಸಿ ವೀಕ್ಷಕರಿಗೆ ಮನರಂಜನೆ ನೀಡಲಿದ್ದಾರೆ.

ಚೈಲ್ಡು ಆದ ಕಾಕ್ರೋಚ್ ಸುಧೀ





ಖಳನಟ ಕಾಕ್ರೋಚ್ ಸುಧೀ ಮತ್ತೊಮ್ಮೆ ನಾಯಕನಾಗಿ ನಟಿಸುತ್ತಿದ್ದಾರೆ. ಆ ಚಿತ್ರದ ಹೆಸರು 'ಚೈಲ್ಡು'. ಹಫ್ತಾ ನಿರ್ದೇಶಕ ಪ್ರಕಾಶ್ ಹೆಬ್ಬಾಳ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದ ಮುಹೂರ್ತ ಹಾಗೂ ಟೈಟಲ್ ಲಾಂಚ್ ಸಮಾರಂಭ ಇತ್ತೀಚೆಗೆ ನಡೆಯಿತು. ಇದೇ ಸಂದರ್ಭದಲ್ಲಿ ಟಿಕೆಆರ್ ಫೌಂಡೇಶನ್‌ನ ಕಿರಣ್‌ರೆಡ್ಡಿ ಅವರು ಚಿತ್ರದ ಶೀರ್ಷಿಕೆ ಬಿಡುಗಡೆಗೊಳಿಸಿ ಶುಭ ಹಾರೈಸಿದರು,

ನಂತರ ಮಾತನಾಡಿದ ನಿರ್ದೇಶಕರು, ಕಮರ್ಷಿಯಲ್ ಕಂಟೆಂಟ್ ಇಟ್ಟುಕೊಂಡು ಮಾಡುತ್ತಿರೋ ಆಕ್ಷನ್ ಕಾಮಿಡಿ, ಹಾರರ್ ಜತೆಗೆ ಕ್ರೈಮ್ ಥ್ರಿಲ್ಲರ್ ಜಾನರ್ ಚಿತ್ರ ಇದಾಗಿದ್ದು, ನಾಯಕ ಯಾವಾಗಲೂ ಚೈಲ್ಡ್ ಥರಾ ಆಡುತ್ತಿರುತ್ತಾನೆ. ಹಾಗಾಗಿ ಚಿತ್ರಕ್ಕೆ ಚೈಲ್ಡು ಟೈಟಲ್ ಇಟ್ಟಿದ್ದೇವೆ. ನಾಳೆಯಿಂದಲೇ ಆರಂಭಿಸಿ ಬೆಂಗಳೂರು ಅಲ್ಲದೆ ಬೀದರ್, ಬಾಗಲಕೋಟೆ ಮುಂತಾದ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆ ಹಾಕಿಕೊಳ್ಳಲಾಗಿದೆ. ತಾರಾ ಅನುರಾಧ, ಅಶ್ವಿನ್ ಹಾಸನ್, ವಲ್ಲಭ್, ಉದಯ್ ಪ್ರಸನ್ನ ಅಲ್ಲದೆ ರಂಗಾಯಣ ರಘು ಅವರ ಜೊತೆ ಮಾತುಕತೆ ನಡೆಯುತ್ತಿದೆ. ಸುಧೀ ಅವರು ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಹೇಳಿದರು.

ನಂತರ ಮಾತನಾಡಿದ ನಾಯಕ ಕಾಕ್ರೋಜ್ ಸುಧೀ, ಹೀರೋ ಆಗಿ ನನ್ನ ಮೂರನೇ ಚಿತ್ರವಿದು. ಕಾರ್ತಿಕ್ ಅಲಿಯಾಸ್ ಕಾಕ್ರೋಚ್ ಹಾಗೂ ಫಿದಾ ಚಿತ್ರಗಳ ಕೆಲಸ ನಡೆಯುತ್ತಿದೆ. ನಿರ್ದೇಶಕರ ಜೊತೆ ಈ ಮೊದಲು ಒಂದು ಚಿತ್ರದಲ್ಲಿ ಕೆಲಸ ಮಾಡಿದ್ದೆ. ಆಗಲೇ ಅವರು ನಿಮ್ಮ ಜೊತೆ ಸಿನಿಮಾ ಮಾಡುತ್ತೇನೆ ಎಂದಿದ್ದರು. ಅದರಂತೆ ಈಗ 'ಚೈಲ್ಡು' ಮಾಡಿದ್ದಾರೆ, ಚಿತ್ರದಲ್ಲಿ ಸ್ವಲ್ಪ ರೌಡಿಸಂ ಬೇಸ್ ಕಥೆ ಇದ್ದು, ಜೊತೆಗೆ ಲವ್ ಎಪಿಸೋಡ್ ಕೂಡ ಇರುತ್ತದೆ. ಒಬ್ಬ ನಟನಾಗಿ ಎಲ್ಲಾ ಪಾತ್ರಗಳನ್ನು ಮಾಡಲು ನಾನು ಇಷ್ಟಪಡುತ್ತೇನೆ. ನಿರ್ದೇಶಕರು ಹೇಳಿದ ಕಥೆ ನನಗೆ ಇಷ್ಟವಾಯಿತು. ನನಗೆ ತಕ್ಕ ಹಾಗೆ ನಿರ್ದೇಶಕರು ಈ ಕಥೆ ಮಾಡಿದ್ದಾರೆ. ರೌಡಿಸಂ ಚಿತ್ರವಾದರೂ, ಲವ್, ಸೆಂಟಿಮೆಂಟ್ ಕೂಡ ಚಿತ್ರದಲ್ಲಿದೆ ಎಂದು ಹೇಳಿದರು. ಈ ಚಿತ್ರಕ್ಕೆ ಸಿದ್ದು ಕೆಂಚನಹಳ್ಳಿ ಅವರ ಛಾಯಾಗ್ರಹಣ, ದೀಪು ಸಿ.ಎಸ್. ಅವರ ಸಂಕಲನವಿದೆ. ಅಲ್ಲದೆ ಚೈಲ್ಡ್ ಚಿತ್ರದಲ್ಲಿ ಒಟ್ಟು 3 ಹಾಡುಗಳಿದ್ದು ಸಂಗೀತ ನಿರ್ದೇಶಕರು ಇನ್ನೂ ಫೈನಲ್ ಆಗಿಲ್ಲ.

ಸಿನಿಪದಬಂಧ-595



ಉಮ್ಮತ್ತೂರು ಇಂದುಶೇಖರ್
ಮೊ.9880820462

1		2		■	■	■	3	■	■	4
	■		■	5					■	
	■		■		■	■		■	■	
6				■	7				8	
	■		■	■		■	■	■		■
	■	9	10				■	11		
	■	■		■		■	12	■		■
■	13			■		■	14			■
■		■		■	■	■		■	■	■
■		■		■	15	■	■	■	16	■
■		■	17							

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಒಂಬತ್ತು ಇರುಳಿನ ಹಬ್ಬ ! 4
5. ಶ್ರೀನಗರ ಕಿಟ್ಟಿ ಅಭಿನಯದಲ್ಲಿ ವರ್ಷಧಾರೆ ಪುನಃ ಶುರುವಾಗಿದೆ 5
6. ವಿಷ್ಣುವರ್ಧನ್ ಕುಂಚ ಹಿಡಿದ ಕಲಾವಿದ 4
7. ಅಶ್ವಯುಜ ಮಾಸದ ಹತ್ತನೇ ದಿನದ ಗೆಲುವಿನ ಹಬ್ಬ! 6
9. ವಿಷ್ಣುವರ್ಧನ್ ಮಂದಿಯ ಮುಖಂಡ 5
11. ಆನೆಯನ್ನು ನಿಯಂತ್ರಿಸಲು ಬಳಸುವ ಸಾಧನ 3
13. ಚಿರಂಜೀವಿ ಸರ್ಜಾ ಅಭಿನಯದಲ್ಲಿ "ಕೊಲ್ಲುವುದು" ಎನ್ನುವರ್ಥವಿದೆ 3
14. ವಿಶುಕುಮಾರ್‌ನ ಆಂಗ್ಲ ತಾಯಿ 3
17. ರಾಜಕುಮಾರ್ ಅಭಿನಯಕ್ಕೆ ಎನ್. ಸಿ. ರಾಜನ್ ನಿರ್ದೇಶಕ 8

ಮೇಲಿನಿಂದ ಕೆಳಕ್ಕೆ

1. ಚಾಮುಂಡಿ ತಾಯಿಯನ್ನು ವಿನೋದ್ ಆಳ್ವಾ ಅಭಿನಯದಲ್ಲಿ ಹೀಗೆನ್ನಿ 7
2. ಟೈಗರ್ ಪ್ರಭಾಕರ್ – ರೆಬೆಲ್ ಸ್ಟಾರ್ ಅಂಬರೀಷ್ ಅಭಿನಯದ ಚಿತ್ರ 6
3. ಅಂಬಿಯ ಪ್ರಾಣಿಗಳ ಸಂಗ್ರಹ ಸ್ಥಳ 4
4. ನವರಾತ್ರಿ ಹಬ್ಬದ ಎಂಟನೆಯ ದಿನ 4
5. ಹೆಣ್ಣು, ಹೊನ್ನಿನೊಂದಿಗೆ ಬಂದದ್ದು 2
7. ಗೆಲುವಿನ ಅಧಿದೇವತೆ 5
8. ಸುಪ್ರೀಂ ಹೀರೋ ಎಂಬ ಬಿರುದುಳ್ಳ ನಟ 5
10. ಅಂಬರೀಷ್ – ಸುಮನ್ ರಂಗನಾಥ್ ಅಭಿನಯದ ಚಿತ್ರ 6
12. _ _ _ ಅಕ್ಬರ್ ಆಂಥೋನಿ 3
13. ಮಾಸ್ಟರ್ ಹೀರಣ್ಣಯ್ಯನ ಆಚರಣೆ 4
15. ಪರಾಕ್ರಮಿ ರಾಕ್‌ಲೈನ್ ವೆಂಕಟೇಶ್ ಇಲ್ಲಿ ತಲೆಕೆಳಗು 2
16. ಮಾಲಾಶ್ರೀ ಅಭಿನಯದ ಚಿತ್ರವಿದು 2

ಸಿನಿ ಪದಬಂಧ 594ರ ಉತ್ತರ

ಕ	ರ್ನಾ	ಟ	ಕ	ರ	ತ್ನ	■	ವಿ	ಷ್ಣು	ಸೇ	ನಾ
ರ್ನಾ	■	■	■	ಹ	■	■	■	■	■	ರ
ಟ	■	ಉ	■	ಸ್ಯ	■	ಪಂ	ಚ	ಮ	ವೇ	ದ
ಕ	ನ	ಸಿ	ನ	ರಾ	ಣಿ	■	ತು	■	■	ವಿ
ಸು	■	ರೇ	■	ತ್ರಿ	■	■	ರ	ವಿ	ತೇ	ಜ
ಪು	■	■	■	■	■	ಮೋ	■	ಘ್ನೇ	■	ಯ
ತ್ರ	ಚಿ	ಯ	ಜ	■	ಲೋ	ಹಿ	ತಾ	ಶ್ವ	■	■
■	■	■	ಯ	■	■	ನಿ	■	ರ	■	ನಾ
■	ಯ	■	ಮಾ	ಲಾ	ಶ್ರೀ	■	ಹಾ	ವಾ	ಡಿ	ಗ
■	ಮು	■	ಲಿ	■	ತಿ	■	■	ಹ	■	ಣ್ಣ
ಸ	ನಾ	ತ	ನಿ	■	ಮ	ತ	ದಾ	ನ	■	■

ವಿಜೇತರು: ಶ್ರೀಮತಿ ಎಂ.ಕವಿತಾ, ಅಂಚೆ ಸಹಾಯಕಿ, ಬೋಗಾದಿ ಅಂಚೆ ಕಚೇರಿ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಗ್ರಾಮೀಣ ಸೊಗಡಿನ ಥ್ರಿಲ್ಲರ್ ಲವ್‌ಸ್ಟೋರಿ ಕುಂಟೆಬಿಲ್ಲೆ





ನಿರ್ದೇಶಕ ಸಿದ್ದೇಗೌಡ, ನಿರ್ಮಾಪಕ ಜಿ.ಕುಮಾರ್‌ಗೌಡ

ಗ್ರಾಮೀಣ ಸೊಗಡಿನ ಸಾಕಷ್ಟು ಪ್ರೇಮಕಥೆಗಳನ್ನು ಬೆಳ್ಳಿತೆರೆ ಮೇಲೆ ನೋಡಿ ಆಸ್ವಾದಿಸಿದ್ದೇವೆ. ಅದೇ ಸೊಗಡಿನ ಮತ್ತೊಂದು ಲವ್ ಥ್ರಿಲ್ಲರ್ ಚಿತ್ರ ಕುಂಟೆಬಿಲ್ಲೆ ಇಂದಿನಿಂದ ರಾಜ್ಯಾದ್ಯಂತ ತೆರೆಕಂಡಿದೆ. ದಕ್ಷಯಜ್ಞ ಖ್ಯಾತಿಯ ಜೆಬಿಎಸ್ ಸಿದ್ದೇಗೌಡ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ರಚಿಸಿ ಆಕ್ಷನ್ ಕಟ್ ಹೇಳಿದ್ದಾರೆ. ಯುವನಟ ಯದು ಈ ಚಿತ್ರದಿಂದ ನಾಯಕನಾಗಿ ಪರಿಚಯವಾಗುತ್ತಿದ್ದಾರೆ. ಕೃಷ್ಣ ತುಳಸಿ, ಮನಸಾಗಿದೆ ಸೇರಿದಂತೆ ಹಲವಾರು ಚಿತ್ರಗಳಲ್ಲಿ ನಟಿಸಿದ ಮೇಘಶ್ರೀ ಅವರು ಚಿತ್ರದ ನಾಯಕಿಯಾಗಿದ್ದಾರೆ. ಇತ್ತೀಚೆಗೆ ಈ ಚಿತ್ರದ ಬಿಡುಗಡೆಪೂರ್ವ ಪತ್ರಿಕಾಗೋಷ್ಠಿ ನಡೆಯಿತು.


ನಿರ್ದೇಶಕ ಸಿದ್ದೇಗೌಡರು ಮಾತನಾಡಿ, ಚಿಕ್ಕ ವಯಸ್ಸಿನಲ್ಲಿ, ಹೆಚ್ಚಾಗಿ ಹಳ್ಳಿಗಳಲ್ಲಿ ಆಡುತ್ತಿದ್ದ ಕುಂಟೆಬಿಲ್ಲೆ ಆಟ, ಅದರ ಹಿನ್ನೆಲೆಯಲ್ಲಿ ನಡೆಯುವ ಪ್ರೀತಿ, ಪ್ರೇಮ, ನೋವು ಇಂಥ ಅಂಶಗಳನ್ನು ಈ ಚಿತ್ರದಲ್ಲಿ ಥ್ರಿಲ್ಲರ್ ಹಿನ್ನೆಲೆ ಇಟ್ಟುಕೊಂಡು ಹೇಳಲು ಪ್ರಯತ್ನಿಸಿದ್ದೇನೆ. ಹಳ್ಳಿಯ ಸೊಗಡಿನ ಜತೆಗೆ ಲವ್, ಸಸ್ಪೆನ್ಸ್ ಕಥಾನಕ ಈ ಚಿತ್ರದಲ್ಲಿದೆ. ನಮ್ಮ ಕೈಯಾರೆ ನಾವೇ ನಮ್ಮ ಪ್ರೀತಿಯನ್ನು ಹೇಗೆಲ್ಲಾ ಹಾಳು ಮಾಡಿಕೊಳ್ಳಬಹುದು ಎಂಬುದರ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಸಣ್ಣ ಸಿನಿಮಾ ಮಾಡುವವರಿಗೆ ಗಾಂಧಿ ನಗರದಲ್ಲಿ ಬೆಂಬಲ ಸಿಗುತ್ತಿಲ್ಲ. ನಮ್ಮ ಚಿತ್ರಕ್ಕೆ ಪತ್ರಕರ್ತರಾದ ನಿಮ್ಮೆಲ್ಲರ ಸಹಕಾರ ತುಂಬಾ ಇದೆ. ಒಂದೇ ವಾರದ ಅಂತರದಲ್ಲಿ ಕಾಂತಾರ ಚಿತ್ರ ಬಂದರೂ, ನಮ್ಮ ಚಿತ್ರವನ್ನು ಪ್ರೇಕ್ಷಕರು ಇಷ್ಟಪಟ್ಟು ನೋಡುತ್ತಾರೆಂಬ ಭರವಸೆಯಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನಿರ್ಮಾಪಕ ಜಿ.ಕುಮಾರ್‌ಗೌಡ ಮಾತನಾಡಿ, ನಾವೆಲ್ಲ ತುಂಬಾ ಪರಿಶ್ರಮ ಹಾಕಿ ಈ ಸಿನಿಮಾ ಮಾಡಿದ್ದೇವೆ. ನನ್ನ ಮಗ ನಟನಾಗಿ ಬೆಳೆಯಬೇಕೆಂದು ಈ ಚಿತ್ರ ಮಾಡಿದ್ದೇನೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು ಎಂದರು.

ನಾಯಕ ಯದು ಮಾತನಾಡಿ, ಇದು ನನ್ನ ಮೊದಲ ಚಿತ್ರ. ರಂಗಭೂಮಿಯಲ್ಲಿ ತರಬೇತಿ ಪಡೆದ ನಂತರವೇ ಪಾತ್ರಕ್ಕಾಗಿ ಬಣ್ಣ ಹಚ್ಚಿದ್ದೇನೆ. ಕೋಳಿ ಫಾರಂನಲ್ಲಿ ಕೆಲಸ ಮಾಡುವ ಯುವಕನಾಗಿ ನಟಿಸಿದ್ದೇನೆ. ಪ್ರೀತಿಯನ್ನು ಉಳಿಸಿಕೊಳ್ಳಲು ಏನೇನೆಲ್ಲ ಸಾಹಸ ಮಾಡುತ್ತೇನೆ, ಕೊನೆಗೂ ಆ ಪ್ರೀತಿ ಉಳಿಸಿಕೊಂಡನೇ ಇಲ್ಲವೇ ಎನ್ನುವುದೇ ಚಿತ್ರದ ಕಾನ್ಸೆಪ್ಟ್ ಎಂದರು.

ನಾಯಕಿ ಮೇಘಶ್ರೀ ಮಾತನಾಡುತ್ತಾ, ನನ್ನದು ತುಂಬಾ ಬೋಲ್ಡ್ ಪಾತ್ರ. ಇಂಥಾ ಪಾತ್ರ ಮಾಡುವುದು ಸುಲಭವಲ್ಲ. ಇದೊಂದು ವಿಶೇಷ ಪಾತ್ರವಾಗಿದ್ದರಿಂದ ನಾನು ಅಭಿನಯಿಸಲು ಒಪ್ಪಿದೆ, ಇಡೀ ಚಿತ್ರದ ಕಥೆ ನನ್ನ ಪಾತ್ರದ ಸುತ್ತ ನಡೆಯುತ್ತದೆ. ಈ ಚಿತ್ರದಲ್ಲಿ ನಾನು ಕುಂಟೆಬಿಲ್ಲೆ, ವಾಲಿಬಾಲ್‌ನಂಥ ಸಾಕಷ್ಟು ಆಟಗಳನ್ನು ಆಡಿದ್ದೇನೆ ಎಂದರು.

ಜೀವಿತಾ ಕ್ರಿಯೇಷನ್ಸ್ ಮೂಲಕ ಎಸ್‌ಬಿ.ಶಿವ ಹಾಗೂ ಕುಮಾರಗೌಡ ಜಿ. ನಿರ್ಮಿಸಿರುವ ಈ ಚಿತ್ರಕ್ಕೆ ಹರಿಕಾವ್ಯ ಸಂಗೀತ ಸಂಯೋಜಿಸಿದ್ದಾರೆ, ಸುಚೇಂದ್ರಪ್ರಸಾದ್, ಸುಧಾ ಬೆಳವಾಡಿ, ಶಂಕರ ಅಶ್ವಥ್, ಬಲ. ರಾಜವಾಡಿ, ಭವಾನಿ ಪ್ರಕಾಶ್, ಕಾವ್ಯ ಉಳಿದ ಪಾತ್ರವರ್ಗದಲ್ಲಿದ್ದಾರೆ.



ಲಾಭದೊಂದಿಗೆ ಅಭಿವೃದ್ಧಿಯತ್ತ ಮಲಿಯೂರು ಪಿಎಸಿಎಸ್

ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಎಂ.ಸ್ವಾಮಿ ಮಾಹಿತಿ



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯುಲ್ಲಿ ಸಂಘದ ಅಧ್ಯಕ್ಷ ಎಂ.ಸ್ವಾಮಿ ಮಾತನಾಡಿದರು.

ತಿ.ನರಸೀಪುರ, ಸೆ.25– ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘ 1,24,361 ಲಕ್ಷ ರೂ. ನಿವ್ವಳ ಲಾಭ ಗಳಿಸುವ ಮೂಲಕ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದು ಮಲಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಸ್ವಾಮಿ ತಿಳಿಸಿದರು.

ತಾಲೂಕಿನ ಮಲಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಗುರುವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಹಕಾರ ಸಂಘ ಸ್ಥಾಪನೆಯಾಗಿ 13 ವರ್ಷಗಳಾಗಿದ್ದು, ಆರಂಭದಿಂದಲೂ ನಷ್ಟವನ್ನೇ ಅನುಭವಿಸುತ್ತಾ ಬಂದಿದ್ದು, ಪ್ರಸಕ್ತ ಸಾಲಿನಲ್ಲಿ ನಷ್ಟದ ಸುಳಿ ಯಿಂದ ಹೊರಬಂದು ಲಾಭ ಗಳಿಸಿದೆ. ಇದಕ್ಕಾಗಿ ಸಂಘದ ಸದಸ್ಯರು, ಷೇರುದಾರರು ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಸಂಘದ ಸದಸ್ಯರು ಸಂಘದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸುತ್ತಿರುವುದರಿಂದ ಸಂಘ ನಷ್ಟದಿಂದ ಹೊರಬಂದು ಲಾಭಗಳಿಸಿ ಅಭಿವೃದ್ಧಿಯತ್ತ ದಾಪುಗಾಲಿಟ್ಟಿದೆ. ಮುಂದೆಯೂ ಸಾಲ ಪಡೆದ ಸದಸ್ಯರು ಸುಸ್ತಿದಾರರಾಗದೇ ಸಕಾಲಕ್ಕೆ ಮರುಪಾವತಿ ಮಾಡಿದಲ್ಲಿ ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಲಿದೆ ಎಂದರು.

ಸಂಘವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸ್ವಂತ ಕಟ್ಟಡಕ್ಕಾಗಿ ನಿವೇಶನ ಗುರುತಿಸಲಾಗಿದೆ. ಈಗಾಗಲೇ 5 ಲಕ್ಷ ರೂ. ಅನುದಾನ ದೊರಕಿದ್ದು, ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಆಡಳಿತ ಮಂಡಳಿ ಅಧಿಕಾರಕ್ಕೆ ಬರುತ್ತಿದ್ದಂತೆ ಮತ್ತೆ 10 ಲಕ್ಷ ರೂ.ಗಳ ಅನುದಾನ ದೊರಕಲಿದ್ದು, ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭಿಸಲಾಗುತ್ತದೆ ಎಂದರು.

ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮರಯ್ಯ, ಸಂಘದ ವಾರ್ಷಿಕ ವರದಿ ಮಂಡಿಸಿ ಸಂಘವು ಪ್ರಸಕ್ತ ಸಾಲಿನಲ್ಲಿ ಉತ್ತಮ ಸ್ಥಿತಿಯಲ್ಲಿದ್ದು ರೈತರಿಗೆ 1 ಕೋಟಿ 7 ಲಕ್ಷ 63 ಸಾವಿರ ರೂ.ಗಳ ಕೆಸಿಸಿ ಸಾಲ ವಿತರಣೆ ಮಾಡಲಾಗಿದೆ. ಅಲ್ಲದೇ 1.65 ಕೋಟಿ ರೂ.ಗಳ ಎಸ್‌ಎಚ್‌ಜಿ ಸಾಲ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಪುಟ್ಟಸಿದ್ದಮ್ಮ, ನಿರ್ದೇಶಕರಾದ ಎಂ.ಮಂಟೇಲಿಂಗಪ್ಪ, ಬೀರಯ್ಯ, ಶಿವಣ್ಣ, ಕೆಂಪೇಗೌಡ, ಹೆಚ್.ಜವರಯ್ಯ, ಸಿದ್ದಯ್ಯ, ದೊಳ್ಳಯ್ಯ, ಎಂ.ಶಿವಕುಮಾರ್, ಚಿಕ್ಕಮ್ಮ, ಮುಖಂಡರಾದ ಮಹೇಶ್ ಬಾಬು, ಆನಂದ್, ಕೇಬಲ್ ರಾಜು, ರಾಣಿ, ಶೈಲಜಾ ಸೇರಿದಂತೆ ಕಾಳಮ್ಮ ಹಾಗೂ ಬೀರೇಶ್ವರ ಸ್ವಸಹಾಯ ಸಂಘದ ಸದಸ್ಯರು ಹಾಗೂ ಮಲಿಯೂರು ಗ್ರಾಮಸ್ಥರು ಹಾಜರಿದ್ದರು.

ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಗೈರು: ಮಲಿಯೂರು ಶಂಕರ್ ಆಕ್ಷೇಪ

ತಿ.ನರಸೀಪುರ: ಸಭೆ ಆರಂಭಕ್ಕೂ ಮುನ್ನಾ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಸಭೆಗೆ ಗೈರು ಹಾಜರಾಗಿದ್ದಕ್ಕೆ ಸಂಘದ ಸದಸ್ಯ ಮಲಿಯೂರು ಶಂಕರ್ ಆಕ್ಷೇಪ ವ್ಯಕ್ತಪಡಿಸಿ ಸಭೆ ಮುಂದೂಡುವಂತೆ ಒತ್ತಾಯಿಸಿದರು.

ಸಭೆಗೆ ಆಡಿಟ್ ವರದಿ ಹಾಗೂ ಲೆಕ್ಕಪತ್ರದ ವಿವರ ನೀಡದೇ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಮಂಜೇಶ್‌ಗೌಡ ಗೈರಾಗಿರುವುದು ಸರಿಯಲ್ಲ ಎಂದು ಆಕ್ಷೇಪಿಸಿ ಸಭೆ ಮುಂದೂಡುವಂತೆ ಒತ್ತಾಯಿಸಿದರು. ಈ ವೇಳೆ ಕಾರ್ಯದರ್ಶಿ ಮರಯ್ಯ ಸಭೆಗೆ ಬೇಕಾದ ಮಾಹಿತಿ ತಾವೇ ನೀಡುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಸಭೆ ಆರಂಭವಾಯಿತು.

ಪ್ರತಿ ವರ್ಷ ಸಂಘ ನಷ್ಟ ಅನುಭವಿಸಲು ಕಾರಣ ತಿಳಿಸಿ ಹಾಗೂ ಷೇರುದಾರರ 6 ಲಕ್ಷ ಹಣದ ಬಗ್ಗೆ ಮಾಹಿತಿ ನೀಡಿ ಎಂದು ಮಲಿಯೂರು ಶಂಕರ್ ಕಾರ್ಯದರ್ಶಿಗೆ ಕೇಳಿದ ವೇಳೆ ಷೇರು ಹಣದಲ್ಲಿ ರಸಗೊಬ್ಬರ ಖರೀದಿ ಮಾಡಿದ್ದಾಗಿ ಮಾಹಿತಿ ನೀಡಿದರು. ಆದರೆ ಇದನ್ನೊಪ್ಪದ ಶಂಕರ್ ಗೊಬ್ಬರ ಸಾಗಣೆಗಾಗಿ 36 ಸಾವಿರ ರೂ. ವೆಚ್ಚ ತೋರಿಸಿದ್ದೀರಾ, ಎಷ್ಟು ಮೊತ್ತಕ್ಕೆ ಗೊಬ್ಬರ ಖರೀದಿ ಮಾಡಿದ್ದೀರಾ, ಉಳಿದಿರುವ ಹಣ ಎಷ್ಟು, ಎಷ್ಟು ರಸಗೊಬ್ಬರ ಮಾರಾಟ ಮಾಡಿದ್ದೀರಾ ಇದರ ಬಗ್ಗೆ ಮಾಹಿತಿ ನೀಡಿ ಉಳಿದ ಹಣ ಎಲ್ಲಿದೆ? ಎಂದು ಪ್ರಶ್ನಿಸಿದರು.

ರಸಗೊಬ್ಬರ ಖರೀದಿ ಮಾಡಿ, ಉಳಿಕೆ ಹಣ ಬ್ಯಾಂಕ್‌ನಲ್ಲಿ ಇಟ್ಟಿರುವುದಾಗಿ ಕಾರ್ಯದರ್ಶಿ ಮರಯ್ಯ ಹೇಳುತ್ತಿದ್ದಂತೆ ಬ್ಯಾಂಕ್ ಪಾಸ್‌ಬುಕ್‌ನಲ್ಲಿ ಎಂಟ್ರಿಯಾಗಿರುವುದನ್ನು ಸಭೆಯಲ್ಲಿ ಪ್ರದರ್ಶಿಸಿ ಎಂದಾಗ ಇದಕ್ಕೆ ಸಮರ್ಪಕ ಮಾಹಿತಿ ದೊರಕಲಿಲ್ಲ. ಮುಂದಿನ ಸಭೆಯಲ್ಲಿ ಲಾಭ, ನಷ್ಟ, ಖರೀದಿ, ಉಳಿಕೆ ಬಗ್ಗೆ ಸಮರ್ಪಕ ಮಾಹಿತಿ ನೀಡುವುದಾಗಿ ಕಾರ್ಯದರ್ಶಿ ಸಭೆಗೆ ತಿಳಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಮೀಕ್ಷೆಯಲ್ಲಿ ಕುಂಬಾರ ಎಂದು ನಮೂದಿಸಿ

ತಾಲೂಕು ಕುಂಬಾರ ಸಂಘದ ಅಧ್ಯಕ್ಷ ಮರಿಶೆಟ್ಟಿ



ಸುದ್ದಿಗೋಷ್ಠಿಯಲ್ಲಿ ಮರಿಶೆಟ್ಟಿ ಮಾತನಾಡಿದರು.

ನಂಜನಗೂಡು, ಸೆ.25– ರಾಜ್ಯ ಸರ್ಕಾರ ನೇಮಿಸಿರುವ ಹಿಂದುಳಿದ ವರ್ಗಗಳ ಆಯೋಗ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದ್ದು, ಕುಂಬಾರ ಸಮಾಜದ ಬಂಧುಗಳು ಸಮೀಕ್ಷೆ ನಡೆಸುವ ಸಿಬ್ಬಂದಿ ಮನೆಗೆ ಬಂದಾಗ ಜಾತಿ ಕಾಲಂನಲ್ಲಿ ಕುಂಬಾರ ಎಂದು ನಮೂದಿಸಬೇಕು ಎಂದು ತಾಲೂಕು ಕುಂಬಾರ ಸಂಘದ ಅಧ್ಯಕ್ಷ ಮರಿಶೆಟ್ಟಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷೆಯಲ್ಲಿ ಧರ್ಮ ಕಾಲಂನಲ್ಲಿ ಹಿಂದೂ ಹಾಗೂ ಜಾತಿ ಕಾಲಂನಲ್ಲಿ ಸಮಾಜದ ಉಪ ಜಾತಿಗಳನ್ನು ನಮೂದಿಸದೆ ಕುಂಬಾರ ಎಂದು ನಮೂದಿಸಬೇಕು. ನಮ್ಮ ಕುಂಬಾರ ಸಮಾಜ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದೆ. ಶಿಕ್ಷಣ ಹಾಗೂ ಉದ್ಯೋಗದ ಮೀಸಲಾತಿ ಪಡೆಯಲು ರಾಜ್ಯದಲ್ಲಿರುವ ನಮ್ಮ ಜನಸಂಖ್ಯೆ, ನಮ್ಮ ಸಾಮಾಜಿಕ ಪರಿಸ್ಥಿತಿ ಗಣನೆಗೆ ಬರುತ್ತದೆ. ತಾಲೂಕಿನ 32 ಹಳ್ಳಿಗಳಲ್ಲಿ 12 ಸಾವಿರ ಜನಸಂಖ್ಯೆ ಹೊಂದಿರುವ ಕುಂಬಾರ ಸಮಾಜ ತಮ್ಮ ಜವಾಬ್ದಾರಿ ಅರಿತು ಸಮೀಕ್ಷೆಯಲ್ಲಿ ತಪ್ಪದೆ ಭಾಗವಹಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಪ್ರಕಾಶ್, ಮುಖಂಡರಾದ ಪ್ರಕಾಶ್, ಶಿವಣ್ಣ ಎಸ್.ಕುಮಾರ್, ಮಸಣಶೆಟ್ಟಿ, ವೆಂಕಟೇಶ್, ಟಿ.ರಂಗಸ್ವಾಮಿ ಉಪಸ್ಥಿತರಿದ್ದರು.

ಮುಂದಿನ ಪೀಳಿಗೆಗೆ ಅರಸರ ಚಿಂತನೆ ತಲುಪಿಸಬೇಕಿದೆ

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್



ಕಾರ್ಯಕ್ರಮವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಹುಣಸೂರು, ಸೆ.25– ಸಾಮಾಜಿಕ ನ್ಯಾಯದ ಹರಿಕಾರ ದಿ.ಡಿ.ದೇವರಾಜ ಅರಸು ಅವರ ಚಿಂತನೆಗಳನ್ನು ಮುಂದಿನ ತಲೆಮಾರಿಗೂ ತಲುಪಿಸುವ ಸಾಮುದಾಯಿಕ ಹೊಣೆಗಾರಿಕೆ ಪ್ರತಿಯೊಬ್ಬರೂ ಮೆರೆಯಬೇಕಿದೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ಪಟ್ಟಣದ ರೋಟರಿ ಭವನದಲ್ಲಿ ಸಮಾನ ಮನಸ್ಕ ಸಂಘಟನೆಗಳು ಹಾಗೂ ರೋಟರಿ ಸಂಸ್ಥೆ ಸಹಯೋಗ ದೊಂದಿಗೆ ನಡೆದ ನಮ್ಮ ಅರಸು 110ರ ನೆನಪಿನಲ್ಲಿ ಒಂದು ಪ್ರೀತಿಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾಜಿ ಮುಖ್ಯ ಮಂತ್ರಿ ಡಿ.ದೇವರಾಜ ಅರಸು ಅವರು ದಲಿತ, ಹಿಂದುಳಿದ ವರ್ಗಗಳಿಗೆ ರಾಜಕೀಯ ಶಕ್ತಿ ತುಂಬಿದರು. ಅಲ್ಲದೇ ಅಲಕ್ಷಿತ ಸಮುದಾಯಗಳಿಗೆ ಶಿಕ್ಷಣ, ಉದ್ಯೋಗದಲ್ಲಿ ವಿಫುಲ ಅವಕಾಶ ನೀಡಿದರು. ಭೂ ಸುಧಾರಣೆ, ಜೀತ ಪದ್ಧತಿ, ಮಲ ಹೊರುವ ಪದ್ಧತಿ ನಿಷೇಧಿಸುವ ಮೂಲಕ ಕ್ರಾಂತಿ ಮಾಡಿದ ಅರಸರನ್ನು ಸ್ಮರಿಸಬೇಕು ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಪ್ರತಿಯೊಬ್ಬರೂ ಅರಸರು ತೋರಿಸದ ಹಾದಿಯಲ್ಲಿ ನಡೆಯುವ ಮೂಲಕ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಕುರುಬ ಅಭಿವೃದ್ಧಿ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ನಾಯಕ ಅಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್.ಅಣ್ಣಯ್ಯ ನಾಯಕ, ರೋಟರಿ ಅಧ್ಯಕ್ಷ ಕೃಷ್ಣಕುಮಾರ್ ಮಾತನಾಡಿದರು. ರಾಜು ಶಿವರಾಜೇಗೌಡ, ರಾಘು, ಬಿಳಿಕೆರೆ ಬ್ಲಾಕ್ ಮಾಜಿ ಕಾಂಗ್ರೆಸ್ ಅಧ್ಯಕ್ಷ ಬಸವರಾಜು, ಬಗರ್ ಹುಕುಂ ಸಮಿತಿ ಅಧ್ಯಕ್ಷ ಕುಮಾರ್, ಮುಖಂ ಡರಾದ ರಾಜು, ಪ್ರಭಾಕರ್, ಜೆ.ಮಹದೇವ, ದಸಂಸ ಅಧ್ಯಕ್ಷ ಶಿವರಾಜು, ಡೇವಿಡ್ ರತ್ನಪುರಿ ಸೇರಿದಂತೆ ಇನ್ನಿತರರಿದ್ದರು.

ಮೋದಿ ಜನ್ಮದಿನ: ರಕ್ತದಾನ, ಆರೋಗ್ಯ ತಪಾಸಣಾ ಶಿಬಿರ



ಪ್ರಧಾನಿ ಮೋದಿ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಸೆ.25– ಪ್ರಧಾನಿ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ತಾಲೂಕು ಬಿಜೆಪಿ, ಪ್ರಲಕ್ಷ ಆಸ್ಪತ್ರೆ ಹಾಗೂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಜೀವಧಾರ ಸಂಸ್ಥೆ ವತಿಯಿಂದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಭಾರತಾಂಬೆ ಹಾಗೂ ದೀನ ದಯಾಳ್ ಉಪಾಧ್ಯಾಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ, ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಪಕ್ಷದ ವತಿಯಿಂದ ಸೇವಾ ಪಾಕ್ಷಿಕ ಕಾರ್ಯಕ್ರಮ ಹಮ್ಮಿಕೊಂಡು ರಾಷ್ಟ್ರ, ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಬೂತುಗಳ ಮಟ್ಟದಲ್ಲಿ ದೇವಾಲಯ, ಸಮುದಾಯ ಭವನ ಸ್ವಚ್ಛತೆ, ಗಿಡ ನೆಡುವ ಕಾರ್ಯಕ್ರಮ, ರಕ್ತದಾನ, ಆರೋಗ್ಯ ಶಿಬಿರ ನಡೆಸುತ್ತಿದ್ದೇವೆ ಎಂದರು.

ಇದೇ ವೇಳೆ ಡಾ.ಮೋಹನ್ ಮಾತನಾಡಿದರು. ಶಿಬಿರದಲ್ಲಿ ಕಣ್ಣಿನ ತಪಾಸಣೆ, ರಕ್ತ ಪರೀಕ್ಷೆ, ಬಿಪಿ, ಶುಗರ್, ಕಿವಿ, ಮೂಳೆ ಸಾಂದ್ರತೆ ಇತ್ಯಾದಿ ತಪಾಸಣೆ ಮಾಡಲಾಯಿತು. ಶಿಬಿರದಲ್ಲಿ 45 ಮಂದಿ ರಕ್ತದಾನ ಮಾಡಿದರು. 350ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು.

ಈ ವೇಳೆ ಮೈಸೂರು ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಕಿರಣ್, ಜಯರಾಮೇಗೌಡ, ಕೋಟೆ ಸರಗೂರು ತಾಲೂಕು ಅಧ್ಯಕ್ಷರಾದ ಶಂಭೇಗೌಡ, ಕೆ.ಪಿ.ಗುರುಸ್ವಾಮಿ, ಸರಗೂರು ಪಪಂ ಅಧ್ಯಕ್ಷೆ ರಾಧಿಕಾ, ಮುಖಂಡರಾದ ಪುಟ್ಟಯ್ಯ, ಮಹೇಶ್, ವೆಂಕಟಸ್ವಾಮಿ, ಬಸವರಾಜಪ್ಪ, ಶಿವರಾಜಪ್ಪ, ಗಿರೀಶ್, ರಾಜು, ಟಿ.ವೆಂಕಟೇಶ್, ನಂದೀಶ್, ಗುರುಸ್ವಾಮಿ, ಲೋಕೇಶ್, ಸೋಮಾಚಾರ್, ವಿವೇಕ, ಸೋಮೇಶ್, ಪರೀಕ್ಷಿತ ರಾಜೇಅರಸ್, ಕೆಂಡಗಣ್ಣಸ್ವಾಮಿ, ಚಂದ್ರಮೌಳಿ, ಪೃಥ್ವಿ ಕುಮಾರ್, ಸತೀಶ್, ಬಸವರಾಜು, ಅಕ್ರಂ ಪಾಷಾ ಸೇರಿದಂತೆ ಇನ್ನಿತರರಿದ್ದರು.

ಪ.ಪಂಗಡಕ್ಕೆ ಅನ್ಯ ಸಮುದಾಯ ಸೇರಿಸಲಾಗುತ್ತಿದೆ ಎಂದು ಆರೋಪಿಸಿ

ಸರ್ಕಾರದ ವಿರುದ್ಧ ನಾಯಕರ ಸಂಘದಿಂದ ಪ್ರತಿಭಟನೆ



ಕೆ.ಆರ್.ನಗರದಲ್ಲಿ ತಾಲೂಕು ನಾಯಕ ಸಂಘದ ಮುಖಂಡರು ಪ್ರತಿಭಟನೆ ನಡೆಸಿದರು.

ಕೆ.ಆರ್.ನಗರ, ಸೆ.25– ಪ.ಪಂಗಡಕ್ಕೆ ಅನ್ಯ ಸಮುದಾಯವನ್ನು ಸೇರಿಸಲಾಗುತ್ತಿದೆ ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ನಾಯಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ಜಮಾಯಿಸಿದ ನಾಯಕರ ಸಂಘದ ಮುಖಂಡರು ಪ್ರತಿಭಟನೆ ನಡೆಸಿ ಸುರೇಂದ್ರಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಪ್ರತಿಭಟನಾಕಾರರು, ನಾಯಕ ಸಮಾಜವನ್ನು ರಾಜ್ಯ ಸರ್ಕಾರ ಕೇವಲ ತನ್ನ ಓಟ್ ಬ್ಯಾಂಕ್‌ಗಾಗಿ ಮಾತ್ರ ಬಳಸಿಕೊಳ್ಳುತ್ತಿದ್ದು, ಅಧಿಕಾರಕ್ಕೆ ಬಂದ ನಂತರ ನಾಯಕ ಸಮಾಜದವರನ್ನೇ ದಮನ ಮಾಡಲು ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವರಾಗಿದ್ದ ಕೆ.ಎನ್.ರಾಜಣ್ಣ, ನಾಗೇಂದ್ರ ಅವರ ತಲೆದಂಡ ಮಾಡಿರುವ ರಾಜ್ಯ ಸರ್ಕಾರ ಜಾತಿ ವಿರೋಧಿ ಹಾಗೂ ಅಂಬೇಡ್ಕರ್ ಕೊಟ್ಟ ಮೀಸಲಾತಿ ಕಸಿಯುತ್ತಿರುವ ಸರ್ಕಾರವಾಗಿದೆ. 184 ಕೋಟಿ ವಾಲ್ಮೀಕಿ ನಿಗಮದ ಹಣ ತಿಂದು ತೇಗಿದ ರಾಜ್ಯ ಸರ್ಕಾರ ಅನಗತ್ಯವಾಗಿ ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆಯಿತು. ಈ ಸರ್ಕಾರದಲ್ಲಿ ನಾಯಕ ಸಮುದಾಯದ ಸಚಿವರಿಗೆ ಮನ್ನಣೆ ಕೊಡುತ್ತಿಲ್ಲ. ಸರ್ಕಾರದ ಧೋರಣೆ ಬಗ್ಗೆ ಸಮುದಾಯದ ಯಾವೊಬ್ಬ ಶಾಸಕರು ದನಿ ಎತ್ತುತ್ತಿಲ್ಲ ಎಂದು ಆರೋಪಿಸಿದರು.

ಶೇ.7ರಷ್ಟು ಮೀಸಲಾತಿ ನೀಡುತ್ತೇವೆ ಎಂದು ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರ ಇದುವರೆಗೂ ಮೀಸಲಾತಿ ನೀಡಿಲ್ಲ. ಇದರಿಂದ ಸಮುದಾಯ ಶೇ.3ರಷ್ಟು ಮೀಸಲಾತಿಯಲ್ಲೇ ಮುಂದುವರೆಯುತ್ತಿದೆ. ಮೀಸಲಾತಿ ನೀಡಲು ಪ್ರಕರಣ ಕೋರ್ಟ್‌ನಲ್ಲಿದೆ ಎನ್ನುತ್ತಿರುವ ಸರ್ಕಾರ ಇದೀಗ ಅನ್ಯ ಸಮುದಾಯವನ್ನು ಪ.ಪಂಗಡಕ್ಕೆ ಸೇರಿಸಲು ಹುನ್ನಾರ ನಡೆಸುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರಕ್ಕೆ ನಾಯಕ ಸಮುದಾಯ ತಕ್ಕ ಪಾಠ ಕಲಿಸಲಿದೆ ಎಂದರು.

ಈ ಮೇಲಿನ ಪ್ರಮಾದಗಳನ್ನು ಸರಿಪಡಿಸಿಕೊಂಡು ಪ.ಪಂಗಡಕ್ಕೆ ನ್ಯಾಯ ದೊರಕಿಸಿಕೊಡಬೇಕು. ಅಲ್ಲದೇ ನಮ್ಮ 13 ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೆ.ಆರ್.ನಗರ ತಾಲೂಕು ಅಧ್ಯಕ್ಷ ಸುಬ್ಬಕೃಷ್ಣ, ಸಾಲಿಗ್ರಾಮ ತಾಲೂಕು ಅಧ್ಯಕ್ಷ ಸಿ.ಸಿ.ಮಹದೇವ್, ಉಪಾಧ್ಯಕ್ಷರಾದ ಮಹದೇವನಾಯಕ, ಸುರೇಶ್, ವೆಂಕಟೇಶ ನಾಯಕ, ಕಾರ್ಯದರ್ಶಿ ಗಣೇಶ್, ಖಜಾಂಚಿ ನಾಗರಾಜ್, ಸಹ ಕಾರ್ಯದರ್ಶಿ ಭೈರನಾಯಕ, ಸಂಘಟನಾ ಕಾರ್ಯದರ್ಶಿ ದೇವರಾಜ್, ರಾಮನಾಯಕ, ಶಂಕರ್, ಬೆಟ್ಟನಾಯಕ, ಮಂಜುನಾಥ್, ಚಂದ್ರನಾಯಕ, ಕುಚೇಲ, ಚಿಕ್ಕರಾಮನಾಯಕ, ಚೆಲುವನಾಯಕ, ಕೃಷ್ಣನಾಯಕ, ಶಾಂತಕುಮಾರ್, ದಿನೇಶ್, ಉದೇಶನಾಯಕ, ಡಿಸಿಬಿ ಪವನ್, ಶಂಕರ್, ಶಿವು, ಶಿವು, ಮಂಜುನಾಯಕ, ಈರಣ್ಣ, ರಾಜನಾಯಕ, ಯ.ಶಿವಣ್ಣ, ರಾಜನಾಯಕ, ರುದ್ರನಾಯಕ, ಕುಮಾರನಾಯಕ, ಕೃಷ್ಣ, ಕುಮಾರ್, ಲೋಕೇಶ್ ಸೇರಿದಂತೆ ಇತರರಿದ್ದರು.

ರಾಷ್ಟ್ರೀಯ ಸೇವಾ ಯೋಜನೆ ಸಂಸ್ಥಾಪನ ದಿನ



ಸಾಲಿಗ್ರಾಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ರಾಷ್ಟ್ರೀಯ ಸೇವಾ ಯೋಜನೆ ಸಂಸ್ಥಾಪನ ದಿನ ಆಚರಿಸಲಾಯಿತು. ಈ ವೇಳೆ ನಿವೃತ್ತ ಸಹ ಪ್ರಾಧ್ಯಾಪಕ ಡಾ.ಕೆ.ಕಾಳ ಚನ್ನೇಗೌಡ, ಪ್ರಾಂಶುಪಾಲ ಡಾ.ಗೋವಿಂದೇಗೌಡ, ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ.ಎಸ್.ಸುವರ್ಣ, ಮಧು, ಐಕ್ಯೂಎಸಿ ಸಂಚಾಲಕ ಸುರೇಶ್ ಛಲವಾದಿ, ಪ್ರಾಧ್ಯಾಪಕರಾದ ಡಾ.ರಾಜೇಶ, ರಾಜಶೇಖರ್, ಕುಮಾರ್, ಶ್ರೀನಿವಾಸ್, ಮಂಜುನಾಥ್, ಡಾ.ಪ್ರತಿಮಾ, ಡಾ.ಸುಮನ, ಡಾ.ತಾಸಿನ್ ಉಪಸ್ಥಿತರಿದ್ದರು.

ಹೊಸೂರು ಡೇರಿಗೆ 7.82 ಲಕ್ಷ ರೂ. ಲಾಭ



ಹೆಚ್ಚು ಹಾಲು ಸರಬರಾಜು ಮಾಡಿದ ರೈತರಿಗೆ ಬಹುಮಾನ ವಿತರಿಸಲಾಯಿತು.

ಚುಂಚನಕಟ್ಟೆ, ಸೆ.25– ಪ್ರಸಕ್ತ ಸಾಲಿನಲ್ಲಿ ಹೊಸೂರು ಹಾಲು ಉತ್ಪಾದಕರ ಸಹಕಾರ ಸಂಘ 7.82 ಲಕ್ಷ ರೂ. ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಯದುಕುಮಾರ್ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘ ಗುಣಮಟ್ಟದ ಹಾಲು ಶೇಖರಣೆ, ಸಮಯಕ್ಕೆ ಸರಿಯಾಗಿ ರೈತರಿಗೆ ಹಣ ವಿತರಣೆಯಲ್ಲಿ ಮುಂದಿದೆ. ಸಂಘದಿಂದ 2.44 ಕೋಟಿ ವಹಿವಾಟು ನಡೆಸಲಾಗಿದ್ದು, ರೈತರಿಗೆ 3.03 ಲಕ್ಷ ರೂ. ಬೋನಸ್ ವಿತರಿಸಲಾಗುವುದು ಎಂದರು.

ಸಂಘದ ಹಿಂದಿನ ಕಾರ್ಯದರ್ಶಿಯಿಂದ ಹಣ ದುರುಪಯೋಗ ಮತ್ತು ಅಕ್ರಮದ ವಿರುದ್ಧ ದಾವೆ ಹೂಡಿದ್ದು, ವಸೂಲಿ ಮಾಡುವ ಹಾಗೂ ಖಾಯಂ ಕಾರ್ಯದರ್ಶಿ ನೇಮಕದ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ನಾಲ್ವರು ರೈತರು ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹು ಮಾನ ವಿತರಿಸಲಾಯಿತು.

ಸಂಘದ ಉಪಾಧ್ಯಕ್ಷ ಪ್ರಸನ್ನ, ನಿರ್ದೇಶಕರಾದ ಪರಶುರಾಮಸ್ವಾಮಿ, ಬುದ್ಧಿಸಾಗರ್, ರಮೇಶ, ರಂಗೇಗೌಡ, ನಾಗರಾಜು, ಪೂರ್ಣಿಮಾ, ಲಲಿತಾ, ಭಾರತಿ, ಮೈಮುಲ್ ಮೇಲ್ವಿಚಾರಕ ನಾಗರಾಜು, ಸಿಇಓ ಶಿವಶಂಕರ, ಪರೀಕ್ಷಕ ಡೈರಿ ಮಹದೇವ, ಸಂಘದ ಮಾಜಿ ಕಾರ್ಯದರ್ಶಿ ಮರೀಗೌಡ, ಮುಖಂ ಡರಾದ ರಮೇಶ್, ಶ್ರೀನಿವಾಸ್, ವಕೀಲ ಪಣಿತ, ಸುದರ್ಶನ್, ಶಿವು ಸೇರಿದಂತೆ ಮತ್ತಿತರರಿದ್ದರು.

ಸಾಲ ವಸೂಲಿಯಲ್ಲಿ ಪ್ರಥಮ: ಸನ್ಮಾನ



ಸಾಲ ವಸೂಲಿಯಲ್ಲಿ ತಿ.ನರಸೀಪುರ ಪೀಕಾರ್ಡ್ ಬ್ಯಾಂಕ್ ಪ್ರಥಮ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ನಿರ್ದೇಶಕ ಜಿ.ಲಿಂಗಪ್ಪಾಜಿ, ವ್ಯವಸ್ಥಾಪಕ ಮಹೇಶ್, ದ್ವಿತೀಯ ಸ್ಥಾನ ಪಡೆದ ನಂಜನಗೂಡು ಪೀಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೆಚ್.ಕೆ.ಚನ್ನಪ್ಪ, ವ್ಯವಸ್ಥಾಪಕಿ ಪಿ.ಮಮತಾ ಹಾಗೂ ತೃತೀಯ ಸ್ಥಾನ ಪಡೆದ ಮೈಸೂರು ತಾಲೂಕು ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಕುಮಾರ್, ವ್ಯವಸ್ಥಾಪಕ ಸುರೇಶ್ ಅವರನ್ನು ಸನ್ಮಾನಿಸಲಾಯಿತು.

ಯುವಕರ ಮೇಲೆ ಹಲ್ಲೆ ನಡೆಸಿ, ಸುಳ್ಳು ಪ್ರಕರಣ ದಾಖಲು

ಪೊಲೀಸರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ದಸಂಸ ಪ್ರತಿಭಟನೆ



ಪೊಲೀಸರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದಸಂಸ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ, ಸೆ.25– ಯುವಕರ ಮೇಲೆ ಪೊಲೀಸ್ ಠಾಣೆಯಲ್ಲಿ ಮಾರಣಾಂತಿಕ ಹಲ್ಲೆ ನಡೆಸಿ, ಸುಳ್ಳು ಪ್ರಕರಣ ದಾಖಲಿಸಿರುವ ಪೊಲೀಸರ ವಿರುದ್ಧ ಕಾನೂನು ಕ್ರಮ ಹಾಗೂ ಇನ್ಸ್‌ಪೆಕ್ಟರ್ ಧನಂಜಯ ಅವರ ಸೇವಾ ಅವಧಿಯ ಪ್ರಕರಣಗಳ ಸಮಗ್ರ ತನಿಖೆಗೆ ಆಗ್ರಹಿಸಿ ಪಟ್ಟಣದಲ್ಲಿ ದಲಿತ ಸಂಘರ್ಷ ಸಮಿತಿ ಮುಖಂಡರು ಹಾಗೂ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಎದುರು ಗುರುವಾರ ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ದಸಂಸ ಕಾರ್ಯಕರ್ತರು, ತಾಲೂಕಿನ ತುಂಬಲದಲ್ಲಿ ಯಾವುದೇ ಗಲಭೆ ನಡೆಯದಿದ್ದರೂ, ತುಂಬಲ ಮತ್ತು ಮಳವಳ್ಳಿ ತಾಲೂಕಿನ ಕಲ್ಕುಣಿ ಗ್ರಾಮದ 10 ಯುವಕರನ್ನು ಠಾಣೆಗೆ ಕರೆಸಿಕೊಂಡು ಹಲ್ಲೆ ನಡೆಸಿ ಸುಳ್ಳು ಸುಮೋಟೋ ಪ್ರಕರಣ ದಾಖಲಿಸಿರುವ ಇನ್ಸ್‌ಪೆಕ್ಟರ್ ಧನಂಜಯ ಹಾಗೂ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಮತ್ತು ಸಿಬ್ಬಂದಿ ದೌರ್ಜನ್ಯದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೇ ಪ್ರಕರಣ ಸಂಬಂಧ ದೂರು ನೀಡಿ 20 ದಿನ ಕಳೆದರೂ ಕ್ರಮ ಕೈಗೊಳ್ಳದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಯುವಕರಿಗೆ ನ್ಯಾಯ ಒದಗಿಸದ ಸಿಎಂ, ಉಸ್ತುವಾರಿ ಸಚಿವ ಹಾಗೂ ಉಭಯ ನಾಯಕರ ಪುತ್ರರ ವಿರುದ್ಧ ಧಿಕ್ಕಾರ ಮೊಳಗಿದವು. ಚಳುವಳಿ ಕ್ರಾಂತಿ ಗೀತೆ ಹಾಗೂ ಕಿವಿ ಗಚ್ಚಿಡುವಂತೆ ಬಾರಿಸುತ್ತಿದ್ದ ತಮಟೆ, ನಗಾರಿಗಳ ಬೋರ್ಗರೆತವೂ ಕೂಡ ಪ್ರತಿಭಟನೆಗೆ ಕಳೆ ತಂದವು.

ದಸಂಸ ಹಿರಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಮಾತನಾಡಿ, ಯುವಕರ ಮೇಲೆ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವ ಬದಲು ಪೊಲೀಸರು ಹಲ್ಲೆ ನಡೆಸಿರುವುದು ಅಕ್ಷಮ್ಯ ಅಪರಾಧ. ಸಂತ್ರಸ್ತ ಯುವಕರಿಗೆ ನ್ಯಾಯದ ಭರವಸೆ ತುಂಬಲು ಹೋರಾಟ ಮಾಡುತ್ತಿದ್ದೇವೆ. ಆದರೆ ಕೆಲವರು ಪೊಲೀಸರ ದೌರ್ಜನ್ಯ ಸಮರ್ಥಿಸಿಕೊಂಡಿರುವುದು ವಿಪರ್ಯಾಸ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದ ಎಸ್ಪಿ, ಡಿವೈಎಸ್ಪಿ ಅವರ ಬೇಜವಾಬ್ದಾರಿ ಸರಿಯಲ್ಲ. ದೌರ್ಜನ್ಯ ಕಂಡು ಕಾಣದಂತಿರುವ ಸರ್ಕಾರದ ಜನಪ್ರತಿನಿಧಿಗಳಿಗೆ ಶೋಭೆ ತರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಯುವಕರ ಮೇಲಿನ ದೌರ್ಜನ್ಯ ಪ್ರಶ್ನಿಸಿದ ದಲಿತ ಸಂಘಟನೆ ಮೇಲೆ ಸಮುದಾಯದ ಜನರನ್ನು ಎತ್ತಿ ಕಟ್ಟುವ ಕೆಲಸಕ್ಕೆ ಕೈ ಹಾಕಿರುವ ಧನಂಜಯ ಅವರ ವಿರುದ್ಧ ಕಾನೂನು ಕ್ರಮವಾಗುವವರೆಗೂ 3 ಜಿಲ್ಲೆಯಾದ್ಯಂತ ಹೋರಾಟ ನಡೆಯಲಿವೆ. ಸರ್ಕಾರ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸದಿದ್ದಲ್ಲಿ ಹೋರಾಟ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್‌ಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು. ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ಶಿವಣ್ಣ, ತಾಲೂಕು ಸಂಚಾಲಕ ರಾಜು, ದಸಂಸ ಮುಖಂಡರಾದ ನಾರಾಯಣ, ಸೋಮಣ್ಣ, ರಾಜಣ್ಣ, ರಾಮಕೃಷ್ಣ, ಕುಮಾರ್, ಜಾನಿ ದೊರೆಸ್ವಾಮಿ, ಕುಬೇರಪ್ಪ, ಆರ್.ಮಣಿಕಂಠ ರಾಜ್‌ಗೌಡ, ಮಹೇಶ್, ಮಂಜು, ಗಟ್ಟವಾಡಿ ಮಹೇಶ್, ದೇವರಸನಹಳ್ಳಿ ಬಸವರಾಜು, ಶಿವಕುಮಾರ್, ಶಾಂತಕುಮಾರ್, ಶಿವಶಂಕರ್, ಮುತ್ತು, ದೊಡ್ಡ ಸ್ವಾಮಿ, ರಾಜಣ್ಣ ಮಹದೇವಯ್ಯ, ಚಂದ್ರು ತಲಕಾಡು ಆನಂದ್, ಚರಣ್, ನಂಜುಂಡಸ್ವಾಮಿ, ರಂಗಸ್ವಾಮಿ, ಸಿದ್ದರಾಜು, ಸಣ್ಣ ಕುಮಾರ್, ಅನುಷ ಇತರರಿದ್ದರು.

ಜಯಪುರ ದೊಡ್ಡ ಪ್ರಮಾಣದ ಪಿಎಸಿಎಸ್ ಸಭೆ



ಜಯುಪುರದಲ್ಲಿ ದೊಡ್ಡ ಪ್ರಮಾಣದ ಪಿಎಸಿಎಸ್ ಸಭೆ ನಡೆಯಿತು.

ಮೈಸೂರು, ಸೆ.25– ತಾಲೂಕಿನ ಜಯಪುರ ದೊಡ್ಡ ಪ್ರಮಾಣದ ಕೃಷಿ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಗ್ರಾಮದ ದೇವಮ್ಮ ಪಟೇಲ್ ಚಿಕ್ಕಅಂಕೇಗೌಡ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಸಿಇಓ ಶಂಭುಲಿಂಗೇಗೌಡ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ 2,01,520 ರೂ. ಲಾಭ ಬಂದಿದೆ ಎಂದರು. ಈ ವೇಳೆ ಉಪಾಧ್ಯಕ್ಷ ಕೆಂಪರಾಜು, ನಿರ್ದೇಶಕರಾದ ಬಸವಣ್ಣ, ಮಾವಿನಹಳ್ಳಿ ಎಸ್.ಸಿದ್ದೇಗೌಡ, ಅಬ್ದುಲ್ ಮುತಾಲೀಫ್, ಅಭಿಷೇಕ್, ಎಸ್.ಸಂದೀಪ್, ಮಹದೇವಯ್ಯ, ಎಂ.ಮಂಜುನಾಥ್, ಎಂ.ರಂಗಸ್ವಾಮಿ, ಭಾಗ್ಯಮ್ಮ, ರತ್ನಮ್ಮ, ಎಂಸಿಡಿಸಿಸಿ ಬ್ಯಾಂಕ್ ಪ್ರತಿನಿಧಿ ವಿ.ಕೃಷ್ಣ, ಸಿಬ್ಬಂದಿಗಳಾದ ಎಂ.ಜವರೇಗೌಡ ಮತ್ತು ಅಮೃತ ಹಾಗೂ ಸಂಘದ ಸದಸ್ಯರು ಇದ್ದರು.

ಬಿ.ಆರ್.ಗೋವಿಂದೇಗೌಡ ನಿಧನ



ಚುಂಚನಕಟ್ಟೆ, ಸೆ.25– ಸಾಲಿಗ್ರಾಮ ತಾಲೂಕಿನ ಚಿಬುಕಹಳ್ಳಿ ಪಿಎಸಿಎಸ್ ಮಾಜಿ ಅಧ್ಯಕ್ಷ ಬಿ.ಆರ್.ಗೋವಿಂದೇಗೌಡ (78) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ ಜಯಮ್ಮ, ಪುತ್ರ ಸಾಲಿಗ್ರಾಮ ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಬಿ.ಜಿ.ಪ್ರಸನ್ನ ಕುಮಾರ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನ (ಸೆಪ್ಟೆಂಬರ್ 26) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು



ಅರಮನೆ ವೇದಿಕೆ

ಮ. 3.30 : ಸತೀಶ್ ಜಿ.ಆರ್. ಮತ್ತು ತಂಡ, ಮೈಸೂರು ಅವರಿಂದ ನಾದಸ್ವರ
ಸಂ. 4.00 : ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ವತಿಯಿಂದ ರಂಗಗೀತೆಗಳ ಗಾನವೈಭವ
ಸಂ. 5.30 : ಕಾವಾಡಿಗರು ಹಾಗೂ ಮಾವುತರ ಮಕ್ಕಳಿಂದ ನೃತ್ಯ ಪ್ರದರ್ಶನ ನೃತ್ಯ ನವ್ವಾಲೆ
ಸಂ. 6.00 : ಡಾ. ಎಂ. ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡದಿಂದ ಜಾನಪದ ಗೀತೆ
ಸಂ. 6.30 : ಕರ್ನಾಟಕ್ ಮತ್ತು ಆಂಗ್ಲ ವಾದ್ಯ ಸಂಗೀತ ಪೊಲೀಸ್ ಬ್ಯಾಂಡ್
ರಾ. 9.00 : ನಾಗೇಶ್ ಕಂದೇಗಾಲ ಮತ್ತು ತಂಡದಿಂದ ಭಾವ ಸಂಗಮ ಗೀತಗಾಯನ

ಕಿರು ರಂಗಮಂದಿರ ವೇದಿಕೆ

ಮ. 2.00 : ಸಾಯಿ ಇಂಟರ್‌ನ್ಯಾಷನಲ್ ಸಂಸ್ಥೆ, ಬೆಂಗಳೂರು – ದಿವ್ಯಶ್ರೀ ಅವರಿಂದ ಭರತನಾಟ್ಯ ನೃತ್ಯ ಪ್ರದರ್ಶನ
ಮ. 3.00 : ವಿಶ್ವಪಥ ಚಾರಿಟೆಬಲ್ ಟ್ರಸ್ಟ್, ಹಾಸನ ಅವರಿಂದ ನಾಟಕ : ಪೊಲೀಸರಿದ್ದಾರೆ ಎಚ್ಚರಿಕೆ
ರಾ. 7.00 : ಕಟ್‌ಪುತ್ಲಿಯಾ ಥಿಯೇಟರ್ ಗ್ರೂಪ್, ಬೆಂಗಳೂರು ಅವರಿಂದ ನಾಟಕ : ಜಿಕ್ರ್–ಎ–ಗಾಲಿಬ್

ಪುರಭವನ ವೇದಿಕೆ

ಬೆ. 9.15 : ರೂಪಶ್ರೀ ಕಲಾ ಸಂಘ, ಮೈಸೂರು ಎಚ್.ರೂಪ ಮತ್ತು ತಂಡದಿಂದ ರಂಗಗೀತೆಗಳು
ಬೆ. 10.30 : ಶ್ರೀ ಸಂಜಯ ಅಶೋಕ ಅಂಬಲೆ ಮತ್ತು ತಂಡ, ಬಾಗಲಕೋಟೆ ಅವರಿಂದ ಪೌರಾಣಿಕ ನಾಟಕ : ಸಹೋದರ
ಮ. 3.00 : ಅರ್ಧನಾರೀಶ್ವರ ಕಲಾಭಿವೃದ್ಧಿ ಟ್ರಸ್ಟ್, ರಾಮನಗರ, ಜಿ.ಎನ್. ನಾಗರಾಜು ಅವರಿಂದ ನಾಟಕ : ಕುರುಕ್ಷೇತ್ರ
ಸಂ. 6.00 : ಮೈಸೂರು ಜಿಲ್ಲಾ ಕನ್ನಡ ರಂಗಭೂಮಿ ವೃತ್ತಿ ಕಲಾವಿದೆಯರ ಸಂಘ ಎನ್. ಲೀಲಾವತಿ ಅವರಿಂದ ಪೌರಾಣಿಕ ನಾಟಕ : ಕುರುಕ್ಷೇತ್ರ

ಚಿಕ್ಕಗಡಿಯಾರ ವೇದಿಕೆ

ಸಂ. 5.00 : ಅಖಿಲೇಶ್ ಕೆ.ಎಚ್. ಮತ್ತು ತಂಡ, ಮಂಡ್ಯ ಅವರಿಂದ ಸೋಮನ ಕುಣಿತ
ಸಂ. 5.30 : ರಂಜಿತ ನಡುವಿನ ಮನಿ ಮತ್ತು ತಂಡದಿಂದ ತತ್ವಪದ
ಸಂ. 6.30 : ಹಣಮಂತ ಬರಗಾಲ ಮತ್ತು ತಂಡ, ಬಾಗಲಕೋಟೆ ಅವರಿಂದ ಕಣಿ ವಾದನ
ರಾ. 7.30 : ಲೀಲಾವತಿ ಚಂದ್ರಕಾಂತ ಮತ್ತು ತಂಡ, ಕಲಬುರಗಿ ಅವರಿಂದ ಜಾನಪದ ಗಾಯನ
ರಾ. 8.30 : ಪ್ರಕಾಶ್ ಮತ್ತು ತಂಡ, ಮೈಸೂರು ಅವರಿಂದ ಕ್ರಾಂತಿಗೀತೆಗಳು

ನಾದಬ್ರಹ್ಮ ಸಂಗೀತಸಭಾ ವೇದಿಕೆ

ಸಂ. 4.15 : ಲಿಂಗರಾಜು ಮತ್ತು ತಂಡ, ಮಂಡ್ಯ ಅವರಿಂದ ವೀರಗಾಸೆ
ಸಂ. 4.45 : ಚೆಲುವಸ್ವಾಮಿ ಮತ್ತು ತಂಡ, ಮೈಸೂರು ಅವರಿಂದ ಜನಪದ ಗೀತೆ
ಸಂ. 5.30 : ಸ್ನೇಹ ಕಲಾವಿದರು, ಬೆಂಗಳೂರು ಅವರಿಂದ ಭರತನಾಟ್ಯ
ಸಂ. 6.30 : ಸಿಂಚನ ಕಲಾಬಳಗ, ದಾವಣಗೆರೆ ಕಮಲಮ್ಮ ಮತ್ತು ತಂಡದಿಂದ ಸುಗಮ ಸಂಗೀತ
ರಾ. 7.30 : ರಾಜೇಂದ್ರ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆ
ರಾ. 8.30 : ಶ್ರೀನಿವಾಸ ಶಾಸ್ತಾನ ಮತ್ತು ತಂಡದಿಂದ ಯಕ್ಷಗಾನ

ಗಾನಭಾರತಿ ವೇದಿಕೆ

ಸಂ. 4.00 : ಸಂದೀಪ್ ಮತ್ತು ತಂಡದಿಂದ ಸುಗ್ಗಿ ಕುಣಿತ
ಸಂ. 4.30 : ಸ್ನೇಹ ಸ್ವರಾಲಯ–ಸ್ನೇಹಲತಾ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ಸಂ. 5.30 : ಸ್ವರ್ಣಲತಾ ಶಾಸ್ತ್ರಿ ಮತ್ತು ತಂಡದಿಂದ ಭರತನಾಟ್ಯ
ಸಂ. 6.30 : ಕೆ.ಪಿ. ರೇವತಿ ಮತ್ತು ತಂಡ–ಸ್ವರತರಂಗ ಅವರಿಂದ ಭಕ್ತಿಗೀತೆ
ರಾ. 7.30 : ಸಹನಾ ಹೆಗ್ಡೆ ಮತ್ತು ಐಶ್ವರ್ಯ ಮಣಿಕರ್ಣಿಕೆ, ಬೆಂಗಳೂರು ಅವರಿಂದ ಸ್ವರ ಸಂವಾದ–ಮೈಸೂರು ದರ್ಬಾರ್
ರಾ. 8.30 : ಅನ್ನಪೂರ್ಣ ಚಳಗೇರಿ, ಇಳಕಲ್ ಅವರಿಂದ ಸುಗಮ ಸಂಗೀತ

ರಮಾಗೋವಿಂದ ವೇದಿಕೆ

ಸಂ. 5.00 : ಎಚ್.ಡಿ. ಶಂಕರ್ ಮತ್ತು ತಂಡ, ಮಂಡ್ಯ ಅವರಿಂದ ಜನಪದ ಗೀತೆ
ಸಂ. 5.30 : ವಿದುಷಿ ಜಿ.ವಿ. ಸುಬ್ಬಲಕ್ಷ್ಮಿ ಮತ್ತು ತಂಡ, ಮೈಸೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ಸಂ. 6.30 : ಶ್ರೀ ವೀರಾಂಜನೇಯ ಕಲಾ ಮಂಡಳಿ, ರಂಜಿತಾ ಶಿವನಿ ಅವರಿಂದ ತತ್ವಪದ ಗಾಯನ
ರಾ. 7.30 : ಪೋಪೆಟ್ ಹೌಸ್, ಧಾರವಾಡ ಅವರಿಂದ ನಾಟಕ : ಕಲ್ಲು ಬೆಳೆಯುವ ಕಥೆ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 5.00 : ಶ್ರೀ ನೀಲಕಂಠೇಶ್ವರ ಮಹಿಳಾ ಡೊಳ್ಳು ಕುಣಿತ, ಪಿ.ಟಿ. ಸುಮಿತ್ರ ಮತ್ತು ತಂಡ, ಶಿವಮೊಗ್ಗ ಅವರಿಂದ ಮಹಿಳಾ ಡೊಳ್ಳು
ಸಂ. 5.30 : ಹಣಮಂತ್ ಸೈದಪ್ಪ ಮತ್ತು ತಂಡ ಅವರಿಂದ ವಚನ ಗಾಯನ
ಸಂ. 6.30 : ಅಕ್ಷತಾ ಮತ್ತು ತಂಡ, ರುದ್ರಪಟ್ಟಣ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ರಾ. 7.30 : ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್, ಟಿ.ಎಸ್. ಶ್ರೀಲಕ್ಷ್ಮಿ ಮತ್ತು ತಂಡ, ಮೈಸೂರು ಅವರಿಂದ ನೃತ್ಯರೂಪಕ
ರಾ. 8.30 : ಕುಮಾರ್ ಕಟ್ಟೆಬಳಗುಲಿ ಮತ್ತು ತಂಡ, ಹಾಸನ ಅವರಿಂದ ಜನಪದ ಗಾಯನ

ಜಗನ್ಮೋಹನ ಅರಮನೆ ವೇದಿಕೆ

ಸಂ. 5.00 : ಶೇಖಪ್ಪ ಹುಬ್ಬಣ್ಣನವರ ಮತ್ತು ತಂಡ ಅವರಿಂದ ಲಾವಣಿ ಪದ
ಸಂ. 5.30 : ವಿದುಷಿ ಮಂದಸ್ಮಿತಾ ಕೆ.ಸಿ. ಭಟ್ ಮತ್ತು ತಂಡದಿಂದ ಭರತನಾಟ್ಯ
ಸಂ. 6.30 : ಟಿ.ಎಂ. ಶಂಕರ್ ಮತ್ತು ತಂಡ, ಮೈಸೂರು ಅವರಿಂದ ವೀಣಾವಾದನ
ರಾ. 7.30 : ಸಹಚೇತನ ನಾಟ್ಯಾಲಯ, ಶಿವಮೊಗ್ಗ, ವಿ. ಸಹನಾ ಚೇತನ್ ಅವರಿಂದ ಭರತನಾಟ್ಯ
ರಾ. 8.30 : ಧನಂಜಯ್ ಮತ್ತು ತಂಡದಿಂದ ರಂಗಗೀತೆ

ಕರ್ನಾಟಕ ಕಲಾಮಂದಿರ ವೇದಿಕೆ

ಸಂ. 4.00 : ಚೇತನ್ ಕೆ.ಎನ್. ಮತ್ತು ತಂಡ, ಆನೇಕಲ್ ಅವರಿಂದ ಬೇಡರ ಕುಣಿತ
ಸಂ. 4.45 : ಚಂಪಕ ಅಕಾಡೆಮಿ, ಮೈಸೂರು ಅವರಿಂದ ಭರತನಾಟ್ಯ
ಸಂ. 5.30 : ಗುರುರಾಜ್ ಹೊಸಕೋಟೆ ಮತ್ತು ತಂಡ, ಬೆಂಗಳೂರು ಅವರಿಂದ ಜನಪದ ಗಾಯನ
ಸಂ. 6.30 : ಅಮೃತಾ ಕುಲಕರ್ಣಿ ಮತ್ತು ತಂಡ, ಹೊಸಪೇಟೆ ಅವರಿಂದ ಭರತನಾಟ್ಯ
ರಾ. 7.30 : ಜಾಯ್ಸ್ ವೈಶಾಖ್ ಮತ್ತು ತಂಡದಿಂದ ಸುಗಮ ಸಂಗೀತ
ರಾ. 8.30 : ಕಲಾರ್ಪಣ ಕಲ್ಚರಲ್ ಅಕಾಡೆಮಿ, ಧಾರವಾಡ, ವಿದುಷಿ ಸವಿತಾ ಹೆಗಡೆ ಅವರಿಂದ ನೃತ್ಯರೂಪಕ : ದಶವಾತಾರ

ಬಿ.ಎಂ. ಶ್ರೀ ಸಭಾಂಗಣ

ಬೆ. 9.30 : ಪ್ರತಿಭಾ ಕವಿಗೋಷ್ಠಿ, ಲೋಕೇಶ್ ಮತ್ತು ತಂಡದಿಂದ ದೇಸಿ ಗೀತಯಾನ
ಬೆ. 10.30 : ಉದ್ಘಾಟನೆ : ಜಾನಪದ ತಜ್ಞ ಪ್ರೊ. ನಂಜಯ್ಯ ಹೊಂಗನೂರು
ಅಧ್ಯಕ್ಷತೆ : ಜಾನಪದ ತಜ್ಞ ಡಿ.ಕೆ. ರಾಜೇಂದ್ರ
ಮುಖ್ಯ ಅತಿಥಿಗಳು : ಜನಪದ ತಜ್ಞ ಡಾ. ಶೈಲಜಾ ಹಿರೇಮಠ

ಅಲ್ಯೂಮ್ನಿ ಅಸೋಸಿಯೇಷನ್ ಸಭಾ ಭವನ, ಜೆ.ಕೆ. ಮೈದಾನ

ಬೆ. 11.00 : ಕೃಷಿ ವಸ್ತುಪ್ರದರ್ಶನ, ಉದ್ಘಾಟನೆ : ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್
ಬೆ. 11.15 : ರೈತರು, ರೈತ ಮಹಿಳೆಯರು, ವಿಜ್ಞಾನಿಗಳು, ಯುವ ರೈತರು ಮತ್ತು ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತರಿಗೆ ಸನ್ಮಾನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ

ಪುರಭವನ

ಬೆ. 7.00 : ಪಾರಂಪರಿಕ ನಡಿಗೆ, ಉದ್ಘಾಟನೆ : ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್

ಕೋಟೆ ಆಂಜನೇಯಸ್ವಾಮಿ ದೇವಸ್ಥಾನ

ಬೆ. 9.30 : ರೈತ ದಸರಾ ಮೆರವಣಿಗೆ, ಉದ್ಘಾಟನೆ : ಕೃಷಿ ಸಚಿವ ಎನ್. ಚಲುವರಾಯಸ್ವಾಮಿ

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ)

ಸಂ. 4.00 : ರಾಷ್ಟ್ರೀಯ ಕರಕುಶಲ ವಸ್ತು ಮತ್ತು ಚಿತ್ರಕಲಾ ಪ್ರದರ್ಶನ ಮತ್ತು ಸ್ಪರ್ಧೆ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ

ಉತ್ತನಹಳ್ಳಿ ಬಳಿ ಯುವ ದಸರಾ



ಸಂ. 6.00 : ಉತ್ತನಹಳ್ಳಿ ರಿಂಗ್ ರಸ್ತೆಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಬಳಿ ಯುವ ದಸರಾ: ದೇವಿಶ್ರೀ ಪ್ರಸಾದ್ (ಡಿಎಸ್‌ಪಿ) ಅವರಿಂದ ಸಂಗೀತ ಸಂಜೆ

ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ

ತೊಗಲುಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ, ಮ. 3 ರಿಂದ 6.30 ರವರೆಗೆ ಶ್ರೀ ಅಮ್ಮರಾಮಚಂದ್ರ ಮತ್ತು ತಂಡದಿಂದ ಸುಗಮ ಸಂಗೀತ, ಮೈಸೂರು ವಿವಿ ಲಲಿತ ಕಲಾ ಕಾಲೇಜು ವಿದ್ಯಾರ್ಥಿಗಳಿಂದ ಕೋಲಾಟ ಮತ್ತು ಕಂಸಾಳೆ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ಅವರಿಂದ ಜಾನಪದ ನೃತ್ಯ, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ.

ಕರ್ನಾಟಕ ಕಲಾಮಂದಿರ

ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ.

ರಂಗಾಯಣ

ರಂಗ ಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ಎಂಎಂಕೆ–ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಬೀಚಿ ಬರಹಗಳನ್ನಾಧರಿಸಿದ ಶ್ರೀ ತಿಮ್ಮಾರ್ಪಣಮಸ್ತು ನಾಟಕ ಪ್ರದರ್ಶನ, ನಿರ್ದೇಶನ : ರಮೇಶ್ ಕೆ. ಬೆಣಕಲ್.

ವನರಂಗ

ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ ಲಂಬಾಡಿ/ಮಾತುರಿ, ತೆಲಂಗಾಣ; ಲಾವಣಿ, ಹೋಲಿ–ಮಹಾರಾಷ್ಟ್ರ; ಸಿದ್ದಿ ಧುಮಾಲ್–ಗುಜರಾತ್; ಸಂಬಲ್‌ಪುರಿ–ಒರಿಸ್ಸಾ; ತಿರುವತ್ತಿರಕಳಿ ಮತ್ತು ಒಪ್ಪಾನ–ಕೇರಳ; ಬಿಹು, ಗುಸಾನ್–ಅಸ್ಸಾಂ; ನೋರ್ತಾ ಮತ್ತು ಸೈತಾವ್–ಮಧ್ಯಪ್ರದೇಶ್; ರಥ್ವ–ಗುಜರಾತ್; ತಪ್ಪಾಟ್ಟಗುಳು–ಆಂಧ್ರಪ್ರದೇಶ, ಕರಗಂ, ಕಾವಾಡಿ, ತಪ್ಪಟ್ಟಮ್–ತಮಿಳುನಾಡು

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30 : ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),
ಬೆ. 10 ರಿಂದ 5 : ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8 : ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)

ಬನ್ನಿಮಂಟಪದ ಬಾನಂಗಳದಲ್ಲಿ ಹೆಲಿಕಾಪ್ಟರ್‌ಗಳ 'ಸ್ಟಂಟ್' ರಿಹರ್ಸಲ್

ನಾಳೆ, ಅ.1ಕ್ಕೆ ಏರ್ ಶೋ



ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಏರ್ ಶೋ ಅಂಗವಾಗಿ ಭಾರತೀಯ ವಾಯುಸೇನೆಯ ಸಾರಂಗ್ ತಂಡದ ಐದು ಹೆಲಿಕಾಪ್ಟರ್‌ಗಳು ವಿವಿಧ ಸಾಹಸಮಯ ಸ್ಟಂಟ್ ಪ್ರದರ್ಶಿಸಿದವು.

ಮೈಸೂರು, ಸೆ.25(ಎಂಟಿವೈ)–ಬಾನಂಗಳದಲ್ಲಿ ಲೋಹದ ಹಕ್ಕಿಗಳು ಮೈನವಿರೇಳಿಸುವ ಸಾಹಸಮಯ ಸ್ಟಂಟ್ ಪ್ರದರ್ಶನ ನೀಡುವ ಮೂಲಕ ನೆರೆದಿದ್ದ ಅಪಾರ ಸಂಖ್ಯೆಯ ಜನರನ್ನು ರೋಮಾಂಚನಗೊಳಿಸಿದವು.

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಸೆ.27ರಂದು ನಡೆಯುವ ವೈಮಾನಿಕ ಪ್ರದರ್ಶನದ ಅಂಗವಾಗಿ ಗುರುವಾರ ಭಾರತೀಯ ವಾಯುಸೇನೆಯ 'ಸಾರಂಗ್' ಹೆಲಿಕಾಪ್ಟರ್ ತಂಡ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಆಗಸದಲ್ಲಿ ರೋಮಾಂಚನಕಾರಿ ಸ್ಟಂಟ್ ನಡೆಸುವ ಮೂಲಕ ನೆರೆದಿದ್ದ ಅಪಾರ ಸಂಖ್ಯೆ ಜನರನ್ನು ನಿಬ್ಬೆರಗಾಗಿಸಿತು. 'ಸಾರಂಗ್' ತಂಡದ ಐದು ಹೆಲಿಕಾಪ್ಟರ್‌ಗಳು ಕೆಂಪು ಮತ್ತು ಬಿಳಿ ಬಣ್ಣದ ಹೊಗೆ ಸೂಸುತ್ತಾ ವಿವಿಧ ಭಂಗಿಗಳಲ್ಲಿ ಸ್ಟಂಟ್ ಮಾಡಿ, ರೋಮಾಂಚನಕಾರಿ ಅನುಭವ ನೀಡಿದವು.

ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಮಧ್ಯಾಹ್ನ 3.45ಕ್ಕೆ 6 ಹೆಲಿಕಾಪ್ಟರ್‌ಗಳು ಸಾಲಾಗಿ ಬಂದು ಬನ್ನಿಮಂಟಪದ ಪಂಜಿನ ಕವಾಯತು ಮೈದಾನವನ್ನ ಎರಡು ಸುತ್ತು ಹೊಡೆದು ಮಳೆ ಬರುತ್ತಿದ್ದ ಹಿನ್ನೆಲೆಯಲ್ಲಿ ವಾಪಸ್ಸಾಗಿ, ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಿವೆ. ಹೆಲಿಕಾಪ್ಟರ್‌ಗಳು ವಾಪಸ್ಸಾದವು ಎಂದು ಭಾವಿಸಲಾಗಿತ್ತು. ಆದರೆ, ಮತ್ತೆ ಸಂಜೆ 4.10ಕ್ಕೆ ವಿಮಾನ ನಿಲ್ದಾಣದಿಂದ ಐದು ಹೆಲಿಕಾಪ್ಟರ್‌ಗಳು ಟೇಕ್ ಆಫ್ ಆಗಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಬಳಿ ಬಂದು ರೋಮಾಂಚನಕಾರಿ ಪ್ರದರ್ಶನ ನೀಡಿದವು.

ಮೈದಾನದಲ್ಲಿ ಏರ್ ಶೋ ತಾಲೀಮು ನೋಡಲು ಬಂದಿದ್ದ ಅಪಾರ ಸಂಖ್ಯೆಯ ಜನರಿಗೆ ವಾಯುಸೇನೆಯ ಚಿಹ್ನೆಯುಳ್ಳ ತಿಳಿ ಕೆಂಪು ಬಣ್ಣದ ಸಮವಸ್ತ್ರ ಧರಿಸಿದ್ದ ಹರಿಯಾಣ ಮೂಲದ ಫ್ಲೈಟ್ ಲೆಫ್ಟಿನೆಂಟ್ ಪಲ್ಲವಿ, ಏರ್ ಶೋ ತಾಲೀಮಿಗೆ ತಕ್ಕಂತೆ ಡಿಜೆ ಮಾದರಿ ಮ್ಯೂಸಿಕ್ ಪ್ಲೇ ಮಾಡುವುದರೊಂದಿಗೆ ವೈಮಾನಿಕ ಪ್ರದರ್ಶನ ನೀಡಿದ ಐದು ಹೆಲಿಕಾಪ್ಟರ್‌ಗಳ ವಿಶೇಷತೆ, ಪೈಲಟ್‌ಗಳ ಹೆಸರಿನೊಂದಿಗೆ ಅವು ಪ್ರದರ್ಶಿಸಿದ ವಿನ್ಯಾಸಗಳ ಬಗ್ಗೆ ಇಂಗ್ಲೀಷ್‌ನಲ್ಲಿ ವೀಕ್ಷಕ ವಿವರಣೆ ನೀಡುತ್ತಾ ಮಧ್ಯೆ ಮಧ್ಯೆ ಕನ್ನಡದ ಪದಮಂಜ ಪ್ರಯೋಗಿಸುತ್ತಾ ಮೈದಾನದಲ್ಲಿ ನೆರೆದಿದ್ದವರನ್ನು ಆಕರ್ಷಿಸಿದರು.

ದಸರಾ ಏರ್ ಶೋಗೆ ಪಾಸ್ ಇದ್ದರೆ ಮಾತ್ರ ಪ್ರವೇಶ ಎಂದು ಜಿಲ್ಲಾಡಳಿತ ಈಗಾಗಲೇ ಘೋಷಣೆ ಮಾಡಿರುವುದರಿಂದ ಪಾಸ್ ಸಿಗುವುದೋ ಇಲ್ಲವೋ ಎಂಬ ಅನುಮಾನದಿಂದ ಸಾವಿರಾರು ಮಂದಿ ಮೈದಾನದಲ್ಲಿ ಜಮಾಯಿಸಿ ಏರ್ ಶೋ ತಾಲೀಮು ಕಣ್ತುಂಬಿಕೊಂಡರು.

ಸತತ 20 ನಿಮಿಷಗಳ ಕಾಲ ಸಾರಂಗ್‌ನ ಐದು ಹೆಲಿಕಾಪ್ಟರ್‌ನ ತಂಡ ಆಗಸದಲ್ಲಿ ಕಸರತ್ತು ನಡೆಸುವ ಮೂಲಕ ನೆರೆದಿದ್ದ ಜನರ ಮೈ ಜುಮ್ ಎನ್ನುವಂತೆ ಅತ್ಯಂತ ತಳ ಮಟ್ಟದಲ್ಲಿ ಸಾಹಸ ಪ್ರದರ್ಶಿಸಿತು. ಹಾದುಹೋದ ಲೋಹದ ಹಕ್ಕಿಗಳ ಕಣ್ತುಂಬಿಕೊಂಡ ಜನರು, ತಮ್ಮ ಮೊಬೈಲ್ ನಲ್ಲಿ ಸೆರೆ ಹಿಡಿಯುವ ಪ್ರಯತ್ನ ಮಾಡಿದರು. ಪ್ರೀತಿಯ ಸಂಕೇತವಾದ ಹೃದಯ, ವಜ್ರದ ಚಿತ್ತಾರದೊಂದಿಗೆ ಬಾನಂಗಳಕ್ಕೆ ಏರಿ ಬೀಳುವ, ಮತ್ತೇ ಮುಗಿಲೆತ್ತರಕ್ಕೆ ಹಾರುವ, ಎಕ್ಸ್ ಕ್ರಾಸ್ ಮಾದರಿಯಲ್ಲಿ ಪರಸ್ಪರ ಡಿಕ್ಕಿ ಹೊಡೆಯುವ ಮಾದರಿಯಲ್ಲಿ ಮುಖಾಮುಖಿಯಾಗುತ್ತಲೇ ಸಾಗುವ ದೃಶ್ಯಗಳು ನೆರೆ ದಿದ್ದವರ ಮೈ ರೋಮಾಂಚನಗೊಳಿಸುವಂತಿತ್ತು

ಸಾರಂಗ್ ತಂಡ: ಕ್ಯಾಪ್ಟನ್ ಮಿಶ್ರಾ ನೇತೃತ್ವದಲ್ಲಿ ಆರು ಹೆಲಿಕಾಪ್ಟರ್‌ಗಳೊಂದಿಗೆ 25 ಮಂದಿ ಯೋಧರು ಏರ್ ಶೋದಲ್ಲಿ ಪ್ರದರ್ಶನ ನೀಡಲು ಆಗಮಿಸಿದ್ದು, ಐದು ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಲಿವೆ. ಒಂದು ಹೆಲಿಕಾಪ್ಟರ್ ಅನ್ನು ತುರ್ತು ಸೇವೆಗೆ ಬಳಸಿಕೊಳ್ಳಲು ಕಾಯ್ದಿರಿಸಲಾಗಿತ್ತು.

ಏರ್ ಶೋ: ಸೆ.27 ಮತ್ತು ಅ.1ರಂದು ಸಂಜೆ 4 ಗಂಟೆಗೆ ವೈಮಾನಿಕ ಪ್ರದರ್ಶನ ನಡೆಯಲಿದೆ. ಸಾರಂಗ್ ಹೆಲಿಕಾಪ್ಟರ್‌ಗಳ ಸಾಹಸ ಪ್ರದರ್ಶನದೊಂದಿಗೆ ಸೂರ್ಯ ಕಿರಣ್ ಜೆಟ್‌ಗಳ ಹಾರಾಟವೂ ಇರಲಿದೆ. ಎರಡು ಬಾರಿ ವೈಮಾನಿಕ ಪ್ರದರ್ಶನ ಕಣ್ತುಂಬಿಕೊಳ್ಳುವ ಅವಕಾಶ ಮೈಸೂರಿಗರಿಗೆ ಲಭಿಸಿದೆ.


ಹದ್ದು ಓಡಿಸಲು ಬಾಣ–ಬಿರುಸು ಪ್ರಯೋಗ

ಏರ್ ಶೋ ತಾಲೀಮು ಸಂಜೆ 4 ಗಂಟೆಗೆ ಆರಂಭವಾಗುವ ಮುನ್ನವೇ ಪಂಜಿನ ಕವಾಯತು ಮೈದಾನದಲ್ಲಿ ಮಧ್ಯಾಹ್ನ 3.45ಕ್ಕೆ ಬಾಣ–ಬಿರುಸು ಸಿಡಿಸುವ ಮೂಲಕ ಹದ್ದು ಹಾಗೂ ಇನ್ನಿತರ ಪಕ್ಷಿಗಳನ್ನು ಚದುರಿಸಲಾಯಿತು. ಮೈದಾನದ ನಾಲ್ಕು ದಿಕ್ಕಿನಲ್ಲಿ ಸುಮಾರು 30ಕ್ಕೂ ಹೆಚ್ಚು ಬಾಣ–ಬಿರುಸು ಹಾರಿಸಿ, ಮೈದಾನದ ಆಗಸದಲ್ಲಿ ಯಾವುದೇ ಪಕ್ಷಿಗಳ ಹಾರಾಟ ಇಲ್ಲದೇ ಇರುವುದನ್ನು ಖಚಿತಪಡಿಸಿಕೊಂಡ ಬಳಿಕ ವೈರ್‌ಲೆಸ್‌ನಲ್ಲಿ ಮಾಹಿತಿ ನೀಡಿದ ಕೆಲವೇ ನಿಮಿಷದಲ್ಲಿ ಲೋಹದ ಹಕ್ಕಿಗಳ ಕಲರವ ಆರಂಭವಾಯಿತು.



ವೀಕ್ಷಕ ವಿವರಣೆ ನೀಡುತ್ತಿದ್ದ ಫ್ಲೈಟ್ ಲೆಫ್ಟಿನೆಂಟ್ ಪಲ್ಲವಿ.

ದಸರಾ ಕುಸ್ತಿ ಅಖಾಡದಲ್ಲಿ ಪೈಲ್ವಾನರ ಭುಜಬಲ ಪರಾಕ್ರಮ



ಮೈಸೂರು ದಸರಾ ಕುಸ್ತಿ ಅಖಾಡದಲ್ಲಿ ಸೆಣಸಾಡಿದ ಪೈಲ್ವಾನರು.

ಮೈಸೂರು, ಸೆ.25– ದಸರಾ ಮಹೋತ್ಸವದ ಅಂಗವಾಗಿ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕುಸ್ತಿ ಪಂದ್ಯಾವಳಿಯಲ್ಲಿ ಗುರುವಾರವೂ ಪೈಲ್ವಾನರು ರೋಚಕ ಸೆಣಸಾಟ ನಡೆಸಿದರು.

ಪಂದ್ಯಾವಳಿಯ ನಾಲ್ಕನೇ ದಿನವಾದ ಇಂದು ದಸರಾ ಕುಸ್ತಿ ಅಖಾಡದಲ್ಲಿ ಗದಗದ ಪೈಲ್ವಾನ್ ಮುತ್ತು ಹಾಗೂ ಬೆಳಗಾವಿಯ ಪೈ.ಗಂಗಾಧರ್ ನಡುವಿನ ಮಾರ್ಫಿಟ್ ಕುಸ್ತಿಯಲ್ಲಿ 20 ನಿಮಿಷಗಳಲ್ಲಿ ಪೈ.ಮುತ್ತು ಗೆದ್ದು ಬೀಗಿದರು. ಈ ವೇಳೆ ಕುಸ್ತಿ ಪ್ರೇಮಿಗಳ ಶಿಳ್ಳೆ, ಚಪ್ಪಾಳೆ, ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಇದರೊಂದಿಗೆ 25ಕ್ಕೂ ಹೆಚ್ಚು ಪಂದ್ಯಗಳಲ್ಲಿ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ 50ಕ್ಕೂ ಹೆಚ್ಚು ಪೈಲ್ವಾನರು ಮದಗಜಗಳಂತೆ ಸೆಣಸಾಡಿದರು. ಇದರಲ್ಲಿ 16 ಕುಸ್ತಿ ಪಂದ್ಯಗಳು ಸಮಬಲದಲ್ಲಿ ಅಂತ್ಯಗೊಂಡರೆ, ಸೀಹಳ್ಳಿ ಪೈ.ರವಿಕುಮಾರ್ 30 ಸೆಕೆಂಡ್‌ನಲ್ಲಿ ಎದುರಾಳಿ ಚಿತ್ರದುರ್ಗ ಪೈ.ಮೊಹಮದ್ ಅವರನ್ನು ಸೋಲಿಸಿದರು. ರಮ್ಮನಹಳ್ಳಿ ಪೈ.ಚಂದ್ರು ಎದುರಾಳಿ ಹುಣಸೂರಿನ ಪೈ.ಚಂದ್ರಶೇಖರ್ ಅವರನ್ನು 40 ಸೆಕೆಂಡ್‌ಗಳಲ್ಲಿ ಮಣಿಸಿದರೆ, ಮೆಲ್ಲಹಳ್ಳಿ ಪೈ.ಶ್ರೀನಿವಾಸ ವಿರುದ್ಧ ರಾಜೀವ್‌ನಗರ ಪೈ.ಸಾಸಿಮ್ ಅಲ್ಲಂ 3 ನಿಮಿಷದಲ್ಲಿ ಗೆಲುವು ಸಾಧಿಸಿದರು. ಪಾಲಹಳ್ಳಿ ಪೈ.ನಂದಕಿಶೋರ ವಿರುದ್ಧ ಮೈಸೂರು ಪೈ.ಮೊಹಮ್ಮದ್ ಗಂಯಾಜುದಿನ್, ಕ್ಯಾತಮಾರನಹಳ್ಳಿ ಪೈ.ಸಂಜಯ್ ವಿರುದ್ಧ ಕಳಲೆಯ ಪೈ.ಮಹದೇವಸ್ವಾಮಿ, ರಾಜೇಂದ್ರ ನಗರ ಪೈ.ಫುರ್ಖಾನ್ ವಿರುದ್ಧ ಸುಣ್ಣದಕೇರಿ ಪೈ.ಸಿದ್ಧಾರ್ಥ ನಾಯಕ್, ಬೆಳಗೋಳ ಪೈ.ಚಂದು ವಿರುದ್ಧ ಕಳಲೆ ಪೈ.ರಂಗರಾಜು ಗೆದ್ದು ಬೀಗಿದರು.

ಮಹಿಳಾ ಕುಸ್ತಿಯೂ ರೋಚಕ: ಮೈಸೂರಿನ ಪೈ.ಅಲೀನಾ ಮತ್ತು ಬನ್ನೂರು ಪೈ.ಶಿಕ್ಷಾ ನಡುವೆ ನಡೆದ ಮಹಿಳಾ ನಾಡಕುಸ್ತಿ ನೆರೆದಿದ್ದವರ ಗಮನ ಸೆಳೆಯಿತು. ಪೈ.ಶಿಕ್ಷಾ ಎದುರಾಳಿ ಪೈ.ಅಲೀನಾ ಅವರನ್ನು ಕೇವಲ 40 ಸೆಕೆಂಡ್‌ಗಳಲ್ಲಿ ಸೋಲಿಸಿದರೆ, ಬೆಂಗಳೂರಿನ ಪೈ.ಸ್ಫೂರ್ತಿ ಮತ್ತು ಮಂಗಳೂರಿನ ಪೈ.ಶಾಂಭವಿ ನಡುವೆ ನಡೆದ ಕುಸ್ತಿ ಸಮಬಲದಲ್ಲಿ ಮುಕ್ತಾಯವಾಯಿತು.

ಮೈಸೂರು ಮಾನ್ಸೂನ್ ರೇಸ್

8ನೇ ದಿನ, ಶುಕ್ರವಾರ, 26–09–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ವಲರೊಸೋ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1 ಅನ್‌ಫರ್‌ಗೆಟ್ಟಬಲ್ ಸ್ಟಾರ್ 2. ಸೆರೆಮೊನಿಯಲ್

II. ಸನ್ ಆಫ್ ದಿ ಲೈಟ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮೈಸೂರ್ ಬೇಸ್ಡ್ ಹಾರ್ಸ್. ಮ.2.30ಕ್ಕೆ
1 ಮೈ ಲೈಫ್ ಮೈ ರೂಲ್ 2. ವಾರಿಯರ್ ವುಮನ್

III. ಜಯನಗರ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಮೆಫನಾ 2 ಸೊರೆಂಟೊ ಸಿಕ್ರೇಟ್

IV ಮೇ, ಸರ್‌ದಾರ್ ಮಹದೇವಯ್ಯ ಮೆಮೋರಿಯಲ್ ಟ್ರೋಫಿ –1200ಮೀ. ರೇಟೆಡ್ 40/65. ಮೈಸೂರ್ ಬೇಸ್ಡ್ ಹಾರ್ಸ್. ಮ.3.30ಕ್ಕೆ
1. ಓಷನ್ 2. ಫಾಲ್ಕನ್ ಫ್ಯೂರಿ

V. ಮೈಸೂರ್ 1000 ಗಿನ್ನೀಸ್–1600 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1 ಇಂಡಿಯನ್ ಬ್ರೋಕೆಡ್ 2. ಮಿರಾಕಲ್ ಸ್ಟಾರ್


VI. M.B. ಅಪ್ಪಯ್ಯ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ಪಟ್ಟ. ಸಂ.4.30ಕ್ಕೆ
1 ಪವರ್ ಆಫ್ ಬ್ಯೂಟಿ 2 ಕನ್ಯಾರಾಶಿ

VII. ಹಾವೇರಿ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಮೈಸೂರ್ ಬೇಸ್ಡ್ ಹಾರ್ಸ್. ಸಂ.5.00ಕ್ಕೆ
1 ಮೂನ್ ಲೈಟ್ ಕ್ವೀನ್ 2 ಕೋರ್ಟ್ ಜಸ್ಟರ್

ದಿನದ ಅತ್ಯುತ್ತಮ	ಇಂಡಿಯನ್ ಬ್ರೋಕೆಡ್
ಡಬ್ಬಲ್	ಪವರ್ ಆಫ್ ಬ್ಯೂಟಿ, ಮೂನ್‌ಲೈಟ್ ಕ್ವೀನ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್ ಸ್ಟರ್ ಪಿಜಿಸಿ

ಪುಸ್ತಕ ಮೇಳದಲ್ಲಿ 'ನಾನೆಂಬುದು ನಾನಲ್ಲ', 'ನಾವು ನಮ್ಮನುಡಿ', 'ನೀವು ಕಾಣಿರೇ ಮತ್ತು ಮಲ್ಲಿಗೆ' ಕೃತಿ ಬಿಡುಗಡೆ



'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಗುರುವಾರ 3 ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು, ಸೆ.25 (ಎಂಕೆ)– ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಮೈಸೂರು ದಸರಾ ಮಹೋತ್ಸವ ಪುಸ್ತಕ ಮೇಳ ಉಪಸಮಿತಿ ವತಿಯಿಂದ ಆಯೋಜಿಸಿರುವ 'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಗುರುವಾರ 3 ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಸಣ್ಣರಾಮ ರಚಿತ 'ನಾನೆಂಬುದು ನಾನಲ್ಲ' ಕೃತಿಯನ್ನು ಸತ್ಯಮಂಗಲ ಮಾದೇವ ಬಿಡುಗಡೆಗೊಳಿಸಿದರೆ, ಮೇಟಿ ಮಲ್ಲಿಕಾರ್ಜುನ ರಚಿತ 'ನಾವು ನಮ್ಮನುಡಿ' ಕೃತಿಯನ್ನು ಡಾ.ಬಸು ಬೇವಿನಗಿಡ ಹಾಗೂ ಕೆ.ವೈ. ನಾರಾಯಣ ಸ್ವಾಮಿ ರಚಿತ 'ನೀವು ಕಾಣಿರೇ ಮತ್ತು ಮಲ್ಲಿಗೆ' ಕೃತಿಯನ್ನು ಡಾ.ಮಮತಾ ಜಿ ಸಾಗರ ಬಿಡುಗಡೆ ಮಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಎಲ್ ಎನ್ ಮುಕುಂದರಾಜ್, ಬಿಡುಗಡೆಯಾದ ಕೃತಿಗಳ ಕುರಿತು ಮಾತನಾಡಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಆಡಳಿತಾಧಿಕಾರಿ ಕೆ.ಬಿ.ಕಿರಣ್ ಸಿಂಗ್, ಉಪ ಸಮಿತಿ ಸದಸ್ಯರಾದ ಕವಯತ್ರಿ ಸುಚಿತ್ರ ಹೆಗಡೆ, ರಾಜಶೇಖರ ಕದಂಬ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ ಚಂದ್ರಶೇಖರ್ ಮತ್ತಿತರರಿದ್ದರು.

ಶ್ರದ್ಧಾಂಜಲಿ: ಪುಸ್ತಕಗಳ ಬಿಡುಗಡೆಗೂ ಮುನ್ನ ಸರಸ್ವತಿ ಸಮ್ಮಾನ್ ಪುರಸ್ಕೃತರೂ ಆದ ಖ್ಯಾತ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ಪತ್ರಿಕಾ ಪ್ರಕಟಣೆ

ಕಸುವಿನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂಜನಗೂಡು ತಾಲ್ಲೂಕು ಇದರ ಚುನಾವಣೆ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯನ್ನು ದಿನಾಂಕ: 12–10–2025 ರ ಭಾನುವಾರ ಬೆಳಗ್ಗೆ 9–00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ ಸಂಘದ ಕಛೇರಿ ಆವರಣ ಇಲ್ಲಿ ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ: 28–09–2025 ರಿಂದ 04–10–2025 ರವರೆಗೆ ಬೆಳಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 2–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರಿಗೂ ತಲುಪಿಸಲು ಸಂಘದ ಕಾರ್ಯದರ್ಶಿಗೆ ಸೂಚಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಆಫೀಸರ್ ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ವಸಂತ್ ಕುಮಾರ್.ಎಸ್), ರಿಟರ್ನಿಂಗ್ ಆಫೀಸರ್



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಸ್. ರಾಮಚಂದ್ರ ರವರು

ಜನನ 01–05–1949 | ಮರಣ 23–09–2025

ಪ್ರಥಮ ದರ್ಜೆ ಗುತ್ತಿಗೆದಾರರು PWD
ಬ್ರಹ್ಮಕುಮಾರರು,
ಅಧ್ಯಕ್ಷರು ಮತ್ತು ಕಟ್ಟಡ ನಿರ್ಮಾಣಕಾರರು, ಶಂಕರಮಠ, ಪಾಲಹಳ್ಳಿ ಅಧ್ಯಕ್ಷರು,
ಶಂಭುಲಿಂಗೇಶ್ವರ ದೇವಸ್ಥಾನ, ಪಾಲಹಳ್ಳಿ ಮಾಜಿ ಅಧ್ಯಕ್ಷರು, ಲಯನ್ಸ್ ಕ್ಲಬ್ ಆಫ್ ಮೈಸೂರು
ಕ್ಲಾಸಿಕ್ ಸರ್ವಿಸ್ ಟ್ರಸ್ಟ್ ಮಾಜಿಛೇರನ್, ಲಯನ್ಸ್ ಕ್ಲಬ್ ಆಫ್ ಮೈಸೂರು ಕ್ಲಾಸಿಕ್

ಶ್ರೀರಂಗಪಟ್ಟಣ ತಾ॥, ಬೆಳಗೊಳ ಹೋ॥, ಪಾಲಹಳ್ಳಿ ಗ್ರಾಮದ
ಶ್ರೀ ಲೇ॥ ಸಿದ್ದರಾಮೇಗೌಡ ಮತ್ತು
ಶ್ರೀಮತಿ ಲೇ॥ ಗೌರಮ್ಮನವರ ಸೊಸೆ ಶ್ರೀಮತಿ ಎಂ. ಯಶೋಧರವರು
ಮಾಡುವ ವಿಜ್ಞಾಪನೆಗಳು

ದಿ: 23–09–2025 ಮಂಗಳವಾರದಂದು ನಮ್ಮ ಪೂಜ್ಯ ಪತಿಯವರಾದ ಶ್ರೀ ಎಸ್. ರಾಮಚಂದ್ರರವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಭೂಶಾಂತಿ ಕಾರ್ಯವನ್ನು ದಿ: 27–09–2025ನೇ ಶನಿವಾರ ಬೆಳಿಗ್ಗೆ 10:00 ಘಂಟೆಗೆ ಹಾಗೂ ಭೋಜನವನ್ನು ಮಧ್ಯಾಹ್ನ 12:30 ಘಂಟೆಗೆ ಪಾಲಹಳ್ಳಿಯ ತೋಟದಲ್ಲಿ ಏರ್ಪಡಿಸಲಾಗಿದೆ.

11ನೇ ದಿನದ ಕಾರ್ಯವನ್ನು ದಿ: 03–10–2025 ಶುಕ್ರವಾರ ಬೆಳಿಗ್ಗೆ 10:00 ಘಂಟೆಗೆ ಹಾಗೂ ಭೋಜನವನ್ನು ಮಧ್ಯಾಹ್ನ 12:30 ಘಂಟೆಗೆ ನಮ್ಮ ಸ್ವಗೃಹ, 'ಶಿವಧಾಮ ರೆಸಿಡೆನ್ಸಿ', ನಂ. 53, 2ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು–570012 ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಕೇಳಿಕೊಳ್ಳುತ್ತೇವೆ.

ಇಂತಿ ದುಃಖತಪ್ತರು :
ಮೃತರ ಸಹೋದರರು, ಸಹೋದರಿಯರು, ಮಕ್ಕಳು,
ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು.
ಮೊ: 9902505432, 9916469776, 9886000624

Change of Name

I, Mazahar Ali Syed Jani, S/o Syed Jani, residing at No.2982, 2nd Cross, Sajjad Ali Street, Mandi Mohalla, Mysuru-570001, hereby state & affirm on oath that, I have changed my name to Mazahar Ali vide affidavit sworn in front of Notary L.N.Rajendran dated 25-09-25, Mysuru. In future, I will be known, called & identified as Mazahar Ali.

Sd/- Mazahar Ali